ಅವರಿಗೆ ಪರಿಹಾರವನ್ನಾದರೂ ಕೊಡಬೇಕಲ್ಲವೆ? ಅವರು ಬದುಕಬೇಕಲ್ಲವೆ? ಅವರು loan ತೆಗೆದುಕೊಂಡಿರುತ್ತಾರೆ. ನೀವು ಅಧಿಕಾರಿಗಳ ಜೊತೆ ಚರ್ಚಿಸಿ ತೀರ್ಮಾನ ಮಾಡಿ. ನೀವು consider ಮಾಡಬೇಕು.

(ಗೊಂದಲ)

ಶ್ರೀ ಯು.ಟಿ. ಖಾದರ್ : ಮಲ್ಪೆ ಬೀಚ್‌ನಲ್ಲಿ ಮಾದಕ ದ್ರವ್ಯ ಸೇವನೆ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ನೀವು ನೋಟಿಸ್ ಕೊಡದೆ ನೇರವಾಗಿ ಪ್ರಸ್ತಾಪ ಮಾಡಿದರೆ ಹೇಗೆ? ಮಧ್ಯಾಹ್ನ ಪ್ರಸ್ತಾಪ ಮಾಡಿ.

(ಗೊಂದಲ)

ಅಧ್ಯಕ್ಷರು : ಇಲ್ಲ. ನೀವು ನೋಟಿಸ್ ಕೊಡದೆ ಡಿಢೀರ್ ಆಗಿ ಎದ್ದು ನಿಂತು ಹೇಳಿದರೆ ಹೇಗೆ? ಮಧ್ಯಾಹ್ನ ತೆಗೆದುಕೊಳ್ಳೋಣ. ಈಗ ಅವಕಾಶವಿಲ್ಲ.

(ಗೊಂದಲ)

4. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಅಕ್ರಮವಾಗಿ ಕಬ್ಬಿಣದ ಅದಿರನ್ನು ರಫ್ತು ಮಾಡಿರುವ ಬಗ್ಗೆ ಲೋಕಾಯುಕ್ತವು ಸರ್ಕಾರಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದು ಸದರಿ ಗಣಿಗಾರಿಕೆಯಲ್ಲಿ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಶಾಮೀಲಾಗಿದ್ದು ಸಾವಿರಾರು ಕೋಟಿ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿರುವುದಾಗಿ ವರದಿಯಲ್ಲಿ ತಿಳಿಸಿದ್ದು, ಸದರಿ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತ ಅಂತಿಮ ವರದಿಯನ್ನು ದಿನಾಂಕ: 27.7.2011ರಲ್ಲಿ ಅಂದಿನ ಲೋಕಾಯುಕ್ತರಾದ ನ್ಯಾಯಮೂರ್ತಿ ಸಂತೋಷ್ ಎನ್. ಹೆಗ್ಡೆಯವರು ಮುಖ್ಯ

ಕಾರ್ಯದರ್ಶಿಯವರಿಗೆ submit ಮಾಡಿದ್ದಾರೆ. ಈಗಾಗಲೇ ವರದಿಯನ್ನು submit ಮಾಡಿ 6 ತಿಂಗಳಿಗಿಂತಲೂ ಹೆಚ್ಚಾಗಿದೆ. ಲೋಕಾಯುಕ್ತ ಕಾಯ್ದೆ ಪ್ರಕಾರ ಲೋಕಾಯುಕ್ತರು ಸರ್ಕಾರಕ್ಕೆ ವರದಿ ಕೊಟ್ಟಮೇಲೆ 3 ತಿಂಗಳೊಳಗೆ ಆ ವರದಿಯ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ಲೋಕಾಯುಕ್ತರಿಗೆ ತಿಳಿಸಬೇಕು. ಈಗಾಗಲೇ 3 ತಿಂಗಳು ಮುಗಿದುಹೋಯಿತು. ಕಾನೂನು ಏನು ಹೇಳುತ್ತದೆ ಎಂದರೆ, ಒಂದು ವೇಳೆ ಮೂರು ತಿಂಗಳೊಳಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಲೋಕಾಯುಕ್ತಕ್ಕೆ ತಿಳಿಸದಿದ್ದರೆ, the presumption is, it is deemed to be accepted. They know the provision of the Act very well. ಈಗ ಅದು accepted ಎಂದಾಗುತ್ತದೆ. The government has accepted the report, since no action has been taken, and action taken has not been reported to the Lokayukta within 90 days from the date of the submission of report to the government. ಈಗ ಆಗಿದೆ. ಸರ್ಕಾರ ಏನು ಹೇಳುತ್ತದೆ ಎಂದರೆ, ನಾವು ಲೋಕಾಯುಕ್ತ ವರದಿ ಮೇಲೆ ಅಪರ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಸಮಿತಿ ರಚಿಸಿದ್ದೆವು. ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಆ report ನಲ್ಲಿ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ರಾಜಕಾರಣಿಗಳ ಮೇಲೆ, ಅಂದು ಇದ್ದ ಮುಖ್ಯಮಂತ್ರಿಯವರ ಮೇಲೆ, ಮಂತ್ರಿಗಳ ಮೇಲೆ, MLA ಗಳ ಮೇಲೆ ಎಲ್ಲರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ High Power Committee ಗೆ ಬರುವುದಿಲ್ಲ. ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಬಹುದು ಎಂದು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆಂದು ಹೇಳುತ್ತಾರೆ. ಅದಾದ ಮೇಲೆ cabinet ನಲ್ಲಿ ಇವರು ಒಂದು decision ತೆಗೆದುಕೊಂಡು ಲೋಕಾಯುಕ್ತಕ್ಕೆ ಈ ರಾಜಕಾರಣಿಗಳ ಮೇಲೆ ಆವತ್ತು ಇದ್ದ ಮುಖ್ಯಮಂತ್ರಿಯವರ ಮೇಲೆ, ಮಂತ್ರಿಗಳ ಮೇಲೆ ಯಾವ ತರಹ ಕ್ರಮ ತೆಗೆದುಕೊಳ್ಳಬೇಕು, ಏನು ಮಾಡಬೇಕು ಎಂದು clarification ಕೇಳಿದ್ದರು. ಈ clarifications ಕೇಳುವುದಕ್ಕೆ ಬರುವುದೇ ಇಲ್ಲ. ಅಲ್ಲಿ ಎಲ್ಲೂ ಇಲ್ಲ. Report under Section 12 of the Lokayukta Act, "the Competent authority shall examine the report forwarded to it under sub-section (3) and within three months of the date of receipt of the report, intimate or cause to be intimated to the Lokayukta or the Upalokayukta the action taken or proposed to be taken on the the basis of the report". It is very very clear. ಅದು ಬಿಟ್ಟರೆ ಏನೂ

ಹೇಳುವುದಿಲ್ಲ. ಆಮೇಲೆ ಮಾನ್ಯ ಅಧ್ಯಕ್ಷರೇ, Section 13 ನಲ್ಲಿ where the competent authority is the State government or the Chief Minister that may be accepted or rejected. In other case the competent authority shall send a copy of the such report by the State Government, it may accept or reject the same. If it is not rejected within a period of 3 months from the date of receipt of the copy of the report as the case may be it shall be deemed to have been accepted on the expiry of the said period of 3 months. This is very clear from the provisions of Lokayukta Act 1984.

When such being the case ಲೋಕಾಯುಕ್ತರವರಿಗೆ ಅಕ್ರಮ ಗಣಿಗಾರಿಕೆಯನ್ನು refer ಮಾಡಿದ ಮೇಲೆ ದಿನಾಂಕ: 18.12.2008ರಲ್ಲಿ ಒಂದು report ಕೊಡುತ್ತಾರೆ. ಅದು first report. Second report ಅನ್ನು ದಿನಾಂಕ: 27.7.2011ರಲ್ಲಿ ಕೊಡುತ್ತಾರೆ. ಲೋಕಾಯುಕ್ತರ report ನ 11ನೇ ಪುಟದಲ್ಲಿ ಅವರು ಕೆಲವು ಶಿಫಾರಸ್ಸುಗಳನ್ನು ಮಾಡಿದ್ದಾರೆ. Apart from the above said report I had conveyed my compliance, suggestions and recommendations. But, I am sorry to say that apart from filing criminal case against some mining companies, no concrete action has been taken. ಇದು ನಾನು ಹೇಳಿರುವುದಲ್ಲ. ಲೋಕಾಯುಕ್ತ ವರದಿಯ para 11ರಲ್ಲಿ ಹೇಳಿರುವ ಮಾತಿದು. No concrete action has been taken consequent to which the illegal mining pointed out in the report herein. The illegal mining pointed out herein above is continued to exist ಇದು important. As a matter of fact, the reasons to be mentioned herein, it will be supported by documents. After my first report, illegalities in mining has increased and there is a total failure of supervisory machinery. ಮಾನ್ಯ ಸಭಾಧ್ಯಕ್ಷರೆ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ರಾಜ್ಯದ ಗಮನಕ್ಕೆ ತರುತ್ತಿದ್ದೇನೆ, ರಾಜ್ಯದ 6 ಕೋಟಿ ಜನರೂ ಇದನ್ನು ನೋಡಬೇಕು. Total failure of supervisory machinery in controlling of the illegalities and irregularities. That means to say we had to infer that the government has failed to take action. ಅಂದರೆ, 2008ರಲ್ಲಿ ಕೊಟ್ಟಿರುವ ಅನೇಕ suggestions, ಎಚ್ಚರಿಕೆಗಳು, ಸರ್ಕಾರ ಏನು ಮಾಡಬೇಕೆಂದು ಹೇಳಿದ್ದರೂ ಕೂಡ 2008ರಿಂದ 2011ರವರೆಗೆ illegal mining is

going on, illicit export is going on. As a matter of fact 2009–10ರಲ್ಲಿ illicit export is more compared to previous years. The inference given is that the Government has colluded. Frist report ಎಂದು ಅವರು ಹೇಳಿದ ಮೇಲೆ This is my first submission, ಇದು ನನ್ನ ಮೊದಲನೇ submission. ಇದು ಹೇಗೆ ಬಂತು ? ಇಷ್ಟು ವರ್ಷಗಳ ಕಾಲ illegal mining ಬಗ್ಗೆ ಗೊತ್ತಿಲ್ಲವೆಂದು ಹೇಳಿದರೆ ಹೇಗೆ ? 2002ನೇ ಇಸವಿಯಿಂದ China boom ಆದಮೇಲೆ ಆ ದೇಶದಲ್ಲಿ ಕಬ್ಬಿಣದ ಅದರಿಗೆ ಬೇಡಿಕೆ ಹೆಚ್ಚಾದ ಮೇಲೆ ಅಲ್ಲಿ Olympics game ಬಂದಿತ್ತು. ಆಗ ಕಬ್ಬಿಣದ ಅದಿರಿಗೆ ಬೇಡಿಕೆ ಹೆಚ್ಚಾಗಿ ಬಿಟ್ಟಿತು. ದಿವಂಗತ ಮಾಜಿ ಸಂಡೂರಿನ ಮಹಾರಾಜರಾದ ಘೋರ್ಪಡೆಯವರು 1973ನೇ ಇಸವಿಯಲ್ಲಿ 4500 ಎಕರೆ ಪ್ರದೇಶವನ್ನು without asking any compensation surrender ಮಾಡಿದರು. 4500 hectare ಪ್ರದೇಶವನ್ನು without asking any compensation from the Government surrender ಮಾಡಿದರು.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಆಗ royalty value ಇರಲಿಲ್ಲ.

ಶ್ರೀ ಸಿದ್ದರಾಮಯ್ಯ : ಬಸವರಾಜ್‌ರವರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, ಆಗ mining ಕೆಟ್ಟ ಪರಿಸ್ಥಿತಿಯಲ್ಲಿತ್ತು. ಯಾರಿಂದಲೂ ನಡೆಸುವುದಕ್ಕಾಗುತ್ತಿರಲಿಲ್ಲ. 2002ರಲ್ಲಿ boom ಪ್ರಾರಂಭವಾದ ಮೇಲೆ ಎಲ್ಲ ಕಳ್ಳರೂ ಎದ್ದರು, ಪ್ರಾರಂಭ ಮಾಡಿಕೊಂಡರು. Un registered ಕಂಪನಿಗಳು, fanatic companies, ಕಂಪನಿಗಳು, rising contractor ಎಂದು ಏನೇನೋ ಪ್ರಾರಂಭವಾಯಿತು. In the history of mining ಹೊಸ ಹೊಸ ಪದಗಳು ಸೃಷ್ಟಿಯಾದವು, ಗೊತ್ತಿಲ್ಲದ ಪದಗಳೆಲ್ಲ ಸೃಷ್ಟಿಯಾದವು. ಬಳ್ಳಾರಿ, ಚಿತ್ರದುರ್ಗ, ತುಮಕೂರಿನಲ್ಲಿ ಪ್ರಾರಂಭವಾದವು. Risk amount, risk management. ಯಾರೋ ಖಾರದಪುಡಿ ಮಹೇಶ, ಸ್ವಸ್ತಿಕ್ ನಾಗರಾಜ ಎನ್ನುವ ಗಿರಾಕಿಗಳು ಎಲ್ಲರ ಹತ್ತಿರ ಹಣ collect ಮಾಡುವುದು. 83 ಮೈನಿಂಗ್ ಕಂಪನಿಗಳು illegal export ನಲ್ಲಿ involve ಆಗಿವೆ. ಅವುಗಳ ಹತ್ತಿರ 75 ರೂ.ನಿಂದ 200 ರೂ. ವರೆಗೆ as a risk money ವಸೂಲಿ ಮಾಡಿದ್ದಾರೆ. ಇವರ ಕೆಲಸ ಏನೆಂದರೆ, zereo risk ಎಂದು ಕರೆಯಬೇಕು, ಅಂದರೆ, ಯಾರದ್ದೋ ಹತ್ತಿರ illegal ಆಗಿ extract ಮಾಡಿದ ಕಬ್ಬಿಣದ ಅದಿರನ್ನು ತೆಗೆದುಕೊಳ್ಳುವುದು, ಅದನ್ನು illegal transport ಮಾಡುವುದು illegal, export ಮಾಡುವುದು Mining

lease ಕೊಟ್ಟಿರುವವರ ಹತ್ತಿರ 75 ರೂ.ನಿಂದ 200 ರೂ. ವರೆಗೆ collect ಮಾಡುತ್ತಿದ್ದರು. ಮಧ್ಯವರ್ತಿಗಳಾದ ಸ್ವಸ್ತಿಕ್ ನಾಗರಾಜು ಮತ್ತು ಖಾರದಪುಡಿ ಮಹೇಶ ಇವರು ಆ ಹಣವನ್ನು ಕೆಳಗಿನಿಂದ ಮೇಲಿನವರೆಗೆ ಎಲ್ಲರಿಗೂ ಲಂಚ ಕೊಟ್ಟುಕೊಂಡು ಬರುತ್ತಿದ್ದರು. ಈ ತರಹ 617 ಅಧಿಕಾರಿಗಳಿಗೆ ಲಂಚ ಕೊಟ್ಟುಕೊಂಡು, ಬಳ್ಳಾರಿ, ಸಂಡೂರು, ಹೊಸಪೇಟೆಯಿಂದ ಪ್ರಾರಂಭ ಮಾಡಿದರೆ ಎಲ್ಲೆಲ್ಲಿ ಬಂದರುಗಳಿವೆ ಅಲ್ಲಿಯವರೆಗೆ ಯಾವ್ಯಾವ check post ಗಳು, ಯಾರ್‍ಯಾರು ಅಧಿಕಾರಿಗಳು ಬರುತ್ತಾರೆ. ಯಾರು Deputy Director of Mines and Geology, ಯಾರ್‍ಯಾರು Forest Officers ಬರುತ್ತಾರೆ, ಯಾರು Commercial Tax Officers, ಯಾರು Transport ಅಧಿಕಾರಿಗಳು ಬರುತ್ತಾರೆ, ಅವರಿಗೆಲ್ಲ ಇಲ್ಲಿಂದ ಲಂಚ ಕೊಟ್ಟುಕೊಂಡು ಹೋಗುವುದು. ಅವರವರ ಯೋಗ್ಯತೆಗೆ ತಕ್ಕಂತೆ ಬಂದರು ಇಲಾಖೆಯಿಂದ ಇಲ್ಲಿಯವರೆಗೆ ಲಂಚ ಕೊಡುವುದು. ಒಬ್ಬರಿಗೆ 10,000, ಒಬ್ಬರಿಗೆ 20,000, ಒಬ್ಬರಿಗೆ 25,000, ಒಬ್ಬರಿಗೆ 50,000 ಹೀಗೆ ಯೋಗ್ಯತೆಗೆ ತಕ್ಕಂತೆ ಹಂಚಿಬಿಟ್ಟಿದ್ದರು. ಇದು ಒಂದೆರಡು ದಿನ ನಡೆದಿದ್ದಲ್ಲ. 2002 ರಿಂದ ಇಲ್ಲಿಯವರೆಗೂ ನಡೆಯುತ್ತಿದೆ. illegal Mining ಇವತ್ತೂ ನಡೆಯುತ್ತಿದೆ ಎಂದು ಅರಣ್ಯ ಸಚಿವರೇ ಹೊಸಪೇಟೆಯ ಸಂಡೂರಿನಲ್ಲಿ ಹೇಳಿದ್ದೀರಿ. ತಾವು ಆ ಹೇಳಿಕೆಯನ್ನು ಸಂಡೂರಿನಲ್ಲೋ ಅಥವಾ ಹೊಸಪೇಟೆಯಲ್ಲಿ ಹೇಳಿದ್ದೋ ?

ಶ್ರೀ ಸಿ.ಪಿ. ಯೋಗೇಶ್ವರ್ : ಕಣ್ಣಲ್ಲಿ ನೋಡಿದ್ದನ್ನು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಸತ್ಯ ಹೇಳಿದ್ದೀರಿ, I welcome it. ತಾವು sincere ಆಗಿ honest ಆಗಿ ಹೇಳಿದ್ದೀರಿ. ನಾನು ನಿಮಗೆ ತಾರೀಫ್ ಮಾಡುತ್ತಿದ್ದೇನೆ. Has he not made a statement like that ?

ಶ್ರೀ ಟಿ. ಬಿ. ಜಯಚಂದ್ರ : ಅವರು ಇನ್ನೊಂದು statement ಮಾಡುತ್ತಿದ್ದಾರೆ. New statement, honest statement, ಏನೆಂದರೆ, collective responsibility.

ಶ್ರೀ ಸಿದ್ದರಾಮಯ್ಯ : ಅರಣ್ಯ ಸಚಿವರು ನನ್ನ ಒಳ್ಳೆಯ friend, ಅವರು ನಮ್ಮ ಜೊತೆಗಿದ್ದರು. ಬಹಳ ಒಳ್ಳೆಯವರು, ಅವರು ನೋಡಿದ್ದನ್ನು ಹೇಳಿದ್ದಾರೆ. ತಾವು ಒಳ್ಳೆಯ ಕೆಲಸ ಮಾಡಿದ್ದೀರೆಂದು ನಾನು ಅವರಿಗೆ ಒಳ್ಳೆಯ certificate ಕೊಡುತ್ತೇನೆ.

ಟಿ. ಬಿ. ಜಯಚಂದ್ರ : illegal ಆಗಿ ನಡೆಯುತ್ತಿದೆ ಎಂದು ಸರ್ಕಾರವೇ ಒಪ್ಪಿಕೊಂಡ

ಮೇಲೆ, ಇನ್ನೇನು ನಾವು ಮಾತನಾಡುವುದು ?

ಶ್ರೀ ಸಿದ್ದರಾಮಯ್ಯ : ಯೋಗೀಶ್ ನೀವು ಯಾವತ್ತು ಹೇಳಿದ್ದು ?

ಶ್ರೀ ಸಿ.ಪಿ. ಯೋಗೇಶ್ವರ್ : ಅಲ್ಲಿ ಹಲವಾರು ವರ್ಷಗಳಿಂದ ನಡೆಯುತ್ತಿರುವುದು ತಮಗೂ ಗೊತ್ತಿದೆ, ಅದು ಹೊಸದೇನೂ ಅಲ್ಲ. ರೈತರು ಅವರ ಜಮೀನಿನಲ್ಲಿ ....

ಅಧ್ಯಕ್ಷರು : ನೀವು ಸುಮ್ಮನೆ statement ಮಾಡುವುದಕ್ಕೆ ಹೋಗಬೇಡಿ.

ಶ್ರೀ ದಿನೇಶ್ ಗುಂಡುರಾವ್ : ಮಾನ್ಯ ಅಧ್ಯಕ್ಷರೆ, ಅವರು ಹೇಳಲಿ ಬಿಡಿ, ಬಹಳ ಪ್ರಾಮಾಣಿಕವಾಗಿ ಅವರು ಹೇಳುತ್ತಿದ್ದಾರೆ, ತಾವು allow ಮಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಯವರೆ, ಹೇಳಲಿ ಬಿಡಿ, ಇದರಿಂದ ನಿಮಗೇ ಅನುಕೂಲವಾಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ : ನೀವು ಮಾತನಾಡುವಾಗ ಮಧ್ಯದಲ್ಲಿ ನಾನು ಏಳಬಾರದೆಂದು ಇದ್ದೆ.

ಶ್ರೀ ಸಿದ್ದರಾಮಯ್ಯ : ಏಳುವುದು ಬೇಡ, ಅದು ನಿಮ್ಮ ಗೌರವಕ್ಕೆ ಒಳ್ಳೆಯದು.

ಶ್ರೀ ಡಿ. ವಿ. ಸದಾನಂದಗೌಡ : ನನಗೆ ಮಾನ್ಯ ಜಯಚಂದ್ರರವರು ಹೇಳಿದ್ದು ಕೇಳಿ ಬಹಳ ಖುಷಿಯಾಯಿತು. ಈ ರಾಜ್ಯದಲ್ಲಿ illegal mining activities curb ಮಾಡಲಿಕ್ಕೆ ನಿಮ್ಮ ಸರ್ಕಾರ ಬಹಳ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿದೆ ಎಂದು certificate ಕೊಟ್ಟರಲ್ಲ, ಅದು ಚೆನ್ನಾಗಿತ್ತು.

ಶ್ರೀ ಸಿದ್ದರಾಮಯ್ಯ : ಅವರು ಎಲ್ಲಿ ಹೇಳಿದರು ? ಯಾವಾಗ ಹೇಳಿದರು ?

ಶ್ರೀ ಡಿ. ವಿ. ಸದಾನಂದಗೌಡ : ಈಗ ತಾನೆ ಹೇಳಿದರು. ರಾಜ್ಯದಲ್ಲಿ illegal mining ಆಗುತ್ತಿತ್ತು, value added ಇದಕ್ಕೆ ಮಾತ್ರ ಅವಕಾಶ ಕೊಟ್ಟಿದ್ದೀರಿ ಅಂತ ಅವರು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ : ಅವರ ಪ್ರಾಮಾಣಿಕವಾದ ಹೇಳಿಕೆ ಇವತ್ತೂ ಕೂಡ illegal ಆಗಿ ನಡೆಯುತ್ತಿದೆ. ಲೋಕಾಯುಕ್ತರವರು ಎರಡು ವರದಿಗಳನ್ನು ಕೊಟ್ಟ ಮೇಲೂ ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಡಿ. ವಿ. ಸದಾನಂದಗೌಡ : ಅವರು ಮಾತನಾಡುವುದಕ್ಕೆ ನಾನು disturb

ಮಾಡುವುದಿಲ್ಲ, ನಮ್ಮ ಸರ್ಕಾರದಲ್ಲಿ ಪ್ರಾಮಾಣಿಕ ಮಂತ್ರಿಗಳಿದ್ದಾರೆಂದು ಹೇಳಿದರಲ್ಲ ಅದು...

ಶ್ರೀ ಟಿ. ಬಿ. ಜಯಚಂದ್ರ : ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. That is the opinion of the Government also. It is a collective responsibility.

ಡಾ॥ ಹೆಚ್. ಸಿ. ಮಹದೇವಪ್ಪ : ಮಾನ್ಯ ಮಂತ್ರಿಗಳ ಅನಿಸಿಕೆಯಲ್ಲೂ ಪ್ರಾಮಾಣಿಕತೆ ಇದೆ.

ಅಧ್ಯಕ್ಷರು : ಆಯಿತು, ತಾವು ಮಾತನಾಡಿ.

ಶ್ರೀ ಡಿ. ವಿ. ಸದಾನಂದಗೌಡ : sorry.

ಶ್ರೀ ಸಿದ್ದರಾಮಯ್ಯ : ಇಲ್ಲ, ಪರವಾಗಿಲ್ಲ, no problem. Parliamentary democracy discussion ನಲ್ಲಿ ಇವೆಲ್ಲಾ intervention ಇರಲೇಬೇಕಾಗುತ್ತದೆ. ನೀವು ಹೇಳಬೇಕಾಗುತ್ತದೆ. ಆದರೆ unfortunately, personal ಆಗಿ ತೆಗೆದುಕೊಂಡು ಬಿಡುತ್ತಾರೆ, ಅದೇ ಬಂದಿರುವುದು ತಾಪತ್ರಯ, ಅದಾಗಬಾರದು. ನೀವಲ್ಲ ಬಿಡಿ...

ಮಾನ್ಯ ಅಧ್ಯಕ್ಷರೆ, ಇದು ಸರ್ಕಾರದ ಗಮನಕ್ಕೆ ಬಂದಿದ್ದು ಯಾವಾಗ ? illegal mining ಇದು ಎಲ್ಲಾ ನಡೆಯುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದ್ದು ಯಾವಾಗ ಎಂದರೆ ; 2003–04 ಮತ್ತು 2004–05ರಲ್ಲಿ, Auditor General ಅವರು Mysore Minerals Limited ನ functioning ಅನ್ನು inspection ಮಾಡಿ ಒಂದು report ಕೊಡುತ್ತಾರೆ. ಅಲ್ಲಿ lot of lapses, illegalities, irregularities colluding with the private companies ಎಂದು ಈ ತರಹ ಎಲ್ಲಾ ಮಾಡಿದ್ದಾರೆ ಎಂದು ಒಂದು report ಕೊಡುತ್ತಾರೆ.

(ಶ್ರೀ ಲಕ್ಷ್ಮಣಸವದಿ ಮತ್ತು ಇತರೇ ಸದಸ್ಯರು ಮಾತನಾಡುತ್ತಿದ್ದರು)

ಅಧ್ಯಕ್ಷರು : ಲಕ್ಷ್ಮಣ ಸವದಿಯವರೆ, ನೀವು ಇಷ್ಟು ಜೋರಾಗಿ ಮಾತನಾಡಿಕೊಂಡು ಇದ್ದರೆ ಹೇಗೆ ?

ಶ್ರೀ ಸಿದ್ದರಾಮಯ್ಯ : ತಾವು ಈ ಸದನದಲ್ಲಿ ಸ್ವಲ್ಪ discipline ಗೆ ತರಬೇಕು. ಮಾನ್ಯ ಅಧ್ಯಕ್ಷರೆ ತಾವು ನಮ್ಮ ಕಡೆ ನೋಡುವುದೇ ಇಲ್ಲವಲ್ಲ, ಆ ಕಡೆ ನೋಡುತ್ತೀರಿ.

ಅಧ್ಯಕ್ಷರು : ಇಲ್ಲ, ಅವರು silent ಆಗಲಿ ಅಂತ ನೋಡಿದೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, 2003–04 ಮತ್ತು 2004–05ರ A.G. ಯವರ inspection report ನಲ್ಲಿ ಇದು ಬೆಳಕಿಗೆ ಬಂದ ಮೇಲೆ, 2006ನೇ ಇಸವಿಯಲ್ಲಿ it has been discussed on the floor of the House. ಅದು discuss ಆದ ಮೇಲೆ, ಆವತ್ತು ಇದ್ದಂಥ ಈ ರಾಜ್ಯದ ಮುಖ್ಯಮಂತ್ರಿಯವರು ಒಂದು ತನಿಖೆ ಮಾಡಿಸುತ್ತೇನೆಂದು Assembly ಯಲ್ಲಿ ಭರವಸೆ ಕೊಡುತ್ತಾರೆ. ಆ ಭರವಸೆ ಕೊಟ್ಟ ಮೇಲೆ ಸರ್ಕಾರ ತೀರ್ಮಾನ ಮಾಡಿ ಈ illegal mining ಅನ್ನು Mysore Minerals ಗೆ ಸಂಬಂಧಪಟ್ಟದ್ದು, illegal mining, illegal export, illegal transport, illegal extortion ಇವೆಲ್ಲದರ ಬಗ್ಗೆ ಮತ್ತು ಯಾರ್‍ಯಾರು ಇದರಲ್ಲಿ involve ಆಗಿದ್ದಾರೆ, ಯಾವ ಯಾವ ಅಧಿಕಾರಿಗಳು ಇದರಲ್ಲಿ involve ಆಗಿದ್ದಾರೆ, ಯಾವ್ಯಾವ ರಾಜಕಾರಣಿಗಳು involve ಆಗಿದ್ದಾರೆ, ಯಾವ್ಯಾವ ಕಂಪನಿಗಳು involve ಆಗಿವೆ, ಎಲ್ಲವನ್ನೂ ಸೇರಿಸಿ ಇವತ್ತು report ಕೊಡಲಿಕ್ಕೆ refer ಮಾಡುತ್ತಾರೆ. ಅದು ನಾಲ್ಕೂ ಬಾರಿ ಆದೇಶ ಮಾಡುತ್ತಾರೆ. ಮೊದಲನೇ ಆದೇಶ : 12–03–2007, ಅಲ್ಲಿಂದ 19–07–2010ರ ವರೆಗೆ ನಾಲ್ಕು ಆದೇಶಗಳನ್ನು ಮಾಡುತ್ತಾರೆ. ನಾಲ್ಕು ಆದೇಶಗಳ ಒಟ್ಟಾರೆ ಸಾರಾಂಶ ಏನೆಂದರೆ ; 01–01–2000 ದಿಂದ 19–07–2010ರ ವರೆಗೆ ಏನೇನು ಅಕ್ರಮ ಗಣಿಗಾರಿಕೆ ನಡೆದಿವೆ ? ಯಾರ್‍ಯಾರು ಇದರಲ್ಲಿ involve ಆಗಿದ್ದಾರೆ ? ರಾಜ್ಯದ ಬೊಕ್ಕಸಕ್ಕೆ ಎಷ್ಟು ನಷ್ಟವಾಗಿದೆ ? Royalty ಎಷ್ಟು ಕೊಟ್ಟಿಲ್ಲ ? Forest Tax ಎಷ್ಟು ಕದ್ದು ಬಿಟ್ಟಿದ್ದಾರೆ ? invoice ಗಳಲ್ಲಿ ಎಷ್ಟು ನಷ್ಟವಾಗಿದೆ ? ಯಾರ್‍ಯಾರು ಲೂಟಿ ಹೊಡೆದಿದ್ದಾರೆ ? ಯಾರ್‍ಯಾರು ಕಳ್ಳತನ ಮಾಡಿದ್ದಾರೆ ? ಇವೆಲ್ಲವೂ ಕೂಡ ತನಿಖೆ ಮಾಡಿ ವರದಿ ಕೊಡಿ ಎಂದು ಆದೇಶ ಮಾಡಿದರು. ಮಾನ್ಯ ಅಧ್ಯಕ್ಷರೆ, 2000 ದಿಂದ 2004–05ರ ವರೆಗೆ ಲೋಕಾಯುಕ್ತರವರು ಏನು ಹೇಳುತ್ತಾರೆ ಎಂದರೆ ; ನಮಗೆ documents/information ಸಿಗಲಿಲ್ಲ, ಏಕೆಂದರೆ ಬಂದರುಗಳಲ್ಲಿ, ಆದಾಯ ತೆರಿಗೆ ಇಲಾಖೆಗಳಲ್ಲಿ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ, ಯಾರಿಗೆ ಎಷ್ಟು permit ಕೊಟ್ಟರು ? Mineral dispatch document ಹೇಗೆ ಕೊಟ್ಟರು Transit permit ಹೇಗೆ ಕೊಟ್ಟರು, ಇವೆಲ್ಲಕ್ಕೂ ಕೂಡ ದಾಖಲಾತಿ ಸಿಗಲಿಲ್ಲ. ಹಾಗಾಗಿ 2005–06 ರಿಂದ 2010ರ ವರೆಗೆ ಮಾಡುತ್ತಾರೆ. ಹಿಂದಿನ ನಾಲ್ಕೈದು ವರ್ಷಗಳು ದಾಖಲಾತಿಗಳು ಇಲ್ಲ. ಅದಕ್ಕಾಗಿ ಅದರ ಬಗ್ಗೆ ಈ ವರದಿಯಲ್ಲಿ ಏನೂ ಮಾಹಿತಿ ಇಲ್ಲ. As I said earlier 18–12–2008ಕ್ಕೆ ಮೊದಲನೇ ವರದಿ ಕೊಡುತ್ತಾರೆ. ಮೊದಲನೇ ವರದಿ ಕೊಟ್ಟ ಮೇಲೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳದೆ, ಲೋಕಾಯುಕ್ತರಿಗೆ ಒಂದು Action Taken

Report ಕಳುಹಿಸಿ ಕೊಡುತ್ತಾರೆ. ಅದರ ಮೇಲೆ ಆ ಸಮಯದಲ್ಲಿದ್ದಂತಹ ಲೋಕಾಯುಕ್ತ ಶ್ರೀ ಸಂತೋಷ್ ಎನ್. ಹೆಗ್ಗಡೆಯವರು ಏನು comment ಮಾಡುತ್ತಾರೆ ಎಂದರೆ ; "It is not action taken report, it is action to be taken report". ಅಂತ ಹೇಳಿ ಕಳುಹಿಸುತ್ತಾರೆ. That means to say, Page 11 of the Final Report ನಲ್ಲಿ ಅವರು ಅಸಮಧಾನವನ್ನು ವ್ಯಕ್ತ ಮಾಡಿದ್ದಾರೆ. ಈ ವರದಿ ಕೊಟ್ಟ ಮೇಲೆ ನಾವು ಹೇಳಿದಂತಹ ಸಲಹೆಗಳನ್ನು ಮಾಡಿಲ್ಲ, ನಾವು ಹೇಳಿದಂತಹ ಶಿಫಾರಸ್ಸುಗಳನ್ನು ಜಾರಿ ಮಾಡಿಲ್ಲ, ಯಾರ ಮೇಲೂ ಕ್ರಮ ತೆಗೆದುಕೊಳ್ಳಲಿಲ್ಲ. No concrete action has been taken against the offenders, guilty people. ಇದು ಅವರು ಹೇಳಿರತಕ್ಕಂಥದ್ದು. ನಾನು ಇದನ್ನು ಏಕೆ ಪ್ರಸ್ತಾಪಿಸಿದೆ ಎಂದರೆ, ಒಂದು ವೇಳೆ ಆ ದಿವಸ ಅವರು ಕ್ರಮ ತೆಗೆದುಕೊಂಡಿದ್ದರೆ ರಾಜ್ಯಕ್ಕೆ ಆಗತಕ್ಕ ನಷ್ಟವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಅಲ್ಲಿಯವರೆಗೆ ಆಗಿರುವ ನಷ್ಟ ಬೇರೆ, ಅದರಿಂದ ಮುಂದುವರೆದ ನಷ್ಟ 18-12-2008 ರಿಂದ ಮುಂದೆ ಮತ್ತು ಇವತ್ತಿನ ವರೆಗೂ ಆಗುತ್ತಿರುವ ನಷ್ಟವನ್ನು as put it by Hon'ble Minister, ತಪ್ಪಿಸುವುದಕ್ಕೆ ಆಗುತ್ತಿತ್ತು. ಇದರ ಜವಾಬ್ದಾರಿಯನ್ನು ಯಾರು ಹೊರಬೇಕು, ಇದರ ಜವಾಬ್ದಾರಿಯನ್ನು ಆವತ್ತಿದ್ದಂಥ ಸರ್ಕಾರ ಹೊರಬೇಕಾಗುತ್ತದೆ. ಈ ವರದಿ ಕೊಟ್ಟ ಮೇಲೆ ಆವತ್ತಿದ್ದಂತಹ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಇದರ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗುತ್ತದೆ, ಏಕೆಂದರೆ ಅವರೇ Mines and Geology, Forest Department & Commercial Tax ಇವೆಲ್ಲಾ ಇಲಾಖೆಗಳು ಅವರ ಕೈ ಕೆಳಗಡೆ ಇತ್ತು. Transport Department ಮಾತ್ರ ಬೇರೆಯವರು ಹತ್ತಿರ ಇತ್ತು. ಆದರೆ, ಯಾವ ಅಧಿಕಾರಿಯ ಮೇಲೂ ಕ್ರಮ ತೆಗೆದುಕೊಳ್ಳಲಿಲ್ಲ. ಅಂದರೆ, ಯಾರನ್ನೂ ಸಹ ಡಿಸ್‌ಮಿಸ್ ಮಾಡಲಿಲ್ಲ, ಜೈಲಿಗೂ ಸಹ ಕಳುಹಿಸಿಲ್ಲ. ಇದರಲ್ಲಿ ಇನ್ವಾಲ್ವ್ ಆಗಿ ಲೂಟಿ ಮಾಡಿರುವವರಿಂದ ವಸೂಲಿ ಮಾಡುವುದಕ್ಕೆ ಕ್ರಮ ಕೈಗೊಂಡಿಲ್ಲ. ಇವತ್ತಿನ ದಿವಸ ಏನಾಗಿದೆ ಎಂದರೆ ಇದರಿಂದ ಅವರಿಗೆ ಪುಷ್ಟಿ ಕೊಟ್ಟಂತೆ ಮತ್ತು encourage ಮಾಡಿದಂತೆ ಆಗಿದೆ. ಈ ರಾಜ್ಯದ ಸಂಪತ್ತನ್ನು ಲೂಟಿ ಹೊಡೆಯುವುದನ್ನು ರಾಜ್ಯ ಸರ್ಕಾರ ತಪ್ಪಿಸಬೇಕೆಂದು ಲೋಕಾಯುಕ್ತರು ಮೊದಲ ವರದಿಯಲ್ಲಿ ಹೇಳಿದ್ದರೂ ಕೂಡ ಸಂಪತ್ತನ್ನು ಉಳಿಸತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ ಎನ್ನತಕ್ಕಂಥದ್ದನ್ನು we can make out from the report of the Lokayukta. ಈ ಬಗ್ಗೆ ಮಾನ್ಯ ಲೋಕಾಯುಕ್ತರು 464 ಪುಟಗಳ ಒಂದು ದೊಡ್ಡ ವರದಿಯನ್ನು ಕೊಟ್ಟಿದ್ದಾರೆ. ಎರಡನೇ ರಿಪೋರ್ಟ್, it is a very big report. ಸುಮಾರು

33 chapter ಗಳನ್ನು ಒಳಗೊಂಡಿರುವಂಥ 464 ಪುಟಗಳ ಒಂದು ವರದಿಯಾಗಿದೆ. ಸುಮಾರು 25 ಸಾವಿರ ಡಾಕ್ಯುಮೆಂಟ್ಸ್ ಇದರಲ್ಲಿ ಒಳಗೊಂಡಿದೆ. ಇದರ ಜೊತೆಗೆ, we must appreciate the work of Lokayukta, particularly one Mr. U.V. Singh. He is the Principal Conservator of Forest. ಅವರ ಸೇವೆಯನ್ನು ಲೋಕಾಯುಕ್ತಕ್ಕೆ ತೆಗೆದುಕೊಂಡರು. ಹಾಗೆಯೇ ಹಿಂದೆ Law Secretary ಆಗಿದ್ದಂಥ ಶ್ರೀ ಚಾಮಯ್ಯ ಮತ್ತು ಶ್ರೀ ಯು.ವಿ. ಸಿಂಗ್ ಹಾಗೂ ಇನ್ನು 5–6 ಜನ ಪ್ರಾಮಾಣಿಕ ಅಧಿಕಾರಿಗಳು life risk ತೆಗೆದುಕೊಂಡು ಈ ವರದಿಯನ್ನು ತಯಾರು ಮಾಡಿದ್ದಾರೆ. We must salute them. ಅವರುಗಳು ಬಹಳ ಕಷ್ಟದಲ್ಲಿ ಅಲ್ಲಿಗೆ ಹೋಗಿ ಎಲ್ಲ ಮಾಹಿತಿಯನ್ನು ತಂದಿದ್ದಾರೆ. ಈ ಸಂದರ್ಭದಲ್ಲಿ ನನಗೆ ಆಗಿರುವ ಒಂದು ಅನುಭವವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಸಂಡೂರಿನಲ್ಲಿ ರಾಮಘಡ ಎಂಬ ಏರಿಯಾ ಇದೆ. ಅರಣ್ಯ ಸಚಿವರಾಗಿರುವ ಮಾನ್ಯ ಯೋಗೇಶ್ವರ್‌ರವರೆ, ತಾವು ರಾಮಘಡಕ್ಕೆ ಹೋಗಿದ್ದೀರಾ ? ನಾನು ಅಲ್ಲಿಗೆ ಹೋಗಿದ್ದೆ. ನೀವು ಅಲ್ಲಿಗೆ ಹೋಗಿದ್ದಾಗ ಗೂಂಡಾಗಳು ಅಲ್ಲಿಗೆ ಬಂದಿರಲಿಲ್ಲವೆ ? ಆದರೆ ನಾನು ಅಲ್ಲಿಗೆ inspectionಗೆ ಹೋಗಿದ್ದಾಗ ಗೂಂಡಾಗಳು ಬಂದಿದ್ದರು. ನೀವು ನನ್ನನ್ನು Leader of Opposition ಮಾಡಿ Cabinet Rank ಅನ್ನು ಕೊಟ್ಟಿದ್ದೀರಿ. ಆದ್ದರಿಂದ, ನನಗೆ protocol ಇದೆಯೋ ಅಥವಾ ಇಲ್ಲವೋ ಹೇಳಿ ? ನಾನು ಅಲ್ಲಿಗೆ ಹೋದಾಗ ಒಬ್ಬ ಕಾನ್ಸ್‌ಟೇಬಲ್ ನನ್ನ ಜೊತೆ ಬರಲಿಲ್ಲ. ಅಲ್ಲಿನ ಡಿ.ಸಿ. ಮತ್ತು ಎಸ್.ಪಿ. ಯವರಿಗೆ ನನ್ನ ಟೂರ್ ಪ್ರೋಗ್ರಾಮ್ ಕಳುಹಿಸಿಕೊಟ್ಟಿದ್ದರೂ ಕೂಡ ಒಬ್ಬ ಕಾನ್ಸ್‌ಟೇಬಲ್ ನನ್ನ ಜೊತೆ ಬರಲಿಲ್ಲ. ಇದಕ್ಕೆ ನಾವು ಏನು ಮಾಡಬೇಕು ಹೇಳಿ ? ಕಾನೂನು ಪ್ರಕಾರ ನನಗೆ Leader of the Opposition ಹುದ್ದೆಯನ್ನು ತಾವು ಕೊಟ್ಟಿದ್ದೀರಿ. ಆ ಸಂದರ್ಭದಲ್ಲಿ ನನ್ನ ಜೊತೆ ಒಬ್ಬ ಕಾನ್ಸ್‌ಟೇಬಲ್ ಅಥವಾ ಒಬ್ಬ ವಿಲೇಜ್ ಅಕೌಂಟೆಂಟ್ ಬರಲಿಲ್ಲ. ನಾನು ಅಲ್ಲಿ ನೋಡುವುದಕ್ಕೆ ಹೋದಾಗ ಸುಮಾರು 10–12 ಮೋಟರ್ ಬೈಕ್‌ಗಳಲ್ಲಿ, ಒಂದೊಂದು ಮೋಟಾರ್ ಬೈಕ್‌ನಲ್ಲಿ 2–3 ಜನ ಕುಳಿತುಕೊಂಡು, ಎಲ್ಲರೂ ಮುಖಕ್ಕೆ ಬಟ್ಟೆ ಕಟ್ಟಿಕೊಂಡು ಇದ್ದಂಥ ಗುಂಪು ನನ್ನ ಕಾರಿನ ಹಿಂದೆ–ಮುಂದೆ ಬರ್ ಬರ್ ಎಂದು ಹೋಗುತ್ತಿದ್ದರು. ನನ್ನ ಕಾರು ಮುಂದಕ್ಕೆ ಹೋಗಬಾರದೆಂದು ರಸ್ತೆಯಲ್ಲಿ ಟ್ರೆಂಚಸ್ ತೆಗೆದಿದ್ದರು ಮತ್ತು ರಸ್ತೆ ಮಧ್ಯದಲ್ಲಿ ಮಣ್ಣಿನ ಗುಡ್ಡೆಯನ್ನು ಹಾಕಿದ್ದರು. ಈ ರೀತಿಯಾದ ಪರಿಸ್ಥಿತಿ ನನಗೆ ಆವತ್ತಿನ ದಿವಸ ನಿರ್ಮಾಣವಾಗಿತ್ತು. ಒಂದು ಸಾರಿ ಅದನ್ನು ನೆನಸಿಕೊಂಡರೆ ಭಯವಾಗುತ್ತದೆ. ಅಂದರೆ ಮಾನ್ಯ ಯೋಗೀಶ್ವರ್‌ರವರೇ ಎಂಥ ಒಂದು ಭಯದ ವಾತಾವರಣ ಆ

ಜಿಲ್ಲೆಯಲ್ಲಿ ನಿರ್ಮಾಣವಾಗಿತ್ತೆಂಬುದನ್ನು ತಾವು imagine ಮಾಡಿಕೊಳ್ಳಿ. ತಾವು ಸಿನಿಮಾದಲ್ಲಿ ನಾಯಕರಾಗಿ ಸೈನಿಕ ಪಾತ್ರ ಮಾಡಿದ್ದೀರಿ. ಆದ್ದರಿಂದ, ನಿಮ್ಮ ಕಾಲದಲ್ಲಿಯಾದರೂ ಅದನ್ನು ನಿಲ್ಲಿಸಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ನನ್ನ ಪ್ರಕಾರ ಅರಣ್ಯ ಇಲಾಖೆಯಲ್ಲಿರುವ ಅಧಿಕಾರಿಗಳು ಅರಣ್ಯ ತೆರಿಗೆಯನ್ನು ವಸೂಲ್ಮಾಡದೆ ಅರಣ್ಯದಲ್ಲಿ ಅಕ್ರಮ ಗಣಿಗಾರಿಕೆಯನ್ನು ಮಾಡುವುದಕ್ಕೆ ಕುಮ್ಮಕ್ಕು ಕೊಟ್ಟಿರುವಂಥವರು ಮತ್ತು ಅಲ್ಲಿ ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಪರ್ಮಿಟ್ ಕೊಟ್ಟಂಥವರು ಯಾರ್‍ಯಾರು ಎಂಬ ಬಗ್ಗೆ ಒಂದು ಪಟ್ಟಿ ಮಾಡಿಕೊಂಡು ಅವರೆಲ್ಲರನ್ನು ಡಿಸ್‌ಮಿಸ್ ಮಾಡಿ ಜೈಲಿಗೆ ಕಳುಹಿಸಬೇಕು. ಇವರ ಸಪೋರ್ಟ್ ಇಲ್ಲದೇ ಹೋಗಿದ್ದರೆ ಇಷ್ಟೆಲ್ಲ ಮಾಡುವುದಕ್ಕೆ ಆಗುತ್ತಿರಲಿಲ್ಲ. ಮಾನ್ಯ ಯೋಗೀಶ್ವರ್‌ರವರೆ, ಇಂಥ ಅಧಿಕಾರಿಗಳ ಪಟ್ಟಿಯನ್ನು ಮಾಡಿದ್ದೀರಾ ? ಲೋಕಾಯುಕ್ತ ವರದಿಯನ್ನು ಒಂದು ಸಾರಿಯಾದರೂ ಓದಿದ್ದೀರಾ ? ಹಾಗಾದರೆ, ಯಾರ್‍ಯಾರು ಎಂದು ಹೇಳಿ ನೋಡೋಣ? ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಲೋಕಾಯುಕ್ತರು 4 ಲಕ್ಷ ಡಾಕ್ಯುಮೆಂಟ್ಸ್‌ನ್ನು ನೋಡಿದ್ದಾರೆ. It is not an ordinary investigation report. 4 ಲಕ್ಷ supported ಡಾಕ್ಯುಮೆಂಟ್‌ಗಳನ್ನು ನೋಡಿ ಈ ರಿಪೋರ್ಟ್ ತಯಾರಾಗಿದೆ. ಆದ್ದರಿಂದ, ಇದನ್ನು ಸುಮ್ಮನೆ ಹಗುರವಾಗಿ ಬಿಟ್ಟುಬಿಡುವುದಲ್ಲ. ಸುಮ್ಮನೆ ಬಿಟ್ಟರೆ ಈ ರಾಜ್ಯದ ಜನ ನಮ್ಮನ್ನು ಕ್ಷಮಿಸುವುದಿಲ್ಲ. ಊಟ ಮುಗಿಸಿ ಮಧ್ಯಾಹ್ನದ ನಂತರ ಮುಂದುವರೆಸುತ್ತೇನೆ.

ಅಧ್ಯಕ್ಷರು : ಆಯಿತು. ಈಗ ಸದನವನ್ನು ಮಧ್ಯಾಹ್ನ 3.00 ಗಂಟೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 5 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 3.00 ಗಂಟೆಗೆ ಸೇರುವಂತೆ ನಿಶ್ಚಯಿಸಿತು)

(ಸದನದ ಕಲಾಪವು ಮಧ್ಯಾಹ್ನ 3.30 ಗಂಟೆಗೆ ಪ್ರಾರಂಭವಾದಾಗ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎನ್.ಯೋಗೀಶ್ ಭಟ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಉಪಾಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೇ ತಾವು ನಿಯಮ 69ರ ಮೇರೆಗೆ ಚರ್ಚೆಯನ್ನು ಮುಂದುವರೆಸಿ.

ಶ್ರೀ ಸಿದ್ದರಾಮಯ್ಯ : (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಈ ಅಕ್ರಮ ಗಣಿಗಾರಿಕೆ ಬಗ್ಗೆ ಬೆಳಿಗ್ಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ, ಅದನ್ನೇ ಈಗ ಮುಂದುವರೆಸುತ್ತಿದ್ದೇನೆ. 2006–07 ರಿಂದ ಜುಲೈ 2010–11 ರವರೆಗೆ ಈ ಅವಧಿಯಲ್ಲಿ ನಮ್ಮ ದೇಶದಿಂದ ಹೊರಗಡೆಗೆ ಚಿತ್ರದುರ್ಗ, ತುಮಕೂರು, ಬಳ್ಳಾರಿ, ಹೊಸಪೇಟೆ, ಸಂಡೂರು ಈ ಭಾಗಗಳಿಂದ export ಆಗಿದೆ. ಒಟ್ಟು 12 ಕೋಟಿ 57 ಲಕ್ಷ ಮೆಟ್ರಿಕ್ ಟನ್ ಸ್ವಲ್ಪ ಚಿಲ್ಲರೆ ಬಿಟ್ಟು ಹೇಳುತ್ತಿದ್ದೇನೆ. 12 ಕೋಟಿ 57 ಲಕ್ಷ ಮೆಟ್ರಿಕ್ ಟನ್ ಇದರೊಳಗೆ 2,98,60,000 ಮೆಟ್ರಿಕ್ ಟನ್‌ನಲ್ಲಿ illicit export. Mines and Geology Department mining lease ಅನ್ನು ಕೊಡುತ್ತದೆ. ಆ ಮೈನಿಂಗ್ ಲೀಸ್ ಕೊಟ್ಟ ಮೇಲೆ ಆ ಮೈನಿಂಗ್ ಮ್ಯಾಪ್ ಅನ್ನು ಮಾಡಬೇಕು. ಒಂದು ವರ್ಷದಲ್ಲಿ ಎಷ್ಟು extract ಮಾಡಬೇಕು. ಎಷ್ಟನ್ನು transport ಮಾಡಬೇಕು, ಎಷ್ಟನ್ನು export ಮಾಡಬೇಕು ಎಂದು ಹೇಳಿ ಅವರು ಲೀಸ್ ಅಗ್ರಿಮೆಂಟ್‌ನಲ್ಲಿ ಮಾಡಿಕೊಂಡಿರುತ್ತಾರೆ. ಅದು ಕಾನೂನು ಪ್ರಕಾರ ಮಾಡಬೇಕಾಗಿರುತ್ತದೆ ಆಮೇಲೆ MInes and Geology Department ನವರು mineral dispatch permit ಎಂದು ಕೊಡುತ್ತಾರೆ. ಅದು ಇರಲೇಬೇಕು. ಅದಿಲ್ಲದೆ ಯಾರು ಕೂಡ ಮಾಡಲಿಕ್ಕಾಗುವುದಿಲ್ಲ. ಇಷ್ಟೆಲ್ಲಾ ಆದರೂ ಕೂಡ 12 ಕೋಟಿ 57 ಲಕ್ಷದೊಳಗೆ ಈ ನಾಲ್ಕು ವರ್ಷಗಳಲ್ಲಿ 2 ಕೋಟಿ 98 ಲಕ್ಷ ಮೆಟ್ರಿಕ್ ಟನ್ ಹೋಗಿದೆ. ಅದು ಹೇಗೆ ಹೋಗುತ್ತದೆ ? ಒಂದು permit ಕೊಟ್ಟಿರುವುದಕ್ಕಿಂತ ಹೆಚ್ಚು over load ಮಾಡುವುದು. ಎರಡನೆಯದು permit ಇಲ್ಲದೆ ಅದಿರನ್ನು ಸಾಗಿಸುವುದು. ಮೂರನೆಯದು permit ಅನ್ನು forgery ಮಾಡಿಕೊಳ್ಳುವುದು. ಈ 2 ಕೋಟಿ 98 ಲಕ್ಷ ಮೆಟ್ರಿಕ್ ಟನ್ ಹೋಗಬೇಕಾದರೆ ಹೆಚ್ಚಾಗಿ ಬೇಲೆಕೆರೆ ಬಂದರು, ಕೃಷ್ಣಪಟ್ಟಣಂ, ಚೆನ್ನೈ, ಮಂಗಳೂರು, ಗೋವಾ, ಕಾರವಾರ ಇಂಥ ಸ್ಥಳಗಳಿಗೆಲ್ಲಾ ಈ export ಹೋಗುತ್ತದೆ. Between ಅವರು ship billing ಇಟ್ಟುಕೊಳ್ಳಬೇಕಾಗುತ್ತದೆ. Customs ಇವೆಲ್ಲಾ ಮಾಡಿಕೊಡಬೇಕಲ್ಲವೇ ? ಈ ರೀತಿ ಮಾಡಿರುವುದರಿಂದ ಈ 2 ಕೋಟಿ 98 ಲಕ್ಷ ಮೆಟ್ರಿಕ್ ಟನ್‌ಗೆ ಅವತ್ತಿನ ರೇಟ್ ಎಷ್ಟಿತ್ತು ಎಂದು ಲೆಕ್ಕ ಹಾಕಿದರೆ dollars value ಎಷ್ಟಿತ್ತು ? ಅವರು ಎಷ್ಟಕ್ಕೆ ಮಾರಿದ್ದಾರೆ ಅದೆಲ್ಲವನ್ನು ಲೆಕ್ಕ ಹಾಕಿದರೆ ಅದರ ಬೆಲೆ ರೂ. 12,228–00 ಕೋಟಿ ಆಗುತ್ತದೆ. ರಿಪೋರ್ಟ್‌ನಲ್ಲಿ ಇದನ್ನು mention ಮಾಡಿದ್ದಾರೆ. ರೂ. 12,228–00 ಕೋಟಿ ಎಂದರೆ, is it a small amount ? ಆಮೇಲೆ ನಾವು ಜುಲೈ ತಿಂಗಳಿನಲ್ಲಿ ಅಸೆಂಬ್ಲಿಯಲ್ಲಿ illegal mining ಬಗ್ಗೆ ಪ್ರಸ್ತಾಪ ಮಾಡಿದ್ದೆವು. ನಿಮಗೆಲ್ಲಾ ಗೊತ್ತಿದೆ ನಾವೆಲ್ಲಾ ಐದು ದಿವಸಗಳ ಕಾಲ ಹಗಲು

ರಾತ್ರಿ ಅಸೆಂಬ್ಲಿಯಲ್ಲಿ ಇದ್ದೆವು. ಮಾನ್ಯ ಯಡಿಯೂರಪ್ಪನವರು ಆಗ illlegal mining ನಡೆಯುತ್ತಿಲ್ಲ. ಓಬಳಾಪುರಂ ಮೈನಿಂಗ್ ಕಂಪನಿ ಕರ್ನಾಟಕದಲ್ಲಿ ಮೈನಿಂಗ್ ಮಾಡುತ್ತಿಲ್ಲ. ಅವರಿಗೆ ಮೈನಿಂಗ್ ಇರುವುದು ಆಂಧ್ರದಲ್ಲಿ, ಬಾರ್ಡರ್‌ನಲ್ಲಿ, ಓಬಳಾಪುರಂನಲ್ಲಿರುವುದು, ಅದು ಕರ್ನಾಟಕದಲ್ಲಿಲ್ಲ. ನಾವೇನೂ ಮಾಡುತ್ತಿಲ್ಲ ಎಂದು ಹೇಳಿದರು. ಇಲ್ಲಿ documents ಎಲ್ಲಾ ನೋಡಿದಾಗ Income Tax Department, Customs Department, Portನಲ್ಲಿರುವ ಇಲಾಖೆಗಳ documents ಮಾಡಿರುವುದು ಮತ್ತೆ vehicles ಮಾಡಿರುವುದು ಇವನ್ನೆಲ್ಲಾ ನೋಡಿದರೆ ಓಬಳಾಪುರಂ ಮೈನಿಂಗ್ ಕರ್ನಾಟಕದಲ್ಲಿ horizon ನಲ್ಲಿ extract ಮಾಡಿರುವ ore.... ಲೈಸೆನ್ಸ್ ಆಂಧ್ರದಲ್ಲಿದ್ದರೂ ಕೂಡ ಅಲ್ಲಿ ಕೇವಲ 2 ಲಕ್ಷ ಚಿಲ್ಲರೆ ಮಾಡಿದ್ದಾರೆ. ಕರ್ನಾಟಕದ horizon ನಲ್ಲಿ ore ಎಷ್ಟಿದೆ ಎಂದರೆ ಸುಮಾರು 71.00 ಲಕ್ಷ ಟನ್ ಇದೆ. This is illicit export. ಇದಕ್ಕೆ permit ಇಲ್ಲ. ಇದಕ್ಕೆ ಮೈನಿಂಗ್ ಲೈಸೆನ್ಸ್ ಇಲ್ಲ. ಇದಕ್ಕೆ Transit permit ಇಲ್ಲ. ಏನೂ ಇಲ್ಲ. 71 ಲಕ್ಷ ಮೆಟ್ರಿಕ್ ಟನ್ ಇದೆ. ಎಷ್ಟಾಯಿತು ಸ್ವಾಮಿ ? ಅಂದು 5000, 3000, 7000 ದವರೆಗೂ ಇತ್ತು. ಇಷ್ಟು ಕರ್ನಾಟಕದಿಂದ ಲೂಟಿ ಆಗಿದೆ. ನನ್ನ ಪ್ರಕಾರ ಯಾರ್‍ಯಾರು ಅಧಿಕಾರಿಗಳು ಇದನ್ನು ಲೂಟಿ ಮಾಡಲಿಕ್ಕೆ ಶಾಮೀಲಾಗಿದ್ದಾರೆ ಅವರನ್ನೆಲ್ಲಾ hang ಮಾಡಬೇಕು. ಮೊನ್ನೆ ಹುಬ್ಬಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರ್.ಎಸ್.ಎಸ್.ನ ಶ್ರೀ ಮೋಹನ್ ಭಾಗವತರ್ ಎನ್ನುವವರು ಭಾಷಣ ಮಾಡುತ್ತಾ ಒಂದು ಮಾತನ್ನು ಹೇಳಿದ್ದಾರೆ. "ಯಾರು ಭ್ರಷ್ಟಾಚಾರ ಮಾಡುತ್ತಾರೆ, ಲಂಚದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೆ ಅವರು ದೇಶದ್ರೋಹಿಗಳು" ಎಂದು. ಈ ಮಾತು ಅವರು ಹೇಳುವುದು ನಾನಲ್ಲ. RSS ನ Supreme, ಅವರು ಈ ಮಾತನ್ನು ಹೇಳುವುದು. ಇವರನ್ನು ಏನೆಂದು ಕರೆಯಬೇಕು ಉಪಾಧ್ಯಕ್ಷರೆ ? ನಾನು ಅವರು ಹೇಳುವುದನ್ನು ಸ್ವಾಗತ ಮಾಡುತ್ತೇನೆ. ದೇಶದ್ರೋಹಿಗಳು ಎಂದು ಕರೆಯುವುದು ಇದೆಯಲ್ಲಾ I welcome it. ಇವರನ್ನು ಏನೆಂದು ಕರೆಯಬೇಕು ? ರೂ. 12,228 ಕೋಟಿ ನುಂಗಿಬಿಟ್ಟಿದ್ದಾರೆ. 71.00 ಲಕ್ಷ ಮೆಟ್ರಿಕ್ ಟನ್ ಫಾರೆಸ್ಟ್ ಏರಿಯಾದಲ್ಲಿ ಅದನ್ನು ಕದ್ದು ಹೊಡೆದಿದ್ದಾರೆ. ನಮ್ಮ ಬೌಂಡರಿ ಲೈನನ್ನೇ ಬದಲಾಯಿಸಿಬಿಟ್ಟಿದ್ದಾರೆ. ಆ ಬೌಂಡರಿ ಲೈನ್ ಹತ್ತಿರ ಇದ್ದ ಸುಕ್ಕಲಮ್ಮ ದೇವಸ್ಥಾನವನ್ನು ಒಡೆದು ಹಾಕಿದ್ದಾರೆ. ಆ ಫಾರೆಸ್ಟ್ ಏರಿಯಾದಲ್ಲಿ ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ರಸ್ತೆಯನ್ನು ಮಾಡಿಕೊಂಡು ಬಿಟ್ಟಿದ್ದಾರೆ. ಇವೆಲ್ಲಾ ಈ ರಿಪೋರ್ಟ್‌ನಲ್ಲಿದೆ. ಇಷ್ಟೆಲ್ಲಾ ಲೂಟಿ ಆಗಿದೆಯಲ್ಲಾ ? ಇದರ ಬಗ್ಗೆ ಸರ್ಕಾರಕ್ಕೆ seriousness ಇಲ್ಲವಲ್ಲ ಮಾನ್ಯ ಉಪಾಧ್ಯಕ್ಷರೆ ? seriousness ಇರಬೇಕೆ, ಬೇಡವೆ ? ಇಷ್ಟು ಲೂಟಿ ಆದಮೇಲೆ,

ಜನಗಳಿಗೆ ದ್ರೋಹ ಮಾಡಿದ ಮೇಲೆ, ರಾಜ್ಯಕ್ಕೆ ದ್ರೋಹ ಮಾಡಿದ ಮೇಲೆ ಇವರ ಮೇಲೆ ಯಾವರೀತಿ ಕ್ರಮ ತೆಗೆದುಕೊಳ್ಳಬೇಕು. ಕಾನೂನಿನಲ್ಲಿ ಎಷ್ಟು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಅವೆಲ್ಲವನ್ನೂ ತೆಗೆದುಕೊಳ್ಳಬೇಕು. ಒಂದು ವೇಳೆ ಕಾನೂನಿನಲ್ಲಿ ಕಠಿಣವಾದ ಕ್ರಮಗಳು ಸಾಲದೆ ಹೋದರೆ ಕಾನೂನನ್ನು ಅಮೆಂಡ್‌ಮೆಂಟ್ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಬಹಶಃ ಕರ್ನಾಟಕದ ಇತಿಹಾಸದಲ್ಲಿ ಈ ರೀತಿ ಯಾರ ಕಾಲದಲ್ಲಿಯೂ ನಡೆದಿಲ್ಲ. ಯಾವ ಕಾಲದಲ್ಲಿಯೂ ನಡೆದಿಲ್ಲ. ಇವರಿಗೆ ಎಷ್ಟು ಧೈರ್ಯ ಇರಬೇಕು. ಆಮೇಲೆ ನಾವು ಧರಣಿ, ಪಾದಯಾತ್ರೆ ಮಾಡಿದ ಮೇಲೆ ಯಡಿಯೂರಪ್ಪನವರು ಹೇಳುತ್ತಿದ್ದರು, ಜುಲೈ 25 ರಂದು ನಾವು ಪಾದಯಾತ್ರೆ ಪ್ರಾರಂಭ ಮಾಡಿದ್ದೇವೆ. 9ನೇ ಆಗಸ್ಟ್‌ಗೆ ನಮ್ಮ ಪಾದಯಾತ್ರೆ ಮುಗಿಯಿತು. ಇವರು 28 ಜುಲೈಗೆ ಒಂದು ಆದೇಶ ಹೊರಡಿಸುತ್ತಾರೆ. ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಿದ್ದೇವೆ, ಅಕ್ರಮವಾಗಿ ಹೊರ ದೇಶಕ್ಕೆ ಹೋಗುತ್ತಿದ್ದಂತಹ ಅದಿರು ರಫ್ತನ್ನು ನಿಲ್ಲಿಸಿದ್ದೇವೆ ಎಂದು ಆದೇಶ ಹೊರಡಿಸುತ್ತಾರೆ. ಮಾನ್ಯ ಉಪಾಧ್ಯಕ್ಷರೆ, ಅದು ನಿಲ್ಲಲಿಲ್ಲ. ನಾವು ಪಾದಯಾತ್ರೆ ಮಾಡಿದ ಮೇಲೆ, ಜನಗಳ Public consumptin ಗೋಸ್ಕರ ಹೇಳಿದ್ದು ಅದು. ಅದು ನಿಲ್ಲಲಿಲ್ಲ. ಅದು ಆದ ಮೇಲೆ ಕೂಡ 28-07-2010ರಲ್ಲಿ ಇವರು ಆದೇಶ ಹೊರಡಿಸಿದ್ದಾರೆ. ಅದು ಆದಮೇಲೆ ಸುಮಾರು 17 ಲಕ್ಷ ಚಿಲ್ಲರೆ ಅಂದರೆ ಸುಮಾರು 18 ಲಕ್ಷ ಮೆಟ್ರಿಕ್ ಟನ್ ಹೊಡೆದಿದ್ದಾರೆ. ಅದನ್ನು ಮಾಡಿದ ಮೇಲೂ ಕೂಡ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿ ಮಾಡಿದ್ದಾರಲ್ಲಾ, ಅದನ್ನು ಹಾಗೆಯೇ ಬಿಟ್ಟು ಬಿಡಬೇಕೇ ? ಇವತ್ತಿನವರೆಗೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ನೀವೇ ಹೇಳಿ ಅವರಿಗೆ ಯಾವ ರೀತಿ punishment ಕೊಡಬೇಕು ? ಸರ್ಕಾರ ಒಂದು ಕಮಿಟಿ ಮಾಡಿ, ನಾವು ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಲೋಕಾಯುಕ್ತಕ್ಕೆ ಬರೆದಿದ್ದೇವೆ ಎಂದು ಹೇಳಿದರೆ, ಅಲ್ಲಿ ಲೋಕಾಯುಕ್ತರವರು ಸಹ ಇನ್ನೂ appoint ಆಗಿಲ್ಲ. ಕೇಳಿಕೊಂಡು ಕುಳಿತುಬಿಟ್ಟಿದ್ದೇವೆ ಎಂದು ಕುಳಿತುಬಿಟ್ಟರೆ ಹೇಗೆ ? ಈ ರಾಜ್ಯವನ್ನು ರಕ್ಷಣೆ ಮಾಡಬೇಕಾದವರು, ಈ ರಾಜ್ಯದ ಸಂಪತ್ತನ್ನು ರಕ್ಷಣೆ ಮಾಡಬೇಕಾಗಿರುವವರು, ಕೊಳ್ಳೆ ಹೊಡೆಯುತ್ತಿರುವುದನ್ನು ನೋಡುತ್ತಾ ಕುಳಿತುಕೊಂಡರೆ ಈ ಸರ್ಕಾರವನ್ನು ನಾವು ಏನೆಂದು ಕರೆಯಬೇಕು ಎನ್ನುವುದನ್ನು ನೀವೇ ಹೇಳಬೇಕು. ಇವರಿಗೆ ಯಾವ ಭಾಷೆಯಲ್ಲಿ, ಯಾವ ಪದಗಳಲ್ಲಿ ಹೇಳಬೇಕು ? ಬಹುಶಃ ಎಷ್ಟೇ ಕಠಿಣವಾದಂತಹ ಪದಗಳನ್ನು ಬಳಸಿದರೂ ಕೂಡ ನನ್ನ ಪ್ರಕಾರ ಕಡಿಮೆಯೇ ಆಗುತ್ತದೆ. ಎಷ್ಟೇ ಕಠಿಣವಾದಂತಹ, ಕಾಠಿಣ್ಯವಾದಂತಹ ಪದಗಳನ್ನು ಬಳಸಿದರೂ ಕೂಡ ಮಾನ್ಯ

ಉಪಾಧ್ಯಕ್ಷರೆ, ಕಡಿಮೆಯಾಗುತ್ತದೆ. ಇಲ್ಲಿ 83 ಕಂಪನಿಗಳು, 83 ಜನ exporters ಅದು ಆದ ಮೇಲೆ ಹೊಡೆದಿದ್ದಾರೆ. Page No. 25, 26 ಮತ್ತು 27ರಲ್ಲಿ ಎಲ್ಲಾ ಕೊಟ್ಟಿದ್ದಾರೆ. Total 17,58,336.00 ಮೆಟ್ರಿಕ್ ಟನ್ ಇದೆ. ಮತ್ತೆ ಇವರು ಏನು ನಿಲ್ಲಿಸಿದ್ದಾರೆ ? ಮಾನ್ಯ ಯಡಿಯೂರಪ್ಪನವರು ಎಲ್ಲಾ ಕಡೆಗಳಲ್ಲಿಯೂ ಭಾಷಣ ಮಾಡುತ್ತಾ, ನಾನು historical decision ತೆಗೆದುಕೊಂಡಿದ್ದೇನೆ, ಎಲ್ಲಾ ನಿಂತು ಹೋಗಿಬಿಟ್ಟಿದೆ, ಯಾರೂ ನಿಲ್ಲಿಸುವುದಕ್ಕೆ ಆಗಿಲ್ಲ, ನಾನು ನಿಲ್ಲಿಸಿ ಬಿಟ್ಟಿದ್ದೇನೆ. ಈ ರಿಪೋರ್ಟ್ ಏನು ಹೇಳುತ್ತಿದೆ ? 17 ಲಕ್ಷದ 58 ಸಾವಿರ ಮೆಟ್ರಿಕ್ ಟನ್, ಅದನ್ನು 17,00,000x3,000 ಎಂದು moderate rate ಹಾಕಿದರೆ ಎಷ್ಟು ಆಯಿತು ಸ್ವಾಮಿ ? ಅದು ಯಾರು ಕದ್ದಿದ್ದಾರೆ ಎಂದು ಪತ್ತೆ ಹಚ್ಚಬೇಕೋ ಬೇಡವೋ ? Highest ಕದ್ದು export ಆಗಿರುವುದು ಬೇಲೆಕೇರಿ ಬಂದರು ಮತ್ತು ಇನ್ನೊಂದು ಕೃಷ್ಣಪಟ್ಟಣಂ. ಬೇಲೆಕೇರಿ ಬಂದರು ಮತ್ತು ಕೃಷ್ಣಪಟ್ಟಣಂ ಇವರೆಡೂ ಕಡೆಗಳಲ್ಲಿ, ಏಕೆಂದರೆ, ಇವೆರಡೂ ಕೂಡ ಪ್ರೈವೇಟ್ ಕಂಪನಿ ಬಂದರುಗಳು. ಅಲ್ಲಿ ಕಳ್ಳರು ಕದ್ದು ಹೊಡಿದಿದ್ದಾರೆ. ಮಾನ್ಯ ಉಪಾಧ್ಯಕ್ಷರೆ ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇವರು ಸರ್ಕಾರ ನಡೆಸುವವರು, ಈ ವಿಷಯ ನಾವು ಪ್ರಸ್ತಾಪ ಮಾಡಿದ ಮೇಲೆ ಆಗಲಾದರೂ ಸಹ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತಲ್ಲವೇ ? ಅಧಿಕಾರದಲ್ಲಿರುವಾಗ ಕೂಡಲೇ ಅದರ ಮೇಲೆ ಕ್ರಮ ತೆಗೆದುಕೊಳ್ಳಬಹುದಾಗಿತ್ತಲ್ಲವೇ ? ನನ್ನ ಪ್ರಕಾರ Mines and Geology Department ಇದೆಯಲ್ಲಾ ಅದು ಮತ್ತು Forest Department ಇದೆಯಲ್ಲಾ ಅವರಷ್ಟೂ ಜನ ಆ ಕಾಲದಲ್ಲಿ ಏನೇನು ಕೆಲಸ ಮಾಡುತ್ತಿದ್ದರು, ಯಾರ್‍ಯಾರು ಇದರಲ್ಲಿ collude ಆಗಿದ್ದಾರೆ, ಯಾರ್‍ಯಾರು ಇದರಲ್ಲಿ ಲಂಚ ಹೊಡೆದಿದ್ದಾರೆ, ಲಂಚ ತೆಗೆದುಕೊಂಡು ರಾಜ್ಯಕ್ಕೆ ಮೋಸ ಮಾಡಿದ್ದಾರೆ, ಅವರೆಲ್ಲರನ್ನೂ ಕೂಡ they should be dismissed at one stroke. One stroke ನಲ್ಲಿ ಅವರನ್ನು dismiss ಮಾಡಬೇಕು. ಮಾನ್ಯ ಉಪಾಧ್ಯಕ್ಷರೆ, ನಾನು ಏಕೆ ಇದನ್ನೆಲ್ಲಾ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಒಂದು ಸಲ ವಿಶ್ವಜಿತ್ ಸಿಂಗ್ ಎಂಬುವವರು ಒಬ್ಬರು ಯು.ಪಿ. ಸಿಂಗ್‌ರವರ ಜೊತೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಅವರು ಡಿ.ಸಿ.ಎಫ್. ಅವರನ್ನು ಅಲ್ಲಿ ಹಾಕುತ್ತಾರೆ. ಅವರು ಬಳ್ಳಾರಿಯಲ್ಲಿ ಸ್ವಲ್ಪ ಬಿಗಿಯಾಗಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಶುರು ಮಾಡುತ್ತಾರೆ. ಬಿಗಿಯಾದ ಕ್ರಮ ತೆಗೆದುಕೊಂಡು ರೂ. 20 ಕೋಟಿ ಪೆನಾಲ್ಟಿ ವಸೂಲು ಮಾಡಿರುತ್ತಾರೆ, ಅಲ್ಲಿ streamline ಮಾಡುತ್ತಾರೆ, ಟ್ರಾನ್ಸ್‌ಪೋರ್ಟ್ ಅನ್ನು streamline ಮಾಡುತ್ತಾರೆ. Forest Department ನಲ್ಲಿ ಅಧಿಕಾರಿಗಳು ಯಾರ್‍ಯಾರು ಇದ್ದಾರೆ, ಅವರನ್ನು

ಚುರುಕುಗೊಳಿಸುವಂತಹದ್ದು, ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ District in-charge Minister ಜನಾರ್ದನ ರೆಡ್ಡಿಯವರು ಹೇಳಿದ ತಕ್ಷಣವೇ, ಆರು ತಿಂಗಳಲ್ಲಿಯೇ ಮತ್ತೆ ಅವರನ್ನು ಎತ್ತಂಗಡಿ ಮಾಡುತ್ತಾರೆ. What does it mean ? What is the intention behind it ? Why he is transferred within six months ? It is because, he has started taking actions in accordance with the law. ಅಲ್ಲಿ ಅವರಿಗೆಲ್ಲಾ ತೊಂದರೆಯಾಗಿ ಬಿಟ್ಟಿತು. ಆಮೇಲೆ ಒಂದು ಸಲ ಮಾನ್ಯ ಯಡಿಯೂರಪ್ಪನವರಿಗೂ ಮಾನ್ಯ ಜನಾರ್ದನ ರೆಡ್ಡಿಯವರಿಗೂ ಜಗಳ ಬಂತು. ಹೈದರಾಬಾದಿಗೆ ಹೋಗಿದ್ದಾಗ ಅಧಿಕಾರಿಗಳನ್ನೆಲ್ಲಾ ಟ್ರಾನ್ಸ್‌ಫರ್ ಮಾಡಿಬಿಟ್ಟರು. Within 48 hours all the officers were back to Bellary. What a shame ? ಇದು ಅಭಿವೃದ್ಧಿ ಪರವಾದ ಆಡಳಿತ, ಅಭಿವೃದ್ಧಿಯೇ ನಮ್ಮ ಮಂತ್ರ, Can we call it ? ಇದೇನಾ ಅಭಿವೃದ್ಧಿ ಎಂದರೆ ? ದಕ್ಷ ಆಡಳಿತ ಎಂದರೆ ಇದೇನಾ ?

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸಿ.ಸಿ. ಪಾಟೀಲ್‌ರವರು ಅವರ ಸ್ಥಾನವನ್ನು ಬಿಟ್ಟು ಬೇರೆ ಸ್ಥಳದಲ್ಲಿ ಕುಳಿತು ಮಾತನಾಡಿದರು)

ಶ್ರೀ ಸಿದ್ದರಾಮಯ್ಯ : ಅದೇ ಬೇರೆ ಕರ್ನಾಟಕನಾ ? ಅದಕ್ಕೆ ಲೋಕಾಯುಕ್ತರು ಹೇಳಿರುವುದು, Republic of Bellary, the collapse of administration in Bellary. ಸಿ. ಸಿ. ಪಾಟೀಲ್‌ರವರೆ, ಇದು ನಾನು ಹೇಳುವುದಲ್ಲ. It is the word called by Lokayukta.

ಉಪಾಧ್ಯಕ್ಷರು : ಸಿ.ಸಿ. ಪಾಟೀಲ್‌ರವರೆ, ಅದು ನಿಮ್ಮ ಜಾಗನಾ ?

ಶ್ರೀ ಸಿದ್ದರಾಮಯ್ಯ : ಪಾಪ ಅವರಿಗೆ ಏನೂ ಗೊತ್ತಿಲ್ಲ. ಅವರು ಆ ಕಡೆ ಹೋಗಿಲ್ಲ.

ಅಧ್ಯಕ್ಷರು : ಅವರು ತಮ್ಮ ಸ್ಥಾನದಿಂದ ಮಾತನಾಡಬೇಕು.

ಶ್ರೀ ಸಿದ್ದರಾಮಯ್ಯ : ನಿಮ್ಮ ಸ್ಥಾನದಿಂದ ಮಾತನಾಡಬೇಕು. ಮಾನ್ಯ ಉಪಾಧ್ಯಕ್ಷರೆ, within 48 hours all the officers were transferred from Bellary. They came back. ಇದು ಸರ್ಕಾರ ಇದೆಯೇ ಅಥವಾ ಇನ್ನೊಬ್ಬರ ಮರ್ಜಿಯಲ್ಲಿ ನಡೆಯುತ್ತಿದೆಯೇ? ಒಬ್ಬ ವ್ಯಕ್ತಿಗೋಸ್ಕರ ನಡೆಯುತ್ತಿದೆಯೇ ಎನ್ನುವುದನ್ನು anybody can make out. ಪಾಪ,

ಮಾನ್ಯ ಸದಾನಂದ ಗೌಡರು ಅಲ್ಲಿ ಇರಲಿಲ್ಲ. ಮಾನ್ಯ ಸದಾನಂದ ಗೌಡರೆ, ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. Can we call it ? ಇದನ್ನು Governance ಇತ್ತು ಎಂದು ಕರೆಯಬೇಕೇ? Law and Order ಇತ್ತು ಎಂದು ಕರೆಯಬೇಕೇ ? ಇಲ್ಲಿ democracy ಇತ್ತು ಎಂದು ಕರೆಯಬೇಕೇ ? This is what happened. ಈ ತರಹ ಇಡೀ ರಾಜ್ಯದ ಸಂಪತ್ತು ಅಲ್ಲಿ ಬಳ್ಳಾರಿಯಲ್ಲಿನ ಸಂಪತ್ತು ಲೂಟಿಯಾಗಿದೆ. 12,228 ಕೋಟಿ invoicing ನಲ್ಲಿ to the tune of loss ಎಷ್ಟು ಗೊತ್ತಾ ಮಾನ್ಯ ಉಪಾಧ್ಯಕ್ಷರೆ, 2,222 ಕೋಟಿ. ನಾವು ಇಲ್ಲಿ Old age pensionಗೆ ದುಡ್ಡಿಲ್ಲ. ಕರೆಂಟ್ ತೆಗೆದುಕೊಳ್ಳುವುದಕ್ಕೆ, ಕರೆಂಟ್ ಉತ್ಪಾದನೆ ಮಾಡುವುದಕ್ಕೆ ದುಡ್ಡಿಲ್ಲ. ಅಕ್ಕಿ ಕೊಡುವುದಕ್ಕೆ ದುಡ್ಡಿಲ್ಲ, ಕುಡಿಯುವ ನೀರಿಗೆ, ನೀರಾವರಿ ಕಾಮಗಾರಿಗಳಿಗೆ ಲೋಕೋಪಯೋಗಿ ಕೆಲಸಗಳಿಗೆ ದುಡ್ಡಿಲ್ಲ, ಹಾಸ್ಟೆಲ್‌ಗಳನ್ನು ಕಟ್ಟುವುದಕ್ಕೆ ಹಾಗೂ ಶಾಲೆ ಕೊಠಡಿಗಳನ್ನು ಕಟ್ಟುವುದಕ್ಕೆ ಹಣವಿಲ್ಲ. ಈ ರೀತಿ ಲೂಟಿ ಹೊಡೆಯುವುದಕ್ಕೆ ಬಿಟ್ಟು ಬಿಟ್ಟರಲ್ಲಾ ? ಇಷ್ಟಾದರೂ ಕೂಡ ಇಷ್ಟೆಲ್ಲಾ ಲೂಟಿ ಹೊಡೆದಿದ್ದಾರೆಂದು ಹೇಳಿದ ನಂತರ ಕೂಡ ವಸೂಲು ಮಾಡುವುದಕ್ಕಾದರೂ ಕ್ರಮ ತೆಗೆದುಕೊಳ್ಳಬೇಕಲ್ಲವೇ ? ಯಾರ್ಯಾರು ಸಿಕ್ಕ ಹಾಕಿಕೊಂಡಿದ್ದಾರೆ ? ಯಾರ್ಯಾರು ಈ ಹಣ ತಿಂದಿದ್ದಾರೆಂದು ? ಯಾರ್ಯಾರು ಇದಕ್ಕೆ ಕಾರಣಕರ್ತರಾಗಿದ್ದಾರೆ ಅವರಿಂದ ವಸೂಲು ಮಾಡಬೇಕೋ, ಬೇಡವೋ ? ಇವತ್ತಿನವರೆಗೆ ಏನೂ ಕ್ರಮ ಜರುಗಿಸಿಲ್ಲ. ಇಲ್ಲಾ ನಾವು ಲೋಕಾಯುಕ್ತರಿಗೆ ಬರೆದಿದ್ದೇವೆ, ಏನು ಮಾಡಬೇಕು ಎಂದು ನಾವು ಅವರನ್ನು ಕೇಳಿದ್ದೇವೆಂದು. ಲೋಕಾಯುಕ್ತ ಇಲ್ಲ. ಇವರಿಗೆ ಕಳುಹಿಸುವ ಹಾಗಿಲ್ಲ. ಇವರು ತೆಗೆದುಕೊಳ್ಳುವ ಹಾಗಿಲ್ಲ. What is the intention behind it ? ಆಗಸ್ಟ್‌ನಲ್ಲಿ ಲೋಕಾಯುಕ್ತರು retire ಆದರು, ಅವರ term ಮುಗಿಯಿತು. ಅವರು ಹೋದರು. ಅಲ್ಲಿಂದ ಆರು ತಿಂಗಳಾಯಿತು. ದಿನಾಂಕ : 02–08–2011 ಇರಬೇಕು ಲೋಕಾಯುಕ್ತರು ನಿವೃತ್ತಿ ಹೊಂದಿ. ಆಗಲೇ ಆರು ತಿಂಗಳಾಯಿತು. ನಾನಾಗಲೇ ಸೆಕ್ಷನ್ 14 ಹೇಳಿದೆ, Section 14 of the Lokayukta Act, I had brought it to your notice ಮೂರು ತಿಂಗಳೊಳಗೆ ಕ್ರಮ ತೆಗೆದುಕೊಳ್ಳದೆ ಹೋದರೆ it is deemed to be accepted. ಅದಕ್ಕೆ ಲೋಕಾಯುಕ್ತರು ಸರ್ಕಾರಕ್ಕೆ ಯಾರೇ Chief Minister ಇರಲಿ Chief Minister ಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ ರಾಜ್ಯಪಾಲರ ಅನುಮತಿ ಬೇಕೆಂಬ ಕಾರಣಕ್ಕೋಸ್ಕರ ಅವರಿಗೊಂದು ಪ್ರತಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅದಾದ ನಂತರವೇನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ? ಏನೂ ಕ್ರಮ ತೆಗೆದುಕೊಂಡಿಲ್ಲ. 12,228 ಕೋಟಿ invoice ನಲ್ಲಿ 2,228 ಕೋಟಿ ಬಹಳ ಆಶ್ಚರ್ಯಕರವಾಗಿ ಹೇಳುತ್ತೇನೆ. In 14 months illegal

extracts, illegal transport, illegal export, 14 ತಿಂಗಳಲ್ಲಿ, 1,850 ಕೋಟಿ ರೂ.ಗಳ ಲೂಟಿಯಾಗಿದೆ. ಅಂದರೆ ಲೂಟಿ ಮಾಡಿದ ವೇಗ, ಆ ಲೂಟಿ ಗಾತ್ರ ಹೇಗಿರಬೇಕು ? ದಿನಾಂಕ 18-12-2008 ರಲ್ಲಿ ಕೊಟ್ಟ ಮೇಲೆ ಇಲ್ಲಿ ಯಾವ ರೀತಿ ಹೆಚ್ಚಾಗಿದೆಯೆಂದು ನೀವು ನೋಡಬೇಕು ಮಾನ್ಯ ಉಪಾಧ್ಯಕ್ಷರೆ. The table showing the exports of illicit iron ore port-wise, year-wise. 2006-07 ರಲ್ಲಿ export of illicit iron ore ಮೆಟ್ರಿಕ್ ಟನ್‌ನಲ್ಲಿ 2006-07ರಲ್ಲಿ 31,84,152, 2007-08 ರಲ್ಲಿ 37,14,720, 2008-09 ರಲ್ಲಿ 53,55,660. After submission of the first report, whereas 2009-10 ರಲ್ಲಿ 1,27,93,396 ಮೆಟ್ರಿಕ್ ಟನ್ ಎಂದರೆ 2008-09 ರಲ್ಲಿ ಎಷ್ಟು illicit export ಆಗಿತ್ತೋ, 2009-10ರಲ್ಲಿ ಮಾನ್ಯ ಕಾರಜೋಳ ರವರೆ 53 ಲಕ್ಷದಿಂದ 1 ಕೋಟಿ 27 ಲಕ್ಷಗಳು ಜಾಸ್ತಿಯಾಗಿದೆ. First report submit ಮಾಡಿದ ಮೇಲೆ I want to know whether the Government was dead or not. Whether it was alive or not. 55 ಲಕ್ಷದಿಂದ 1 ಕೋಟಿ 27 ಲಕ್ಷ. 2010 ರಲ್ಲಿ ಏಪ್ರಿಲ್ ನಿಂದ ಜುಲೈರವರೆಗೆ 48,06,719 ಏಪ್ರಿಲ್, ಮೇ, ಜೂನ್ ಮತ್ತು ಜುಲೈ ನಾಲ್ಕು ತಿಂಗಳಲ್ಲಿ almost equal to illegal export in the year 2008-09 ಇಷ್ಟಾಗಿದೆ. ಇದರ ಅರ್ಥವೇನು ? ನೀವು report ಕೊಟ್ಟ ನಂತರ ಇದು ಜಾಸ್ತಿಯಾಯಿತು. First report ಕೊಟ್ಟ ನಂತರ illicit export ಯದ್ವಾತದ್ವಾ ಜಾಸ್ತಿಯಾಯಿತು. ಸರ್ಕಾರ ಏನು ಮಾಡದೆ ಲೂಟಿ ಹೊಡೆದುಕೊಂಡು ಹೋಗಿ ಎಂದು ನಿದ್ದೆ ಮಾಡಿತು. Because ಸರ್ಕಾರದ survival ಪ್ರಶ್ನೆಯಾಗಿತ್ತು. ಲೂಟಿ ಹೊಡೆದುಕೊಂಡು ಹೋಗಿ ನನ್ನ ತಂಟೆಗೆ ಬರಬೇಡಿ. ನನ್ನ ಕುರ್ಚಿಗೆ ಬರಬೇಡಿಯೆಂದು ಬಿಟ್ಟು ಬಿಟ್ಟರು. It clearly shows, and it is admitted by not only it is in the report ; it is admitted by then Chief Minister Mr. Yeddiyurappa on the floor of the House. ಜುಲೈ ತಿಂಗಳಲ್ಲಿ ಅವರು ಉತ್ತರ ಕೊಡುವಾಗ he has admitted. What more evidence is required to take action ? What is other necessary proof required ? Admitted facts. What does the Evidence Act says ? Admited facts need not be proved. ಅದರ ಮೇಲೆ ಕ್ರಮ ತೆಗೆದುಕೊಳ್ಳಬಹುದಾಗಿತ್ತು knowing fully well, he made a statement on the floor of the House that illegal mining is going on. He made a statement on the floor of the House and it is a clear admission, categorical admission.

ಆದರೂ ತೆಗೆದುಕೊಳ್ಳಲಿಲ್ಲವೆಂದರೆ ಏನೆಂದು ಕರೆಯಬೇಕು? ಇದು ಈ ರಾಜ್ಯದ ದುರಂತ. ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತೇವೆ. R.S.S. Chief ಅವರು ಅಪ್ಪಣೆ ಕೊಡಿಸಿ ಹೋಗುತ್ತಾರೆ. ಭ್ರಷ್ಟಾಚಾರ ದೇಶದ್ರೋಹ. ಇದನ್ನು ಏನೆಂದು ಕರೆಯಬೇಕು ? ಇದನ್ನು ಯಾರಿಗೆ ಹೇಳಬೇಕು ? ಬೇಲೆಕೇರಿ ಬಂದರಿನಲ್ಲಿ ಶ್ರೀ ದೇಸಾಯಿ ಎಂಬುವವರು ಒಂದು complaint ಕೊಡುತ್ತಾರೆ. complant ಕೊಟ್ಟ ನಂತರ ಲೋಕಾಯುಕ್ತರು 99 ಟ್ರಕ್‌ಗಳನ್ನು inspect ಮಾಡುತ್ತಾರೆ. ಯಾವ ಟ್ರಕ್‌ಗಳಿಗೂ ಕೂಡ ಪರ್ಮಿಟ್ ಇಲ್ಲ. Over loading, forgery documents, forgery permit ಗೊತ್ತಾದ ಮೇಲಾದರೂ ಕೂಡ ಅವರು ಯಾರು ಏನು ಎಂದು ಪತ್ತೆ ಹಚ್ಚಿ ಅವರನ್ನು ಬಲಿ ಹಾಕಬೇಕೋ ಬೇಡವೋ ? ಅದಾದ ಮೇಲೆ ಮಾನ್ಯ ಉಪಾಧ್ಯಕ್ಷರೆ, 20-2-2010 ರಲ್ಲಿ forest officers complaint ಕೊಟ್ಟು ಕೇಸ್ ರಿಜಿಸ್ಟರ್ ಆಯಿತು. 2 ಕಂಪ್ಲೆಂಟ್‌ಗಳು ರಿಜಿಸ್ಟರ್ ಆಯಿತು. 20-03-2010ರಲ್ಲಿ ಬೇಲೆಕೇರಿ ಬಂದರಿನ stock yard ನಲ್ಲಿ inspection ಮಾಡಿ ಅಲ್ಲಿ ಎಷ್ಟು ಸ್ಟಾಕ್ ಇದೆ ಎಂದು ಮಹಜರ್ ಮಡುತ್ತಾರೆ. 8 ಲಕ್ಷ ಚಿಲ್ಲರೆ ಟನ್ ಸ್ಟಾಕ್ ಇರುತ್ತದೆ. ಇದಾದ ಮೇಲೆ ಅಲ್ಲಿನ ಲೋಕಲ್ ಪೇಪರ್‌ನಲ್ಲಿ ಒಂದು ವರದಿ ಬರುತ್ತದೆ. ಇದನ್ನು ಕೂಡ ಮಹಜರ್ ಮಾಡಿ ಅಂಕೋಲಾ ಪೊಲೀಸ್ ಸ್ಟೇಷನ್‌ನಲ್ಲಿ ಒಂದು ಕೇಸ್ ರಿಜಿಸ್ಟರ್ ಆಗುತ್ತದೆ. ಆಗ ಕೆಲವು ಅಧಿಕಾರಿಗಳನ್ನು transfer ಮಾಡಿ ಬಿಟ್ಟರು. In the month of June 2010 ಲೋಕಾಯುಕ್ತರು ರಾಜೀನಾಮೆ ಕೊಟ್ಟರು. ಮಾನ್ಯ ಅದ್ವಾನಿಯವರು ಹೇಳಿದರೆಂದು ಮಾನ್ಯ ಲೋಕಾಯುಕ್ತರು ರಾಜೀನಾಮೆ ವಾಪಸ್ಸು ತೆಗೆದುಕೊಂಡರು ಎನ್ನುವ ಇತಿಹಾಸ ನಿಮಗೆಲ್ಲಾ ಗೊತ್ತಿದೆ. ಈಗಿನ ಭಾರತೀಯ ಜನತಾ ಪಕ್ಷದ ಅಧ್ಯಕ್ಷರೇ ಇಲ್ಲಿಗೆ ಬಂದರು. ಮಾನ್ಯ ಯಡಿಯೂರಪ್ಪ ಅವರು ಅವರ ಮನೆಗೆಲ್ಲಾ ಹೋಗಿ ರಾಜೀನಾಮೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಒಪ್ಪಿಸಿದರು. ಅವರು ಒಪ್ಪಿ ಅವರ investigation ಮುಂದುವರೆಸಿದರು. ಬೇಲೆಕೇರಿ ಬಂದರಿನಲ್ಲಿ ಜೂನ್ 2ನೇ ತಾರೀಖು ಪತ್ರಿಕೆಯಲ್ಲಿ ಒಂದು report ಬರುತ್ತದೆ. ಆ report ಬಂದ ಮೇಲೆ ಲೋಕಾಯುಕ್ತರು ಅಲ್ಲಿ ಹೋಗಿ ನೋಡಿದಾಗ ಮಹಜರ್ ಮಾಡಿರುವ 8 ಲಕ್ಷ ಟನ್ ship harbour ನಲ್ಲಿ ಅಧಿಕಾರಿಗಳಿಗೆ ವಹಿಸಿಕೊಟ್ಟಿದ್ದರೂ ಸಹ, ಅಲ್ಲಿ 6,10,000 ಮೆಟ್ರಿಕ್ ಟನ್ ನಾಪತ್ತೆಯಾಗಿರುತ್ತದೆ. ಯರೋ ಕದ್ದುಕೊಂಡು ಹೋಗುತ್ತಾರೆ. ಕದ್ದು ಹೊಡೆದು ಬಿಡುತ್ತಾರೆ. ಯಾರು ಕದ್ದು ಹೊಡೆದವರು ಸ್ವಾಮಿ ? ಕರ್ನಾಟಕದಲ್ಲಿ ಲೂಟಿ ಹೊಡೆದ ಕೆಲವು ಅಧಿಕಾರಿಗಳು ಕೂಡ ಅಲ್ಲಿ ಇರುತ್ತಾರೆ. ಮಹಜರ್ ಮಾಡಿ ಕಂಪ್ಲೆಂಟ್ ಕೊಟ್ಟರು. ಅಂಕೋಲಾ ಪೊಲೀಸ್ ಸ್ಟೇಷನ್‌ನಲ್ಲಿ ಮಹಜರ್

ಮಾಡಿರುವ ರಿಪೋರ್ಟ್‌ನ್ನು FIR ಮಾಡಿ ಕೋರ್ಟಿಗೆ ಕಳುಹಿಸಿಕೊಡುತ್ತಾರೆ. ಅದಾದ ಮೇಲೆ within 3 months ಯಾರು ಕದ್ದು ಹೊಡೆದಿರುತ್ತಾರೆಯೋ ; ಆ ಗಿರಾಕಿಗಳೇ ಅದನ್ನು export ಮಾಡಿ ಬಿಡುತ್ತಾರೆ. ನೋಡಿ ಹೇಗಿದೆ 'ಕಳ್ಳರ ಕೂಟ'. ನಾನು ಲಾಯರ್ ಕೆಲಸ ಮಾಡಿದ್ದೇನೆ. conspiracy ಅರ್ಥ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ನಮ್ಮ ಜಗದೀಶ್ ಶೆಟ್ಟರ್‌ರವರು ಕೂಡ ಲಾಯರ್ ಕೆಲಸ ಮಾಡಿದ್ದಾರೆ. ಇಂತಹ conspiracy ಯನ್ನು ನೀವು ಎಲ್ಲಿಯೂ ನೋಡಿಲ್ಲ ಜಗದೀಶ್ ಶೆಟ್ಟರ್‌ರವರೆ, ಬೇಲೆಕೇರಿ ಬಂದರಿನಿಂದ ಆರು ಲಕ್ಷ ಟನ್ ಕಬ್ಬಿಣದ ಅದಿರು ಮೂರು ತಿಂಗಳಿನಲ್ಲಿ ಮಾಯ. ಆಗ ಸರ್ಕಾರ ಏನು ಮಾಡುತ್ತಿತ್ತು ? ಅಧಿಕಾರಿಗಳು ಏನು ಮಾಡುತ್ತಿದ್ದರು ? ಆ ಅಧಿಕಾರಿಗಳಿಗೆ ಏನು ಮಾಡಿದರು ? ಸಿ.ಐ.ಡಿ. enquiry ಗೆ ಕೊಟ್ಟು ಬಿಟ್ಟರು. ಒಂದು ಕಡೆ ಲೋಕಾಯುಕ್ತ ತನಿಖೆ ಮಾಡುತ್ತಿದೆ. ಇನ್ನೊಂದು ಕಡೆ ಕಂಪ್ಲೆಂಟ್ ಕೊಟ್ಟಿದ್ದಾರೆಂದು ಹೇಳಿ ಸಿ.ಐ.ಡಿ.ಗೆ ಕೊಟ್ಟು ಬಿಟ್ಟರು. ಅ ಸಿ.ಐ.ಡಿ. ರಿಪೋರ್ಟ್ ಏನಾಗಿದೆ ಎಂದು ಇಲ್ಲಿ ಹೇಳಬೇಕು ಮಾನ್ಯ ಮುಖ್ಯಮಂತ್ರಿಗಳೇ ಇವತ್ತಿನವರೆಗೂ ಏನಾಯಿತು ? ಯಾರು ಕದ್ದರು ? ಯಾರು ನುಂಗಿ ಬಿಟ್ಟರು. 6 ಲಕ್ಷ ಎಂದರೆ 5000x6,00,000 ಎಂದರೆ 300 ಕೋಟಿ. ಸರ್ಕಾರಕ್ಕೆ ಬರಬೇಕಾದ ದುಡ್ಡು ಯಾರು ತಿಂದುಕೊಂಡು ಹೋದರು ಎಂದು ಇಲ್ಲಿಯವರೆಗೂ ನಮಗೆ ಗೊತ್ತಾಗಿಲ್ಲ. 300 ಕೋಟಿಯನ್ನು ಯಾರು ಲೂಟಿ ಹೊಡೆದರು ? ಯಾರು ಕದ್ದು ಹೊಡೆದಿದ್ದಾರೆ ಎನ್ನುವುದಕ್ಕೆ ಕರಾಚಿಗೆ ಕಳುಹಿಸಲಾಗಿದೆ ಎಂದು ಪತ್ರಿಕೆಯಲ್ಲಿ ಒಂದು ವರದಿ ಬಂದಿತ್ತು. ಅದು ವಿದೇಶ, ಕರಾಚಿ! 300 ಕೋಟಿ ಈ ಹಣ ರಾಜ್ಯದ ಖಜಾನೆಗೆ ಬರಬೇಕಾಗಿತ್ತಲ್ಲ, ರಾಜ್ಯದ ಅಷ್ಟು ಕೋಟಿ ದುಡ್ಡನ್ನು ತಿಂದು ಬಿಟ್ಟರಲ್ಲಾ ಅವರ ಮೇಲೆ ಇದುವರೆವಿಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಸಿ.ಐ.ಡಿ. enquiry ಏನಾಯಿತು ? ಸಿ.ಐ.ಡಿ. ರಿಪೋರ್ಟ್ ಏನಾಯಿತು ಎನ್ನುವುದು ಇವತ್ತಿನವರೆಗೂ ಗೊತ್ತಿಲ್ಲ. ಸಿ.ಐ.ಡಿ. ಯವರು ಏನೂ ಮಾಡುವುದಿಲ್ಲ ಅದಕ್ಕೆ ಅವರಿಗೆ ಕೊಡಬೇಡಿ ಎಂದು ಹೇಳುವುದು. Because, CID ia a part of the Government. ಅವರೇನೂ ಮಾಡಲ್ಲ. ಸಾಮಾನ್ಯವಾಗಿ ಸಿ.ಐ.ಡಿ. ಗೆ ಎಂತಹ ಪೊಲೀಸ್ ಸಿಬ್ಬಂದಿಯನ್ನು ಹಾಕುತ್ತಾರೆಂದರೆ ; influence ಇಲ್ಲದ ಒಂದು ರೀತಿಯ ಅಬ್ಬೇಪಾರಿಗಳನ್ನು ತಂದು ಹಾಕುತ್ತಾರೆ. Most inefficient, ಸಾಮಾನ್ಯವಾಗಿ ಯಾರಿಗೆ influence ಇಲ್ಲವೋ ಅವರನ್ನು ಅಲ್ಲಿಗೆ ತೆಗೆದು ಹಾಕುತ್ತಾರೆ. ನನ್ನ ಅನುಭವದಲ್ಲಿ ಹೇಳುತ್ತೇನೆ, ಇದು ಅವರಿಗೆ punishment transfer. ನಿಮ್ಮ ಕಾಲದಲ್ಲಿಯೇ ಅಂತಲ್ಲಾ, ಎಲ್ಲಾ ಕಾಲದಲ್ಲೂ ನಡೆದಿದೆ. ನಿಮ್ಮ ಕಾಲದಲ್ಲೂ ಅದೇ ನಡೆಯುತ್ತಿದೆ. ಅಂತಹವರನ್ನು

ತೆಗೆದುಕೊಂಡು ಹಾಕಿದ ಮೇಲೆ ಆ ಗಿರಾಕಿಗಳು ಏನು ಮಡುತ್ತಾರೆಂದರೆ, ನಮ್ಮ security ಗೆ ಪೋಲೀಸ್‌ರವರನ್ನು ಹಾಕುತ್ತಾರೆ, ಅವರು ಯಾವ ರೀತಿ ಇರುತ್ತಾರೆಂದರೆ ವಯಸ್ಸಾದವರು, ಓಡಾಡುವುದಕ್ಕೆ ಆಗದವರು ಎದ್ದರೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ, ಇಳಿದರೆ ಹತ್ತುವುದಕ್ಕೂ ಕಷ್ಟ, ಹತ್ತಿದರೆ ಇಳಿಯುವುದೂ ಕಷ್ಟ. ಅಂಥವರನ್ನು ಹಾಕಿ ಬಿಡುತ್ತಾರೆ. ನನ್ನ ಪ್ರಕಾರ ಅವರಿಗೆ ಸ್ವಲ್ಪ ದುಡ್ಡು ಕೊಟ್ಟು compulsory retirement ಕೊಟ್ಟರೆ ಒಳ್ಳೆಯದು. ಅಂಥವರನ್ನೇ ಹುಡುಕಿ ಸಿ.ಐ.ಡಿಗೆ ಹಾಕುತ್ತಾರೆ. ಎಲ್ಲಿ efficient ಆಗಿ ಕೆಲಸ ಮಾಡಬೇಕೋ ಅಲ್ಲಿಗೆ ಒಳ್ಳೆಯವರ್‍ಯಾರನ್ನೂ ಹಾಕುವುದಿಲ್ಲ. ಏಕೆಂದರೆ ಸಿ.ಐ.ಡಿ ಯಲ್ಲಿ ಏನು ಸಿಕ್ಕುವುದಿಲ್ಲ. ಅದು ಅಷ್ಟೊಂದು ಒಳ್ಳೆಯ ಹುಲ್ಲುಗಾವಲು ಅಲ್ಲ. ಅದಕ್ಕಾಗಿ ಅಲ್ಲಿ ಒಳ್ಳೆಯವರು ಯಾರೂ ಹೋಗುವುದಿಲ್ಲ. ಒಳ್ಳೆಯವರನ್ನು ಹಾಕುವುದೂ ಇಲ್ಲ. ಮತ್ತೆ ಅವರಿಗೆ influence ಕೂಡ ಇರುವುದಿಲ್ಲ.

ಶ್ರಿ ಕಳಕಪ್ಪ ಗುರುಶಾಂತಪ್ಪ ಬಂಡಿ : ಸಿ.ಓ.ಡಿ ಅಲ್ಲಿ ಇದ್ದವರೆಲ್ಲರೂ ಕೆಟ್ಟವರೇ ?

ಶ್ರೀ ಸಿದ್ದರಾಮಯ್ಯ : ಕೆಟ್ಟವರು ಎಂದು ಹೇಳಲಿಲ್ಲ. ಅಸಮರ್ಥರು ಎಂದು ಹೇಳಿದೆ. ಅವರ ಕೈಯಲ್ಲಿ ಕೆಲಸ ಮಾಡುವುದಕ್ಕೆ ಕಷ್ಟ ಎಂದು ಹೇಳಿದೆ, ಅದು ತಪ್ಪಾ ? ಯಾರೂ ಕೆಟ್ಟವರಲ್ಲ, ನೀವು ಕೆಟ್ಟವರಲ್ಲ, ನೀವು ಕೆಟ್ಟವರೇ ? 6 ಕೋಟಿ ರೂಪಾಯಿಗಳನ್ನು ತಿಂದಿದ್ದಾರಲ್ಲಾ ಅವರನ್ನು ಏನೆಂದು ಕರೆಯಬೇಕು ನೀವೇ ಹೇಳಿ ? ಬೇಲೆಕೇರಿಯಿಂದ ಅದಿರು ಮಾಯವಾಯಿತಲ್ಲಾ ? ಅವರಿಗೇನೆಂದು ಕರೆಯಬೇಕು. ಒಳ್ಳೆಯವರೆಂದು ಕರೆಯಬೇಕೇ ಅಥವಾ ಕೆಟ್ಟವರೆಂದು ಕರೆಯಬೇಕೆ ? ನೀವು ಏನು ಹೇಳುತ್ತೀರೋ ಅದನ್ನೇ ಕರೆಯೋಣ. ಮಾನ್ಯ ಸಂತೋಷ್ ಹೆಗ್ಗಡೆಯವರು ರಾಜೀನಾಮೆ ಕೊಟ್ಟ ನಂತರ, ಅವರನ್ನು ಒಪ್ಪಿಸಿ ಅವರು ರಾಜೀನಾಮೆ ವಾಪಸ್ಸು ತೆಗೆದುಕೊಂಡ ಮೇಲು ಎಷ್ಟು ಹೋಗಿದೆ ? ಮತ್ತೆ 17,58,000 illegal export ಆಗಿದೆ. scam ಗೊತ್ತಾದ ಮೇಲೂ ಇಷ್ಟು ಆಗಿದೆ. ನೀವೇ ಹೇಳಿ, ನಾವು ಹೇಳಿದರೆ ಅವರಿಗೆ ಕೋಪ ಬರುತ್ತದೆ. ಸರ್ಕಾರ ಬದುಕಿತ್ತೋ ಅಥವಾ ಸತ್ತು ಹೋಗಿತ್ತೋ ? ಏನು ಕ್ರಮ ತೆಗೆದುಕೊಳ್ಳಲಿಲ್ಲ. Admittedly illegal export is going on, illegal mining is going on, illegal transport is going on ಎಂದು ನಾವು ಹೇಳಿದ ಮೇಲೆ ಇವರು good governance, good administration, corruption free government ಕೊಟ್ಟರು ಎಂದು ಯಾರಾದರೂ ಕರೆಯುವುದಕ್ಕೆ ಸಾಧ್ಯವೇ ? ನೀವೇ ಹೇಳಿ ? ಆ ಕಾಲದಲ್ಲಿ ಬಹುಶಃ ಅವರೇ ಹೇಳಿ

ಬಿಡಬೇಕಾಗಿತ್ತು, ನಮ್ಮ ಕೈಯಲ್ಲಿ ನಿಲ್ಲಲಿಸುವುದಕ್ಕಾವುದಿಲ್ಲಪ್ಪಾ ಲೂಟಿ ಹೊಡೆಯುವವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿ ರಾಜೀನಾಮೆ ಕೊಟ್ಟು ಹೊರಟು ಬಿಡಬೇಕಾಗಿತ್ತು. ಅದನ್ನೂ ಮಾಡಲಿಲ್ಲ ? ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಹಾಗೆ ಲೂಟಿ ಹೊಡೆಯುವುದಕ್ಕೆ ಬಿಟ್ಟು ಬಿಟ್ಟರು. ಇವರ ಈ ಕ್ರಮಕ್ಕೆ ರಾಜ್ಯದ ಜನರು ಏನೆಂದು ಹೇಳಬೇಕು ? ಈ ರಾಜ್ಯಕ್ಕಾಗಿರುವ ನಷ್ಟವನ್ನು ತುಂಬಿಸುವವರು ಯಾರು ? ನನ್ನ ಪ್ರಕಾರ, ಬಳ್ಳಾರಿಯನ್ನು 10 ವರ್ಷಗಳಾದರೂ ಸರಿಪಡಿಸುವುದಕ್ಕಾಗುವುದಿಲ್ಲ. ನಾನು ಸುಮಾರು ದಿವಸಗಳ ಕಾಲ district in-charge minister ಆಗಿದ್ದೆ. ಬಹಳ powerful Chief Minister ಗಳನ್ನು ನೋಡಿದ್ದೆ. 5 ಜನ Chief Minister ಗಳ ಜೊತೆ ಮಂತ್ರಿಯಾಗಿ, ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಬಹುಶಃ ಬಳ್ಳಾರಿಯಲ್ಲಿದ್ದಂತಹ district in-charge minister ರೀತಿಯಲ್ಲಿ powerful ಆಗಿದ್ದವರು ಕರ್ನಾಟಕದ ಇತಿಹಾಸದಲ್ಲಿಯೇ ಇವತ್ತಿನವರೆವಿಗೂ ಬಂದಿಲ್ಲ. ಮುಂದೆ ಬರುವುದೂ ಇಲ್ಲ. ಆ ತರಹ ಬಿಟ್ಟು ಬಿಟ್ಟಿದ್ದರು. ಏನಾದರೂ ಮಾಡಿಕೊಳ್ಳಿ, ಲೂಟಿ ಹೊಡೆದುಕೊಳ್ಳಿ ಹೋಗಿ, ಎಂದು ಆ ತರಹವೇ ಬಿಟ್ಟು ಬಿಟ್ಟರು. ಅವರು ಕೂಡಾ ಈ ಕಡೆ ತಲೆ ಹಾಕಬಾರದು ಬಳ್ಳಾರಿ ಕಡೆಗೆ ಅಂದರು. ಒಬ್ಬರೂ ತಲೆ ಹಾಕಲಿಲ್ಲ. ಕಾಲು ಇಡುವುದಕ್ಕೆ ಅಗುತ್ತಿರಲಿಲ್ಲ. ಒಂದು ಬಾರಿ ಶ್ರೀ ಯಡಿಯೂರಪ್ಪನವರು ಜಿಂದಾಲ್ ಏರ್‌ಪೋರ್ಟ್‌ಗೆ ಹೋಗುತ್ತಾರೆ. ಒಬ್ಬ ಡಿ.ಸಿ. ಹೋಗುವುದಿಲ್ಲ., ಒಬ್ಬ ಎಸ್.ಪಿ. ಹೋಗುವುದಿಲ್ಲ, ಇನ್ನಾವುದೇ ಡಿಸ್ಟ್ರಿಕ್ಟ್ ಆಫೀಸರ್ ರಿಸೀವ್ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. How powerful he is ? Super Chief Minister, Constitution ನಲ್ಲಿ ಇಲ್ಲದೆ ಇರುವುದು, Unconstitutional powers, extra-constitutional powers, I have not come across in my 30 years of political career. Most of the time I was in power, I have not come across. ಈಗಾಗಲೇ ನಾನು ಇಲ್ಲಿ ವಿರೋಧ ಪಕ್ಷದಲ್ಲಿರುವುದು. Most of the time I was in Power, I have not come across. Chief Secretary ಏನು ಮಾಡುತ್ತಿದ್ದರು ? Chief Minister ಏನು ಮಾಡುತ್ತಿದ್ದರು ? ಯಾಕೆ ಇರಬೇಕು ಇಂಥ ಆಡಳಿತದಲ್ಲಿ ? ಇಂಥ ಆಡಳಿತ ನಡೆಸುವುದಕ್ಕಿಂತ ಬಿಟ್ಟು ಹೋಗುವುದು ಮೇಲು. ಹೋಗಲಿ, ನನಗೆ ಅವಮಾನವಾದರೂ ಪರ್ವಾಗಿಲ್ಲ, ನಾನು Leader of Opposition even. ಒಬ್ಬ ಕಾನ್‌ಸ್ಟೇಬಲ್ ಬರಲಿಲ್ಲ. ನನ್ನ ಜೊತೆಯಲ್ಲಿ, ಒಬ್ಬ ಕಾನ್‌ಸ್ಟೇಬಲ್, ಒಬ್ಬ ವಿಲೇಜ್ ಅಕೌಂಟೆಂಟ್, ಒಬ್ಬ ವಾಚರ್, ಒಬ್ಬ ಫಾರೆಸ್ಟರ್ ಬರಲಿಲ್ಲ. ಮೊನ್ನೆ ನಾನು ರಾಮಘಡ ಫಾರೆಸ್ಟ್‌ಗೆ ಹೋದಾಗ, ಪಾಪ ನಮ್ಮ

ತುಕಾರಾಂ ರವರು ಅಲ್ಲಿ ಎಂ.ಎಲ್.ಎ. ಆಗಿದ್ದವರು, ಸ್ವಲ್ಪ ಜನರನ್ನು ಕರೆದುಕೊಂಡು ಬರದಿದ್ದರೆ ನಾನು ವಾಪಸ್ಸು ಬರುತ್ತೇನೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ. I would have been finished. 10 ಮೋಟರ್ ಬೈಕ್ ಮೇಲೆ ಮೂರು ಮೂರು ಜನ ಕುಳಿತುಕೊಂಡು, ತಲೆಗೆ ಬಟ್ಟೆ ಕಟ್ಟಿಕೊಂಡು ಏನು ಧೂಳು ಎಬ್ಬಿಸುತ್ತಾರೆ. ನನ್ನನ್ನೇ ನೋಡಿಕೊಂಡು ಬೈದುಕೊಂಡು ಹೋಗುತ್ತಾರೆ. ಏನಾದರೂ ನಮ್ಮ ಕಾರ್ಯಕರ್ತರು ಇಲ್ಲದಿದ್ದರೆ ನನ್ನ ಗತಿ ಏನಾಗುತಿತ್ತೋ ? ಆಗ ನಾನು ತುಕಾರಾಂಗೆ ಹೇಳಿದೆ, ನಡೆಯಪ್ಪ ಹೊತ್ತು ಮುಳುಗುವುದಕ್ಕಿಂತ ಮುಂಚೆ, ಸೂರ್ಯ ಮುಳುಗುವುದಕ್ಕಿಂತ ಮುಂಚೆ ಹೊರಟು ಹೋಗೋಣ ಎಂದು ಹೇಳಿ ಹೊರಟು ಬಂದುಬಿಟ್ಟೆ ಏನು ಮಾಡುವುದು ? ಆಮೇಲೆ ಕಷ್ಟವಾಗುತ್ತಿತ್ತು.

ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ವಿರೋಧಪಕ್ಷದ ನಾಯಕರು ಸುದೀರ್ಘವಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಸುದೀರ್ಘವಾಗಿ ಈ ಸದನದ ಕಾರ್ಯಕಲಾಪಗಳಲ್ಲಿ ಈ ಭಾಗದಲ್ಲಿ ಆ ಭಾಗದಲ್ಲಿ ಕುಳಿತು ಮಾತನಾಡಿದ ಅನುಭವವಿದೆ. practical ಆಗಿ ಅವರು ತಪ್ಪು ತಿಳಿದುಕೊಳ್ಳುವುದಿಲ್ಲವೆಂದರೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. Action Taken Report ಬಗ್ಗೆ ನಾವು ಚರ್ಚೆಗಳನ್ನು ಮಾಡುತ್ತಿದ್ದೇವೆ. Action Taken Report ನ ವ್ಯಾಪ್ತಿಯಿಂದ ಬಹಳ ದೂರನೇ ಹೋಗಿ ಮಾತನಾಡುತ್ತಿದ್ದಾರೆ ಮತ್ತು ಅದರ ವ್ಯಾಪ್ತಿಗೆ ಬರದೇ ಇರುವಂಥ ವಿಚಾರಗಳನ್ನು ಅವರು ಸುದೀರ್ಘವಾಗಿ ಮಾತನಾಡುತ್ತಿದ್ದಾರೆ, ಇದು ಅಷ್ಟು ಸುಸೂತ್ರವಲ್ಲ ಅನ್ನುವುದು ನನ್ನ ಅಭಿಪ್ರಾಯ. ಅವರ ಅಭಿಪ್ರಾಯ ಏನಿದೆಯೋ ನನಗೆ ಗೊತ್ತಿಲ್ಲ. ಈಗಾಗಲೇ ಹೇಳಿದಂಥ ವಿಚಾರಗಳು ಬೇರೆ ಬೇರೆ ಹಂತದಲ್ಲಿ, ಬೇರೆ ಬೇರೆ ಕೋರ್ಟಿನಲ್ಲಿದೆ. ಲೋಕಾಯುಕ್ತರ ನೇಮಕಾತಿ ಬಗ್ಗೆ ಕೂಡಾ ಹೈಕೋರ್ಟಿನಲ್ಲಿ ರಿಟ್ ಫೈಲ್ ಆಗಿದೆ. Action Taken Report ಬಗ್ಗೆ ನಮ್ಮ ಸೀಮಿತ ಪರಿಧಿಯಲ್ಲಿ ನಾವು ನಮ್ಮ ವಿಚಾರಗಳನ್ನು ಮಂಡನೆ ಮಾಡಬೇಕು. ನನ್ನ ಅಭಿಪ್ರಾಯದಲ್ಲಿ ಖಂಡಿತವಾಗಿಯೂ ಇದು ವ್ಯಾಪ್ತಿಯಿಂದ ಹೊರಗಿದೆ. ನಾನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ ಆ ವ್ಯಾಪ್ತಿಯೊಳಗೆ Action Taken Report ಬಗ್ಗೆ ಏನು ಚರ್ಚೆಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಉತ್ತರ ಕೊಡುವುದಕ್ಕೆ ನಾನು ತಯಾರಿದ್ದೇನೆ. ಆ ವ್ಯಾಪ್ತಿಯೊಳಗೆ ಸ್ವಲ್ಪ ಅವರು ಬಂದರೆ ನಮಗೆ ಒಳ್ಳೆಯದಾಗುತ್ತದೆ ಮತ್ತು ಈ ಚರ್ಚೆಗೆ ಹೆಚ್ಚು ಗೌರವ

ಬರುತ್ತದೆ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ನಾನು ವ್ಯಾಪ್ತಿ ಬಿಟ್ಟು ಹೋಗೇ ಇಲ್ಲ, ಇದರ ಒಳಗೇ ಇದ್ದೀನಿ ನೋಡಿ. ಇದನ್ನು ಬಿಟ್ಟು ನಾನು ಎಲ್ಲಾದರೂ ಹೊರಗಡೆ ಹೆಜ್ಜೆ ಇಟ್ಟಿದ್ದೀನಾ ನೋಡಿ. Iam within the report of the Lokayukta, I have not stepped out. ಲೋಕಾಯುಕ್ತ ರಿಪೋರ್ಟ್ ಬಿಟ್ಟು ಬೇರೆ ಏನು ಹೇಳುತ್ತಿದ್ದೇನೆ ? ಹೇಳಿ ನೋಡೋಣ, ಯಾವುದಾದರೂ ಒಂದು sentence ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ : ನೀವು ಕೇಳುತ್ತಿರುವುದಕ್ಕೆ ನಾನು ಹೇಳುತ್ತಿರುವುದು. ಈಗಾಗಲೇ ಹಲವಾರು ಕೇಸ್‌ಗಳು ಲೋಕಾಯುಕ್ತರಿಗೆ ಸಂಬಂಧಪಟ್ಟದ್ದು, ಅದು ಹೈಕೋರ್ಟಿನಲ್ಲಿದೆ. sanctioning ಅನ್ನು challenge ಮಾಡುವಂಥದ್ದು, ಬೇರೆ ಬೇರೆ ಕಡೆಗಳಲ್ಲಿ, ಲೋಕಾಯುಕ್ತ ಕೋರ್ಟಿನಲ್ಲಿ ಕೂಡಾ ಬೇರೆ ಬೇರೆ ಕೇಸ್‌ಗಳು ಅದರ ವ್ಯಾಪ್ತಿಯಲ್ಲಿ ಬಂದಿರುವಂಥವು ಈಗಾಗಲೇ ಕೋರ್ಟಿನಲ್ಲಿವೆ. ನಾನು ಹೇಳುತ್ತಿರುವುದು ಅಧಿಕಾರಿಗಳಿಗೆ ಸೀಮಿತವಾಗಿರುವಂಥ Action Taken Report ಬಗ್ಗೆ ಅವರು ಪ್ರಸ್ತಾಪ ಮಾಡುವುದು ಸೂಕ್ತ. ಆದರೆ, ಅದನ್ನು ಬಿಟ್ಟು ಯಾರು ರಾಜಕಾರಣಿಗಳ ಮೇಲೆ Action Taken Report ಮಾಡಿದ್ದಾರೆ, ಅದನ್ನು ಪ್ರಸ್ತಾಪ ಮಾಡುವಂತಿದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಅದು Subjudice ಆಗುತ್ತದೆ. ಅದು Court ನಲ್ಲಿದೆ ಅದರಿಂದ ಅವರು ಮಾತನಾಡುವಂತೆ ಇಲ್ಲ ಎನ್ನುವುದು ನನ್ನ ವಾದ. ಅದು Action Taken Report within that the Officers, ಏನು ಮಾಡಿದ್ದಾರೆ ಎಂದು ಹೇಳುವುದರ ಬಗ್ಗೆ, ನಾವು ತೆಗೆದುಕೊಳ್ಳಲಿಲ್ಲ ಎಂದು ಹೇಳುವುದರ ಬಗ್ಗೆ, ಅದಕ್ಕೆ ಸಂಬಂಧಪಟ್ಟಿದ್ದರ ಬಗ್ಗೆ, ಈಗ ಅವರು ಉಲ್ಲೇಖ ಮಾಡಿದ್ದರ ಬಗ್ಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬೇಲೆಕೇರಿಯ ಬಗ್ಗೆ ಮತ್ತೊಂದರ ಬಗ್ಗೆ ಎಲ್ಲಾ ವರದಿಗಳನ್ನು ತರಿಸಿಕೊಂಡಿದ್ದೇನೆ. ಈ ಸದನಕ್ಕೆ ಯಾವುದನ್ನೂ ಮುಚ್ಚಿಡುವಂಥ ಪ್ರಯತ್ನಗಳನ್ನು ನಾವು ಮಾಡುವುದಿಲ್ಲ. ಬೇಲೆಕೇರಿಯದ್ದು ಇರಬಹುದು, ಅಥವಾ ಅಧಿಕಾರಿಗಳ ಮೇಲೆ Action Taken Report ಇರಬಹುದು, ಕಾನೂನಿನ ವ್ಯಾಪ್ತಿಯಲ್ಲಿ ಏನೆಲ್ಲಾ ಮಾಡಬೇಕು ಅದೆಲ್ಲವನ್ನು within the time frame, ಕಾನೂನಿನ ಚೌಕಟ್ಟಿನೊಳಗೆ ಏನೆಲ್ಲವನ್ನು ಮಾಡಬೇಕೋ ಅದೆಲ್ಲವನ್ನು ಮಾಡುತ್ತೇವೆ. ನಾಳೆ submit ಮಾಡುತ್ತೇನೆ. ಆದರೆ, ಎಲ್ಲೋ ಅಲ್ಲಿ ಹಿಂದಿನ ಮುಖ್ಯಮಂತ್ರಿಗಳು ಹೋದರು, ಅಲ್ಲಿ ಯಾರೂ ಬರಲೇ ಇಲ್ಲ, ಈ ರೀತಿ ಆಗುವಂಥ ಪರಿಸ್ಥಿತಿಗಳು ಆಗಬಾರದು. ಇದೆಲ್ಲಾ

ಅದರ ವ್ಯಾಪ್ತಿಯಲ್ಲಿ ಬರುವಂಥದಲ್ಲ. ಯಾವುದೋ ಒಂದು ರೀತಿಯಲ್ಲಿ ವಿಚಾರದಿಂದ ದೂರ ಹೋಗಿ ಆ ವಿಚಾರದ ವ್ಯಾಪ್ತಿಯಲ್ಲಿ ಏನೂ ಇಲ್ಲ ಅಂತ ಗೊತ್ತಾದ ಮೇಲೆ ಹೀಗೆ ಮಾತನಾಡುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ಇದಕ್ಕೆ ಅವಕಾಶ ಕೊಡಬಾರದು ಎನ್ನುವುದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದು Subjudice ಆಗುತ್ತದೆ ಎನ್ನುವುದು ನನ್ನ ಭಾವನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಈ ರಿಪೋರ್ಟ್ ಸರ್ಕಾರದಲ್ಲಿದೆ. ಈ ರಿಪೋರ್ಟಿನಲ್ಲಿರುವ ವಿಚಾರಗಳನ್ನು ಬಿಟ್ಟು ಬೇರೆ ಏನೂ ನಾನು ಹೇಳುತ್ತಿಲ್ಲ. ವರದಿಯಲ್ಲಿ ಇರುವಂಥದ್ದು Subjudice ಎಲ್ಲಿ ಬರುತ್ತದೆ ಇದರಲ್ಲಿ, ಎಲ್ಲೂ ಅದು ಬರುವುದಿಲ್ಲ. ನಾನು ಯಾವುದೇ ಕೋರ್ಟಿನಲ್ಲಿ challenge ಮಾಡಿರುವಂಥ ವಿಚಾರಗಳನ್ನು ಅದರ merit ಮೇಲೆ ಏನೂ ಮಾತನಾಡುವುದಕ್ಕೆ ಹೋಗುತ್ತಿಲ್ಲ. Whatever facts submitted by Lokayukta, which are in the report, I am confining to only those facts. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಅದನ್ನೆಲ್ಲಾ ಹೇಳಲಿ. ಏನೇನು ಹೇಳಬೇಕೋ ಎಲ್ಲಾ ಹೇಳಲಿ, ಬೇಲಿಕೇರಿಯದ್ದು ಹೇಳಲಿ, 2 ಕೋಟಿ 92 ಲಕ್ಷ ಕದ್ದವರು ಯಾರು ಎಂದು ಹೇಳಲಿ, 6 ಲಕ್ಷ ಟನ್ ಕದ್ದವರು ಯಾರು? ಎಂದು ಹೇಳಲಿ invoice ನಲ್ಲಿ ಮಾಡಿದವರು ಯಾರು? 222 ಕೋಟಿ invoice ನಲ್ಲಿ ಹೋಯಿತು ಅದು ಯಾರು ಮಾಡಿದರು ಎನ್ನುವುದನ್ನು ಹೇಳಲಿ, 16 ತಿಂಗಳಲ್ಲಿ 1850 ಕೋಟಿ ಹೋಯಿತು ಅವೆಲ್ಲಾ ಹೇಳಲಿ. ಅವೆಲ್ಲಾ ಉತ್ತರಗಳನ್ನು ಹೇಳಲಿ, I have no objection, My point is 6 ತಿಂಗಳಿನಿಂದ ಇದು ಇದೆ. ಅವರು ಇಲ್ಲಿ ಒಂದು Report of the High Level Committee constituted by the State Government to prepare a Plan of Action on the 2nd report of the Hon'ble Lokayukta ಎಂದು ಒಂದು ಪುಸ್ತಕವನ್ನು ಕೊಟ್ಟಿದ್ದಾರೆ. ಇದನ್ನು ನೋಡಿದಾಗ, ಅವನು ಯಾರೋ ಒಬ್ಬ ವಿನೋದ್ ಗೋಯೆಲ್ ಅಂತ ಇದ್ದಾನೆ. ಮುಖ್ಯಮಂತ್ರಿಗಳೇ ಅವನು ಕೇಂದ್ರ ಸರ್ಕಾರದ ಲೆಟರ್‌ಗಳನ್ನೇ ಫೋರ್ಜ್ ಮಾಡಿದ್ದಾನೆ. ಫೋರ್ಜ್ ಮಾಡಿ, ಇಲ್ಲಿ lift ಮಾಡುವುದಕ್ಕೆ ಸೀಲ್ ಹೊಡೆದುಕೊಂಡಿದ್ದಾನೆ. ಜಂತಕಲ್ ಮೈನಿಂಗ್ ಕಂಪನಿ ಒಂದು, ಇದನ್ನು ತೆಗೆದುಕೊಂಡು ಲಿಫ್ಟ್ ಮಾಡುವುದಕ್ಕೆ permit ತೆಗೆದುಕೊಂಡು ಹೊಡೆದಿದ್ದಾನಲ್ಲ, ಅವನು ಫೋರ್ಜರಿ ಮಾಡಿದ್ದಾನಲ್ಲ. Forest act ಪ್ರಕಾರ ಅವನ ಮೇಲೆ ಏನು ಕ್ರಮ ತೆಗೆದುಕೊಂಡರು

ಎಂದು ಅವರು ಹೇಳಲಿ, ಇಂಥಿಂಥ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಅವನ ಮೇಲೆ ಎಂದು ಹೇಳಲಿ ಬೇಕಾದಷ್ಟು ಜನ ಹೇಗೆ illegal extract ಮಾಡಿದರು ಎಂದು ಇದೆ. ಈ OMC Company, (AMC) Associated Mining Company ಅವರೆಲ್ಲ ಸೇರಿಕೊಂಡು 73 ಲಕ್ಷ ಮಾಡಿದ್ದಾರೆ ಅಂತ ಇದೆ. ಆಮೇಲೆ ಅಧಿಕಾರಿಗಳು ಇಂಥಿಂಥವರಿಗೆ ಲಂಚ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಇಂಥಿಂಥವರೆಲ್ಲ ಲಂಚ ತೆಗೆದುಕೊಂಡಿದ್ದಾರೆ. ಮೇಲುಗಡೆಯಿಂದ ಹಿಡಿದು ಕೆಳಗಡೆಯವರೆಗೆ ಕಾನ್‌ಸ್ಟೇಬಲ್‌ಗೆ ಇಷ್ಟು, ದಫೇದಾರ್‌ಗೆ ಇಷ್ಟು, ಸಬ್‌ಇನ್ಸ್‌ಪೆಕ್ಟರ್‌ಗೆ ಇಷ್ಟು, ಇನ್ಸ್‌ಪೆಕ್ಟರ್‌ಗೆ ಇಷ್ಟು, ನನಗೆ ಇರುವ information ನ್ನು ನಾನು ಹೇಳುತ್ತಿಲ್ಲ. ನನಗೆ ಇನ್ನು ಬೇರೆ ಬೇರೆ information ಇವೆ, ಅವೆಲ್ಲ ಹೇಳುತ್ತಿಲ್ಲ ನಾನು. ಬರೇ report ನಲ್ಲಿರುವುದನ್ನು ಮಾತ್ರ ಹೇಳುತ್ತಿದ್ದೇನೆ. ನನ್ನ Informationಗೆ evidence ಇರುವುದಿಲ್ಲ ಸುಮ್ಮನೆ ಏಕಪ್ಪ ಎಂದು ನಾನು ಹೇಳುತ್ತಿಲ್ಲ. ಇಲ್ಲಿ ಎಲ್ಲಾ ಸಾಕ್ಷಿಯನ್ನು ಕರೆಸಿಕೊಂಡು ಬಂದು ಹೇಳುವುದಕ್ಕೆ ಆಗುವುದಿಲ್ಲ ಎಂದು ನಾನು ಹೇಳುತ್ತಿಲ್ಲ. ಈ Report ನಲ್ಲಿರುವುದನ್ನು ಮಾತ್ರ ಹೇಳುತ್ತಿದ್ದೇನೆ. ಈಗ Section-14 ಏನು ಹೇಳುತ್ತದೆ ಹೇಳಿ ನೋಡೋಣ. Section-14 ನಾನು ಆಗಲೇ ಓದಿ ಹೇಳಿದೆ ಮಾನ್ಯ ಉಪಾಧ್ಯಕ್ಷರೆ, 3 ತಿಂಗಳು, 90 ದಿನಗಳೊಳಗೆ action ತೆಗೆದುಕೊಳ್ಳಬೇಕು. ಇಲ್ಲದಿದ್ದರೆ it is deemed to be accepted ಅಂಥ ಇದೆ. ಈಗ accept ಆಯ್ತಲ್ಲ ಇದು. Report is accepted. When it is accepted, all the recommendations made by the Lokayukta will have to be implemented or the Government should come out by saying that these are the recommendations accepted and these are the recommendations which can't be implemented and they can't be accepted ಎಂದು ಹೇಳಬೇಕಾಗಿತ್ತಲ್ಲವೆ? There are so many suggestions, so many recommendations made by the Lokayukta. ಇಲ್ಲಿ Chapter-30, ಲೋಕಾಯುಕ್ತ report ನಲ್ಲಿ suggestions, recommendations ಅವೆಲ್ಲಾ ಇವೆ. ಹೇಳಬೇಕಲ್ಲ? ಈಗ illegal mining ಮಾಡುವವರು raising contract ಎಂದು ಒಂದು ಹೊಸದಾಗಿ research ಮಾಡಿ ಕಂಡುಹಿಡಿದು ಬಿಟ್ಟಿದ್ದಾರೆ. ಅದು Mines & Minerals Act-1957 ಇದೆಯಲ್ಲ it is unknown to the Act ಎಂದು ಹೇಳುತ್ತಾರೆ ಅವರು, ಅದಕ್ಕೆ ಅವರಿಗೆ ಏನು ಬಿಟ್ಟಿದ್ದೀರಿ. ಜಿಂದಾಲ್ ನವರು ಮೈಸೂರು ಮಿನರಲ್ಸ್ ಜೊತೆ ಸೇರಿಕೊಂಡು ಇಬ್ಬರೂ ಸೇರಿಕೊಂಡು ಲೂಟಿ ಹೊಡೆದು ಬಿಟ್ಟಿದ್ದಾರೆ. ಅವರ

ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಈಗ Empowered Committee of the Supreme Court ಎಲ್ಲಾ illegal mining, exports ನಿಲ್ಲಿಸಿದ ಮೇಲೆ State ನಿಂದ Monitoring Committee ಎಂದು ಮಾಡಿದ್ದಾರೆ. ಆ Monitoring Committee ನಲ್ಲಿ ಅಧಿಕಾರಿಗಳಿದ್ದಾರೆ. ಅವರು ಎಲ್ಲೆಲ್ಲಿ extract ಮಾಡಿ dump ಮಾಡಿರುತ್ತಾರಲ್ಲ ಅದನ್ನು ಹರಾಜು ಮಾಡುತ್ತಿದ್ದಾರೆ. ಅದರಲ್ಲಿ ಯಾರು ಪಾಲ್ಗೊಳ್ಳುತ್ತಿರುವವರು? ಅದನ್ನು ತೆಗೆದುಕೊಳ್ಳುತ್ತಿರುವವರು ಯಾರು? ಹೇಗೆ ತೆಗೆದುಕೊಳ್ಳುತ್ತಿದ್ದಾರೆ? ಹೇಗೆ ನಡೆಯುತ್ತಿದೆ ಎನ್ನುವುದು ಗೊತ್ತಾಗಬೇಕಲ್ಲ?

ಉಪಾಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಒಂದು ವಿನಂತಿ. First of all ಈ report ಸದನದಲ್ಲಿ lay ಆಗಿಲ್ಲ. ಲೋಕಾಯುಕ್ತ ವರದಿ lay ಆಗಿಲ್ಲ. ತಾವು ಒಂದು point ಹೇಳಿದಿರಿ. ವರದಿ ಸರ್ಕಾರಕ್ಕೆ ಕೊಟ್ಟು 6 ತಿಂಗಳಾಯಿತು. ಅಂದರೆ It is deemed to be accepted ಅಂತ ಎರಡು points ಹೇಳಿದಿರಿ. ಈಗ lay ಆಗದ ವರದಿಯ ಬಗ್ಗೆ ಸುದೀರ್ಘ ಚರ್ಚೆ ಮಾಡಬಹುದಾ? ಅನೇಕ points ತಾವು raise ಮಾಡಿರುವಂಥದ್ದು, ಏನು lapses ಆಗಿದೆ ಎಂದು ಹೇಳುವುದರ ಬಗ್ಗೆ ಮತ್ತು ಸರ್ಕಾರ ಎಲ್ಲಿ ವಿಫಲವಾಗಿದೆ ಎಂದು ಹೇಳುವುದರ ಬಗ್ಗೆ ತಾವು ಬೆಳಕು ಚೆಲ್ಲುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ 6 ತಿಂಗಳಾಯಿತು. Lay ಮಾಡಬೇಕಿತ್ತು.

ಉಪಾಧ್ಯಕ್ಷರು: So. ಅದರ ಬಗ್ಗೆ . . .

ಶ್ರೀ ಸಿದ್ದರಾಮಯ್ಯ ಆಯಿತು, ಲೋಕಾಯುಕ್ತ report ಕೊಟ್ಟ ಮೇಲೆ ಎಷ್ಟು ಸಾರಿ ಸದನ ಸೇರಿತು? ಇಂತಹ ಒಂದು ಮಹತ್ತರವಾದಂತಹ ವರದಿ ಬಂದಿರುವಾಗ ಕೋಟ್ಯಂತರ ರೂಪಾಯಿ ಲೂಟಿ ಆಗಿರುವಾಗ ಕಳ್ಳರು ಮನೆಯಲ್ಲಿಯೇ ಇರುವವರು, ಸರ್ಕಾರದಲಿಯೇ ಇದ್ದರು. ಈ report ಅನ್ನು ಇಲ್ಲಿ ಮಂಡನೆ ಮಾಡದೇ ಹೋದರೆ ನಾವು ಸುಮ್ಮನೆ ನೋಡುತ್ತಾ ಕುಳಿತುಕೊಳ್ಳಬೇಕಾ? ಸರ್ಕಾರದ ಹಣ ಹೋದರೆ ಹೋಗಲಿ ತಿಂದುಕೊಂಡು ಹೊರಟು ಹೋಗಲಿ ಎಂದು ಸುಮ್ಮನೆ ಕುಳುತುಕೊಳ್ಳಬೇಕಾ ಹೇಳಿ, Is it not our responsibility as a opposition party? What happended to this report ಎಂದು ಕೇಳುವುದು is it not our duty? is it not our responsibility? That is what I am asking.

ಉಪಾಧ್ಯಕ್ಷರು: ಖಂಡಿತ ಪ್ರಸ್ತಾಪ ಮಾಡಿ, lapses ಬಗ್ಗೆ ಖಂಡಿತಾ ಹೇಳಿ.

ಶ್ರೀ ಸಿದ್ದರಾಮಯ್ಯ ಮಾನ್ಯ ಉಪಾಧ್ಯಕ್ಷರೆ, that is what I am asking. ಈ ರಾಜ್ಯದ ಬೊಕ್ಕಸ ಲೂಟಿ ಆಗಿದೆ. ಖಜಾನೆಗೆ ಬರಬೇಕಾದ ದುಡ್ಡಲ್ಲಿ ಇಷ್ಟೊಂದು ಕೋಟಿ ಹೋಗಿದೆ. 16 ಸಾವಿರ 85 ಕೋಟಿ ಹೋಗಿದೆ ಎಂದು ಹೇಳಿದ್ದಾರೆ. CEC ಏನು ಶಿಫಾರಸ್ಸು ಮಾಡಿದ್ದಾರೆ. ಅದನ್ನು penalty ಆಗಿ ಅದರ 5 ಪಟ್ಟು ವಸೂಲು ಮಾಡಬೇಕು ಎಂದು ಹೇಳಿದ್ದಾರೆ. 16 ಸಾವಿರ 85 ಕೋಟಿ 5 ಪಟ್ಟು ಅಂದರೆ ಎಷ್ಟಾಯಿತು ಸ್ವಾಮಿ, 80 ಸಾವಿರ ಕೋಟಿ ಆಯಿತು. 80 ಸಾವಿರ ಕೋಟಿ ಯಾರ್‍ಯಾರಿಂದ ವಸೂಲು ಮಾಡಬೇಕು ಅಂತ ಪಟ್ಟಿನಾದ್ರು ಮಾಡಬೇಕಲ್ಲ? ಇವತ್ತಿನವರೆಗೆ ಮಾಡಿದ್ದಾರ? ಮತ್ತೆ ಏನು ಮಾಡುತ್ತಿದ್ದಾರೆ? ಈಗ ನಾವು ಯಾವ conclusion ಗೆ ಬರಬೇಕು? ಅವರು ಕ್ರಮ ತೆಗೆದುಕೊಳ್ಳದೆ ಇರಲಿ ಎಂದು ನಾವು ಸದನದಲ್ಲಿ raise ಮಾಡದೆ ಸುಮ್ಮನೆ ಇರಬೇಕಾ? ಅವರು ಇನ್ನೂ ಒಂದು ವರ್ಷವಾದರೂ ಕ್ರಮ ತೆಗೆದುಕೊಳ್ಳುವುದಿಲ್ಲ, ಮೊಲೆಗೆ ಎಸೆದುಬಿಡುತ್ತಾರೆ. Can we keep quiet as an opposition party? Is it not our responsibility to bring it to the notice of the Government, to demand the Government to take action? That is what I am doing. That is what we are doing. I am within the ambit, I am not going our. ಇದು ನಿಮಗೂ convincel ಆಗಿದೆಯಲ್ಲವೇ? ಚರ್ಚೆ ಮಾಡುವುದಕ್ಕೆ ಕೊಟ್ಟು, ಇನ್ನೂ report lay ಆಗಿಲ್ಲ. ಚರ್ಚೆ ಮಾಡಬೇಡಿ ಎಂದರೆ ಹೇಗಾಗುತ್ತದೆ? It is already under discussion.

ಡಾ|| ಹೆಚ್. ಸಿ. ಮಹದೇವಪ್ಪ: ಕಳೆದ ಅಧಿವೇಶನದಲ್ಲೂ ಸಹ ಇದರ ಬಗ್ಗೆ ಚರ್ಚೆಯಾಗಿದೆ. It was discussed in the previous session also. It would have been placed before the House by now. 90 days ನಲ್ಲೆ accept ಮಾಡಬೇಕಾಗಿತ್ತು.

ಶ್ರೀ ಸಿದ್ದರಾಮಯ್ಯ ಇದು ನಿಮಗೆ ಅನುಕೂಲವಾಗಲಿ ಎಂದು ಹೇಳುತ್ತಿರುವುದು ನಾನು.

ಡಾ|| ಹೆಚ್. ಸಿ. ಮಹದೇವಪ್ಪ: Neither they have placed the document in the House nor they have taken action.

ಶ್ರೀ ಸಿದ್ದರಾಮಯ್ಯ ಮಾನ್ಯ ಉಪಾಧ್ಯಕ್ಷರೆ, ಆಯಿತು, OMC company, AMC

company, ಕಾರದಪುಡಿ ಮಹೇಶ, ಸ್ವಸ್ತಿಕ್ ನಾಗರಾಜ, ಇಲ್ಲಿ ಒಬ್ಬರು MLA Nagendra ಅಂತ ಹೆಸರಿದೆ. ನಾನು ಹೇಳುವುದಲ್ಲ. 4 ಹೆಸರಿದೆ. ಇವರಿಂದೆಲ್ಲಾ ಎಷ್ಟೆಷ್ಟು ನಷ್ಟ ಆಗಿದೆ ಎಂದು ಹೇಳುತ್ತಾರೆ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ? Has anybody has gone to jail, those who have looted public money and public property? So, ಬೇನಾಮಿ accounts ಗಳನ್ನು ಮಾಡಿಬಿಟ್ಟಿದ್ದಾರೆ. ಬೇನಾಮಿ accounts ನಲ್ಲಿ ಮಾನ್ಯ ಉಪಾಧ್ಯಕ್ಷರೆ, ಬೇನಾಮಿ Accounts ಹೇಗೆ ಮಾಡಿದ್ದಾರೆಂದರೆ, A pool of irregularities, AMC ಅಂತ ಒಂದು chapter ಅಧ್ಯಕ್ಷರೆ, A pool of irregularities chapter 7. ಅಲ್ಲಿ ಹೇಳುತ್ತಾರೆ. account ಗಳು ಹೇಗೆ ಸೃಷ್ಟಿಯಾಗುತ್ತವೆ? ಯಾವ ದುಡ್ಡು ಯಾರ ಹೆಸರಿನಲ್ಲಿ ಹೋಗುತ್ತದೆ? ಯಾರ ಹೆಸರಿನಲ್ಲಿ ತೆಗೆದುಕೊಳ್ಳುತ್ತಾರೆ. ಅದು ಎಲ್ಲಿ ಹೋಗುತ್ತದೆ? ಯಾವಾಗ ತೆಗೆಯುತ್ತಾರೆ? ಇಂತಹುದೆಲ್ಲಾ. ಪಾಪ ಒಬ್ಬ ordinary worker ಅವನ ಹೆಸರಿನಲ್ಲಿ Markandeshwara Minerals ಅಂತ ಒಂದನ್ನು ಹುಟ್ಟು ಹಾಕಿ ಬಿಡುತ್ತಾರೆ. ಅದರ Proprietor ಯಾರಪ್ಪ ಅಂದ್ರೆ, ಕಾಶಿ ವಿಶ್ವನಾಥ ಅಂತ, ಇದು ಸುಮ್ಮನೆ ಹೆಸರು. ಕಾಶಿ ವಿಶ್ವನಾಥ. ಇವನದು ಒಂದು account open ಆಗುತ್ತದೆ. account ಗೆ ದುಡ್ಡು ಯಾರು ಹಾಕಿದ್ರು, ಯಾರು ತೆಗೆದುಕೊಂಡರು ಇವರಿಗೆ ಗೊತ್ತಿಲ್ಲ. ಒಂದು ಸಾರಿ 270 ಕೋಟಿ credit ಆಗುತ್ತದೆ. ಆಮೇಲೆ 269 ಕೋಟಿ debit ಆಗುತ್ತೆ. ಒಂದು question ಮಾಡ್ತಾರೆ, ಲೋಕಾಯುಕ್ತದವರು ಕರೆದು, ನಂಗೇನು ಗೊತ್ತಿಲ್ಲ. ಸ್ವಾಮಿ ಅಂತಾನೆ ಪಾಪ. ಕಾಶಿ ವಿಶ್ವನಾಥ. ಯಾರೋ ಸುಮ್ಮನೆ ಒಂದು account ಹುಟ್ಟು ಹಾಕಿದರು. ಇದರ ಮೇಲೆ ನೀವೇನು ಕ್ರಮ ತೆಗೆದುಕೊಂಡಿದ್ದೀರಿ? ಹಾಗೇನೆ ಈ Eagle Trading Company, ಅದು illegal trading company. Eagle Trading Company and Logistics. ಇದರ proprietor ಯಾರು ಅಂದರೆ ನಮ್ಮ ಎಂ.ಎಲ್.ಎ. ನಾಗೇಂದ್ರ ಅವರು. ಅದರಲ್ಲಿ ಎಷ್ಟು ವ್ಯವಹಾರಗಳು ನಡೆದಿವೆ? Illicit export ಎಲ್ಲಾ ಆಗಿದೆ. ಆ ಹೆಸರಿನಲ್ಲಿ report ಕೊಟ್ಟಿದ್ದಾರೆ. Eagle Mining and Logistics Company, A/c No. 7740. 649 ಕೋಟಿ ಇಲ್ಲಿ ವ್ಯವಹಾರ ನಡೆದಿದೆ. ಇದಕ್ಕೇನೂ royalty ಕಟ್ಟಿಲ್ಲ. Forst tax ಕಟ್ಟಿಲ್ಲ. Development tax ಏನೂ ಕಟ್ಟಿಲ್ಲ. ಈ ದುಡ್ಡು ಹೀಗೆ ಹೋಗಿದೆಯಲ್ಲಾ, ಇದನ್ನು ಯಾರು ಮತ್ತೆ ಕೊಡುವವರು? ಸರ್ಕಾರಕ್ಕೆ ಬರಬೇಕಾದಂತಹ ದುಡ್ಡನ್ನು ಹಾಗೆಯೇ ಬಿಟ್ಟು ಬಿಡುವುದಾ? ಹೇಳದೇ ಹೋದರೆ ಹೇಗೆ ಆಗುತ್ತದೆ? ನಾನು ಸುಮ್ಮನೆ ನಿಮಗೆ ಒಂದು ಉದಾಹರಣೆ ಹೇಳಿದೆ. ಬೇಕಾದಷ್ಟು

ಇದ್ದಾವೆ. ನಾನು ಎಲ್ಲವನ್ನೂ ಹೇಳವುದಕ್ಕೆ ಹೋಗುವುದಿಲ್ಲ.

ಉಪಾಧ್ಯಕ್ಷರು: ನೀವು under-invoice ಬಗ್ಗೆ ಕೂಡ ಬೆಳಕು ಚೆಲ್ಲಿ

ಶ್ರೀ ಸಿದ್ದರಾಮಯ್ಯ Under-invoice ನಲ್ಲಿ 2222 ಕೋಟಿ ರೂಪಾಯಿ ಇದೆ. It is not a small amount. Under-invoicing ಯಾರು ಮಾಡಿದವರು? Everybody knows. It is by OMC & AMC. AMC ಗೆ ಜನಾರ್ದನ ರೆಡ್ಡಿ ಮತ್ತು ಅವರ ಧರ್ಮಪತ್ನಿ ಅವರುಗಳು ಹೇಗೆ Director ಆದರು? ಅದರ owner ಗಳಾದರು ಎನ್ನುವುದು ಕೂಡ ಗೊತ್ತಿಲ್ಲ. ಹೇಗೆ back door entry ಆಯಿತು ಎನ್ನುವುದು ಕೂಡ report ನಲ್ಲಿದೆ. How they have looted ಎನ್ನುವುದೆಲ್ಲಾ ಇದರಲ್ಲಿದೆ. ನಾನು ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ, If we don not take serious action against them, concrete action against them, ನಮ್ಮ ರಾಜ್ಯದ ಜನರಿಗೆ ನಾವು ಮೋಸ ಮಾಡಿದ ಹಾಗೆ ಆಗುವುದಿಲ್ಲವಾ? ಈ ರಾಜ್ಯದ ಸಂಪತ್ತನ್ನು ಉಳಿಸುವುದಕ್ಕೆ ಆಗುವುದಿಲ್ಲ ಎಂದರೆ ಜನ ನಮ್ಮನ್ನು ಏನೆಂದು ಕರೆಯುತ್ತಾರೆಂದು ನೀವು ಹೇಳಿ. ಮಾನ್ಯ ಉಪಾಧ್ಯಕ್ಷರೆ ಹೇಳಿ. ಅದರಿಂದ ನಾನು ಇದನ್ನೆಲ್ಲಾ ಪ್ರಸ್ತಾಪ ಮಾಡುತ್ತಿದ್ದೇನೆ. Not that, ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುತ್ತಿಲ್ಲ. ಈ ರಿಪೋರ್ಟ್ ಇರುವುದರಿಂದ ಸುಮ್ಮನೇ ಕೆಲವು ಪಾಯಿಂಟ್ಸ್ ಗಳನ್ನು ನಾನು mention ಮಾಡುತ್ತಿದ್ದೇನೆ. ಇಲ್ಲಿ 464 ಪೇಜ್ ಇದೆ. ನನಗೆ ಇದನ್ನು ಓದಬೇಕಾದರೆ 10 ಘಂಟೆ ಬೇಕಾಯಿತು. I took 10 hours ಒಂದು ರೀಡಿಂಗ್ ಕೊಡಬೇಕಾದರೆ. ಅವೂ ಎಲ್ಲಾ ಜ್ಞಾಪಕಕ್ಕೆ ಬರುತ್ತಿಲ್ಲ. ಎಲ್ಲಾ ಮರೆತು ಹೋಗುತ್ತಿದೆ. ನಾನು ಪರೀಕ್ಷೆಗೂ ಇಷ್ಟು ಓದಿರಲಿಲ್ಲ. ಏಕೆಂದರೆ 464 ಪೇಜ್ ಓದಬೇಕಲ್ಲಾ ಸ್ವಾಮಿ? ಒದದೇ ಬಂದು ಇಲ್ಲಿ ಬುರುಡೆ ಬಿಡುವ ಹಾಗಿಲ್ಲ. ನನಗೆ ದಿಗ್ಭ್ರಮೆ ಆಗಿ ಬಿಟ್ಟಿತು. ನೀವು ಪೂರಾ ಓದಿದ್ದೀರಾ? ಒಂದು ಸಾರಿ ಓದಿ. ನೀವು ಸ್ವಲ್ಪ ಓದಿರಬೇಕೆಂದು ಕಾಣಿಸುತ್ತದೆ. ಎಲ್ಲವನ್ನೂ ಓದಿ. ನಾನು ಎಲ್ಲಾ ಮಾನ್ಯ ಸದಸ್ಯರು ಅದನ್ನು ಓದಬೇಕು ಎಂದು ಹೇಳುತ್ತೇನೆ. ದಿಗ್ಭ್ರಮೆ ಆಗಿ ಬಿಡುತ್ತದೆ ಓದಿದರೆ. ಹೀಗೂ ಉಂಟೇ, ಹೀಗೂ ನಡೆದಿತ್ತು? ಜಿಜೆಪಿ ಸರ್ಕಾರದಲ್ಲಿ ಹೀಗೂ ನಡೆಯುತ್ತಿದೆಯೇ?

ಶ್ರೀ ಸಿದ್ದು ಸವದಿ: ಒಂದು ನಿಮಿಷ. ಸಾರ ತಾವು ಬಹಳ ಚೆನ್ನಾಗಿ ಹೇಳುತ್ತಿದೀರಿ. ನಮಗೂ ಸಂತೋಷ ಎನಿಸುತ್ತಿದೆ. ಆದರೆ ಅದನ್ನು ಪೂರಾ ಹೇಳಬೇಕು ಸಾರ್. ಎಂದಿನಿಂದ mining startl ಮಾಡಿದರು? Mining license ಅವರಿಗೆ ಯಾರು ಕೊಟ್ಟರು?

ಇಷ್ಟೆಲ್ಲಾ ಲೂಟಿ ಬಿಜೆಪಿ ಸರ್ಕಾರದಲ್ಲಿ ಆಯಿತೋ? ಮೊದಲು ಆಯಿತೋ? ತಾವೇ ಅಧಿಕಾರದಲ್ಲಿದ್ದೀರಿ. ಅದು ಆಯಿತೋ ಇಲ್ಲವೋ? ಲೋಕಾಯುಕ್ತರ ವರದಿ ಎಂದಿನಿಂದ ಕೊಡು ಎಂದು ಹೇಳಿದರು? ಆಗ ಏಕೆ ಕೊಟ್ಟರು? ಅಕೌಂಟ್ ಓಪನಿಂಗ್ ಯಾವ ತಾರೀಖಿನಿಂದ ಮಾಡಿದರು? ಅಕೌಂಟ್ ಓಪನಿಂಗ್ ಈಗ ಆಗಿ ಒಂದು ವರ್ಷದಲ್ಲಿ ಇಷ್ಟೆಲ್ಲಾ ಗೋಲ್ ಮಾಲ್ ಆಯಿತೋ ಎಂದು ಸ್ವಲ್ಪ ಡೀಟೇಲ್ ಹೇಳಿದರೆ ಅನುಕೂಲ ಆಗುತ್ತದೆ, ಬೆಳಕು ಚೆಲ್ಲಿದರೆ ಮತ್ತೆ ನಮಗೆ ಒಳ್ಳೆಯದು ಆಗುತ್ತದೆ. ಅದನ್ನು ಯಾವಾಗಲಾದರೂ ಪೂರಾ ಹೇಳಿ. 2000ದಲ್ಲಿ ಅವರು licence ತೆಗೆದುಕೊಳ್ಳುವಾಗ ಯಾರು ಇದ್ದರು? ಯಾರು ಕೊಟ್ಟರು? Mining licence ಎಲ್ಲವನ್ನೂ ಬಿಜೆಪಿ ಸರ್ಕಾರ ಬಂದಾಗ ಕೊಟ್ಟರೋ ಅಥವಾ ನಿಮ್ಮ ಸರ್ಕಾರ ಹಿಂದೆ ಇದ್ದಾಗ license ಕೊಟ್ಟಿದ್ದರೋ? Account ಯಾವಾಗ ಓಪನ್ ಮಾಡಿದರು? ಮಾನ್ಯ ಸಂತೋಷ್ ಹೆಗ್ಡೆ, ಲೋಕಾಯುಕ್ತರು, ಅವರು ಎಲ್ಲಿಂದ ವರದಿ ಕೊಟ್ಟರು? ಯಾವಾಗ ವರದಿ ಕೊಟ್ಟರು? ಅದಕ್ಕೆ ಕಾರಣ ಯಾರು? ನಮ್ಮ ಬಿಜೆಪಿ ಸರ್ಕಾರ ಬಂದ ಮೇಲೆ ವರದಿ ಕೊಡಲು ಯಾರು ಹೇಳಿದರು ಎಂದು ಹೇಳಿ.

ಶ್ರೀ ಟಿ. ಬಿ. ಜಯಚಂದ್ರ: ಏನು ನಡೆಯುತ್ತಿದೆ ಎಂದೇ ಗೊತ್ತಿಲ್ಲ ಇವರಿಗೆ

ಶ್ರೀ ಸಿದ್ದು ಸವದಿ: ಬೆಳಕು ಚೆಲ್ಲಬೇಕಾದರೆ ಎಲ್ಲವನ್ನೂ ಚೆಲ್ಲಬೇಕು

ಶ್ರೀ ಟಿ. ಬಿ. ಜಯಚಂದ್ರ: ನಾವು ಅಕ್ರಮ ಗಣಿಗಾರಿಕೆ ವಿಚಾರಪ್ರಸ್ತಾಪ ಮಾಡುತ್ತಿಲ್ಲ.

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಸವದಿ ಅವರೇ ವಿಚಾರ 69ನಲ್ಲಿ ಇದೆ. ನಿಮ್ಮ ಅಭಿಪ್ರಾಯ ಹೇಳಿ. ಎಲ್ಲರೂ ಮಾತನಾಡಬಹುದು. ನಿಮಗೆ ಏನೇನು ಹೇಳಬೇಕೋ ಎಲ್ಲವನ್ನೂ ಹೇಳಿ.

ಶ್ರೀ ಟಿ. ಬಿ. ಜಯಚಂದ್ರ: ಅಕ್ರಮ ಗಣಿಗಾರಿಕೆ ವಿಚಾರದಲ್ಲಿ ಮಾತ್ರ ಚರ್ಚೆ ಆಗುತ್ತಿರುವುದು.

ಶ್ರೀ ಸಿದ್ದು ಸವದಿ: ಸಾವಿರ ಎಕರೆಗಟ್ಟಲೆ ಫಾರಸ್ಟ್‌ನಲ್ಲಿ mining ಮಾಡಲು ಕೊಟ್ಟಿರಿ. ಇದರ ಬಗ್ಗೆ ಬೆಳಕು ಚೆಲ್ಲಿ.

ಶ್ರೀ ಅಭಯಚಂದ್ರ ಜೈನ್: ಆವಾಗ ವಿರೋಧ ಪಕ್ಷದಲ್ಲಿದ್ದೀರಿ. ಏನು ಮಾಡಿದಿರಿ? ನಿದ್ರೆ ಮಾಡುತ್ತಿದ್ದೀರಾ?

(ಗೊಂದಲ)

ಶ್ರೀ ಡಿ. ಎನ್. ಜೀವರಾಜ್: ಮಾನ್ಯ ವಿರೋಧ ಪಕ್ಷದ ನಾಯಕರು ಬಿಜೆಪಿ ಸರ್ಕಾರದ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಸಿದ್ದು ಸವದಿ: ಯಾರ್‍ಯಾರು ಕಾರಣ, ಆಕ್ಷನ್ ತೆಗೆದುಕೊಳ್ಳಲು ಹೇಳಿ. ನಾವು ಯಾರಿಗೂ ರಕ್ಷಣೆ ಮಾಡುವ ಅವಶ್ಯಕತೆ ಇಲ್ಲ. ಆದರೆ ಡೀಟೇಲ್ ಹೇಳಿ. ನಿಮಗೆ ಬೇಕಾಗಿದ್ದನ್ನು ಮಾತ್ರ ಹೇಳಬೇಡಿ.

ಶ್ರೀ ಡಿ. ಎನ್. ಜೀವರಾಜ್: Supreme Court ತನಕ ಹೋಗಿದ್ದಾರೆ. ಅವರದ್ದು ಯಾವ ವಿಚಾರವನ್ನು ಹೇಳುತ್ತಿಲ್ಲ. ಆಮೇಲೆ ನಾನು ಇಲ್ಲಿ ವಿಪ್ ಇದ್ದಾಗಲೇ ಮಾನ್ಯ ಮುಖ್ಯಮಂತ್ರಿಗಳು ಲೋಕಾಯುಕ್ತರಿಗೆ ಈ ಕೇಸನ್ನು hand over ಮಾಡುತ್ತಾ ಅವರು ಹಿಂದಿನ ಇಸವಿಗಳನ್ನೂ ಹೇಳಿದ್ದರು. ಲೋಕಾಯುಕ್ತರು ಹಿಂದಿನದನ್ನು ಬಿಟ್ಟು ಮುಂದಿನದನ್ನು ಮಾತ್ರ ಹೇಳಿದ್ದರೆ ಎಂದು ಇವರು ಹೇಳುವುದಿಲ್ಲ. ಆ ಮೇಲೆ ಮಾನ್ಯ ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಅವರಿಗೆ ಏನು ಪೆನಾಲ್ಟಿ ಇತ್ತು, ಅದರ ಬಗ್ಗೆನೂ ಹೇಳುವುದಿಲ್ಲ.

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: Rule 69 ನಲ್ಲಿ ಇದೆ. ನೀವೂ ಚರ್ಚೆಯಲ್ಲಿ ಪಾಲುಗೊಳ್ಳಬಹುದು.

ಶ್ರೀ ಸಿದ್ದರಾಮಯ್ಯ I am not defending any body from this place. ಯಾರೇ ಇರಲಿ. ರಿಪೋರ್ಟ್‌ನಲ್ಲಿ ಯಾರ್‍ಯಾರದ್ದು ಹೆಸರಿದೆ? ಯಾರ್‍ಯಾರು ಅಕ್ರಮದಲ್ಲಿ ಭಾಗಿ ಆಗಿದ್ದಾರೆ? ಯಾರ್‍ಯಾರು illicit export ನಲ್ಲಿ ಭಾಗಿ ಆಗಿದ್ದಾರೆ? ಯಾರ್‍ಯಾರು illegal license ಕೊಟ್ಟಿದ್ದಾರೆ ಎಲ್ಲರ ಮೇಲೂ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವವರು ನಾನು. ಇದು Number one. No. 2, ಚೀಫ್ ವಿಪ್ ನಿಮಗೆ ಈಗ ಗೊತ್ತಾಯಿತಲ್ಲ? I hope that you understood my point.

ಶ್ರೀ ಸಿದ್ದು ಸವದಿ: Account ಯಾವಾಗ open ಆಯಿತು? ಅವರಿಗೆ mining licence ಯಾರು ಕೊಟ್ಟರು? ಮಾನ್ಯ ಸಂತೋಷ್ ಹೆಗ್ಡೆಯವರು 2000 ರಿಂದ ವರದಿ ಏಕೆ ಕೊಟ್ಟಿಲ್ಲ? ಬಿ.ಜೆ.ಪಿ. ಸರ್ಕಾರ ಬಂದ ನಂತರದ್ದೇ ಏಕೆ ವರದಿ ಕೊಟ್ಟರು? ಎಂಬುದನ್ನು ಹೇಳಿ.

ಶ್ರೀ ಟಿ. ಬಿ. ಜಯಚಂದ್ರ: ನೀವೇ ಅಧಿಕಾರದಲ್ಲಿದ್ದಿರಿ, records ಏಕೆ ಕೊಡಲಿಲ್ಲ? ಹಿಂದಿನ ಸರ್ಕಾರದ್ದು ಕೊಡಬೇಡಿ ಎಂದು ಹೇಳಿದ್ದರೇ?

ಶ್ರೀ ಸಿದ್ದು ಸವದಿ: 4–5 ಸಾವಿರ ಎಕರೆ ಫಾರೆಸ್ಟ್ ಲ್ಯಾಂಡ್‌ನಲ್ಲಿ ಮೈನಿಂಗ್ ಲೈಸೆನ್ಸ್ ಯಾರು ಕೊಟ್ಟರು? ಅದನ್ನು ಹೇಳಿ.

ಉಪಾಧ್ಯಕ್ಷರು: ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ರೂಲ್ 69ರ ಅಡಿಯಲ್ಲಿ ಯಾರು ಬೇಕಾದರೂ ಮಾತನಾಡಬಹುದು.

ಉಪಾಧ್ಯಕ್ಷರು: ಡಾಕ್ಟರ್‌ರವರೆ, ದಯವಿಟ್ಟು ಕುಳುತುಕೊಳ್ಳಿ

ಗೊಂದಲ

ಉಪಾಧ್ಯಕ್ಷರು: ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ. ತಪ್ಪು ಯಾರದೇ ಇದ್ದರೂ ಕೂಡ ಶಿಕ್ಷೆಯಾಗಲೇಬೇಕು. ಅದರಲ್ಲಿ ಎರಡನೇ ಪ್ರಶ್ನೆಯೇ ಇಲ್ಲ. ತಾವು ಕುಳಿತುಕೊಳ್ಳಿ. ಇದರ ಬಗ್ಗೆ ಮುಕ್ತವಾದ ಚರ್ಚೆಯಾಗಲಿ. ಅದಕ್ಕೆ ಅವಕಾಶ ಕೊಡುತ್ತಿದ್ದೇನೆ. ತಮ್ಮ ಹತ್ತಿರ ಏನೊಂದು ಮಾಹಿತಿ ಇದೆಯೋ, ಅದನ್ನೂ ಕೂಡ ಸದನಕ್ಕೆ ನೀಡಿ. ತಾವು ಮುಂದುವರೆಸಿ.

Sri Siddaramaiah: I am making it very clear. I am not here to defend anybody, whether he belongs to our Party or belongs to some other party or belongs to BJP Party or anybody, whoever belongs to any party. ಯಾರಾದರೂ ಇರಲಿ. ಈ report ನಲ್ಲಿ ಮತ್ತು ಮೊದಲನೇ report ನಲ್ಲಿ ಯಾರ್‍ಯಾರು ತಪ್ಪು ಮಾಡಿದ್ದಾರೆಂದು ಶಿಫಾರಸ್ಸು ಮಾಡಿದ್ದಾರೋ, ಏನೇನು ಶಿಫಾರಸ್ಸು ಮಾಡಿದ್ದಾರೋ, ಅದರ ಮೇಲೆ ಕ್ರಮ ತೆಗೆದುಕೊಳ್ಳಿ. ನಾನೇನೂ ಬೇಡ ಎಂದು ಹೇಳಿದ್ದೇನೆಯೇ? ಇವರ್‍ಯಾಕೆ "ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ" ನೋಡಿಕೊಳ್ಳುತ್ತಿದ್ದಾರೆ. ನೀವ್ಯಾರೂ ಪಾಪ involve ಆಗಿಲ್ಲ. ಸುಮ್ಮನೆ ಕುಳುತುಕೊಳ್ಳಿ. ಮಾಡಿರುವವರೇ ಬೇರೆ. ತಿಂದವರೇ ಬೇರೆ, ಲೂಟಿ ಹೊಡೆದವರೇ ಬೇರೆ, ಮಜಾ ಮಾಡಿದವರೇ ಬೇರೆ. ನೀವ್ಯಾಕೆ ಹೀಗೆ ಆಡುತ್ತೀರಿ? ನಾವೆಲ್ಲಾ ಸೇರಿಕೊಂಡು ಈ ರಾಜ್ಯದ ರಕ್ಷಣೆ ಮಾಡೋಣ. ಇವರ್‍ಯಾಕೆ ಹೀಗೆ ಮಾಡುತ್ತಿದ್ದಾರೆ? Don't argue weak cases, I say.

ಶ್ರೀ ಸಿ. ಸಿ. ಪಾಟೀಲ್: ಯಾರು ತಪ್ಪು ಮಾಡಿದ್ದಾರೋ, ಅವರ ಹೆಸರನ್ನು ಹೇಳಿ.

ಶ್ರೀ ಸಿದ್ದರಾಮಯ್ಯ: ನಾನು ಹೆಸರು ಹೇಳಿ ಆಯಿತು. ಮಾನ್ಯ ಸಿ.ಸಿ. ಪಾಟೀಲ್

ರವರೆ, I am not suppressing any fact. I am not defending anybody. All right, ಹಿಂದಿನಿಂದ ಏಕೆ ಹೇಳುವುದಕ್ಕೆ ಹೋಗಿಲ್ಲ ಎಂದರೆ, ಲೋಕಾಯುಕ್ತರವರು ಹೀಗೆ ಹೇಳಿದ್ದಾರೆ. Information on exports available for the period . . . ಮಾನ್ಯ ಜೀವರಾಜ್ ರವರೆ, ನೀವು ಇಲ್ಲೇ ಕುಳಿತಿದ್ದರೆ ಚೆನ್ನಾಗಿತ್ತು, ಆ ಕಡೆಗೆ ಹೋಗಿ ತಾಪತ್ರಯವಾಗಿದೆ. ಮಾನ್ಯ ಮುಖ್ಯಂತ್ರಿಗಳೆ, ದಯವಿಟ್ಟು ಅವರನ್ನು ಮಿನಿಸ್ಟರ್ ಮಾಡಿಬಿಡಿ, ಅವರನ್ನು ಏಕೆ ಬಿಟ್ಟಿದ್ದೀರಿ? ಇನ್ನೊಂದು ವರ್ಷ term ಬಾಕಿ ಇದೆ. ಅವರನ್ನೂ ಸಚಿವರನ್ನಾಗಿ ಮಾಡಿಬಿಡಿ. ಅವರೂ ಒಮ್ಮೆ ಇಲ್ಲಿ ಕುಳಿತು ಹೋಗಲಿ. Information on exports available for the periods prior to 2006 is incomplete for various ports. Therefore, exports prior to 2006 and 2007 have been excluded from this compitation. The information of permit details with DMG, is also not available for the prriod 2000 to 2004-05. DMG means Department of Mines and Geology. ಅವರನ್ನು ನೇಣಿಗೆ ಹಾಕಿ ಎಂದು ಹೇಳುತ್ತೇನೆ. Why information is not available? what happened to the documents? why they have not beensubmitted to Lokayukta. It is not our fault. The concerned department has not produced the documents. That is, Mines and Geology Department. You hang up for having not produced the document. ಇದು ರಿಪೋರ್ಟ್‌ನ ಪೇಜ್ ನಮಬರ್ 15 ರಲ್ಲಿದೆ. ಅದನ್ನೆಲ್ಲಾ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗಿಲ್ಲ. ರಿಪೋರ್ಟ್‌ನಲ್ಲಿ ಇರುವುದನ್ನೆಲ್ಲಾ ನಾನು ಹೇಳಬಾರದು ಎಂಬ ಕಾರಣಕ್ಕಾಗಿ ಅದನ್ನು ಹೇಳಿಲ್ಲ.

ಶ್ರೀ ಅಪ್ಪಚ್ಚು ರಂಜನ್: ನಾನೇನೂ ಹೇಳುವುದಿಲ್ಲ ಎಂದು ಹೇಳುತ್ತಲೇ ಎಲ್ಲಾ mattter ಅನ್ನೂ ನೀವು ಹೇಳಿಯಾಗಿದೆ. ಇನ್ನೇನನ್ನೂ ನೀವು ಬಾಕಿ ಉಳಿಸಿಲ್ಲ. ಮಾನ್ಯ ಉಪಾಧ್ಯಕ್ಷರೆ, ತಾವು ಅರ್ಧ ಘಂಟೆಗೆಂದು ಚರ್ಚೆಗೆ ಅವಕಾಶ ಮಡಿಕೊಟ್ಟಿದ್ದೀರಿ. ಆದರೆ ಇವರು ಇಲ್ಲಿ ಮಾತನಾಡಲು ಪ್ರಾರಂಭಿಸಿ alomost two and half hours ಆಯಿತು.

ಗೊಂದಲ

ಶ್ರೀ ಸಿದ್ದರಾಮಯ್ಯ: ಹಾಗಾದರೆ ನಾನು ಕುಳುತುಕೊಂಡು ಬಿಡಲೇ? ಇದರ ಬಗ್ಗೆ ಏನೂ ಮಾತನಾಡುವುದೇ ಬೇಡವೆ?

ಗೊಂದಲ

ಶ್ರೀ ಅಪ್ಪಚ್ಚು ರಂಜನ್: ನ್ಯಾಯಾಲಯದಲ್ಲಿ ಇರುವಂತಹ ಯಾವುದೇ ಪ್ರಕರಣದ ಬಗ್ಗೆ ಇಲ್ಲಿ ಚರ್ಚೆ ಮಾಡುವಂತಿಲ್ಲ.

ಗೊಂದಲ

ಶ್ರೀ ಸಿದ್ದರಾಮಯ್ಯ: The report has not been questioned in any court of law.

ಗೊಂದಲ

ಉಪಾಧ್ಯಕ್ಷರು: ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ. ಇನ್ನು ಮುಂದೆಯಾದರೂ ಈ ರೀತಿ ನಮ್ಮ ರಾಜ್ಯದಿಂದ ಲೂಟಿ ಆಗುವುದು ಬೇಡ ಎಂದು ಹೇಳುವಂತಹ ರೀತಿಯಲ್ಲಿ ಇದೆಲ್ಲಾ ಚರ್ಚೆಯಾಗುವ ಅವಶ್ಯಕತೆ ಇದೆ.

ಗೊಂದಲ

ಶ್ರೀ ಸಿದ್ದರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ತಮ್ಮದು Correct observation. ಇನ್ನು ಮುಂದೆ ಈ ರೀತಿ ನಡೆಯಬಾರದು. ನಮ್ಮ ಮುಂದಿನ ಜನರಿಗೆ ನಾವು ಏನೆಂದು ಹೇಳಿ ಹೋಗಬೇಕು? ಬಳ್ಳಾರಿಯಲ್ಲಿ ಲೂಟಿ ಹೊಡೆಯಿರಿ, ಇದನ್ನು Republic of Bellary ಮಾಡಿ ಎಂದು ಹೇಳಿ ಹೋಗೋಣವೇ? ಹೇಳಿ ನೋಡೋಣ. ಇವತ್ತು ನಾವು ಇರುತ್ತೇವೆ, ಮುಂದೆ ಯಾರು ಅಧಿಕಾರಕ್ಕೆ ಬರುತ್ತಾರೊ ಗೊತ್ತಿಲ್ಲ. ನಾವು ಜನರಿಗೆ Republic of Bellary ಎಂದು ಮಾಡಿ, ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಹೊಡೆಯಿರಿ ಎಂದು ಬಿಟ್ಟು ಬಿಡೋಣವೇ? ಮಾನ್ಯ ಉಪಾಧ್ಯಕ್ಷರೆ, ನಾನು ಎಲ್ಲವನ್ನೂ ಹೇಳುವುದಿಲ್ಲ. ಹಿಂದಿನ ಮುಖ್ಯಮಂತ್ರಿಗಳು, ನಾನು ಅಧಿಕಾರಕ್ಕೆ ಬಂದ ಮೇಲೆ, ಒಂದೇ ಒಂದು ಹೊಸ ಲೈಸೆನ್ಸ್ ಕೊಟ್ಟಿಲ್ಲ, renewal ಮಾಡಿಲ್ಲ ಎಂದು ಹೇಳುತ್ತಿದ್ದರು. ಯಾರ್‍ಯಾರ ಕಾಲದಲ್ಲಿ ಏನೇನು ಲೈಸೆನ್ಸ್ ಕೊಟ್ಟರು ಎನ್ನುವುದನ್ನು ನಾನು ಹೇಳಲೇ? ಇದನ್ನು ನಾನು ಹೇಳುವುದಲ್ಲ, ರಿಪೋರ್ಟ್‌ನಲ್ಲಿ ಇರುವುದನ್ನು ನಾನು ಓದುತ್ತೇನೆ.

ಶ್ರೀ ಕೆ. ರಾಜು: ಮಾನ್ಯ ಉಪಾಧ್ಯಕ್ಷರೆ ಸಂಬಂಧಪಟ್ಟ ಮಂತ್ರಿಗಳು ಯಾರೂ ಸಹ ಈ ಕಡೆಗೆ ತಲೆ ಹಾಕುತ್ತಿಲ್ಲ. ಆ ಕಡೆಗೆ, ಈ ಕಡೆಗೆ ಮಾತನಾಡುತ್ತಿದ್ದಾರೆ. ದಯವಿಟ್ಟು ಈ ಬಗ್ಗೆ ಸಂಬಂಧಿಸಿದವರಿಗೆ ಸೂಚನೆ ಕೊಡಿ.

ಉಪಾಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೆ, ತಾವು ಮುಂದುವರೆಸಿ

ಶ್ರೀ ಸಿದ್ದರಾಮಯ್ಯ: ಆ ಕಾಲದಲ್ಲಿ ಯಾರ್‍ಯಾರಿದ್ದರು ಎಂಬುದನ್ನು ಬರೆದುಕೊಳ್ಳಿ, 2001–2004ರವರೆಗೆ 15 ಲೆಸೆನ್ಸ್ ಗಳನ್ನು ಕೊಟ್ಟಿದ್ದಾರೆ ಅಥವಾ renewal ಮಾಡಿದ್ದಾರೆ. 28–5–2004 ರಿಂದ 4–2–2005ರವರೆಗೆ 42 ಲೈಸೆನ್ಸ್‌ಗಳನ್ನು issue ಮಾಡಿದ್ದಾರೆ or renewal ಮಾಡಿದ್ದಾರೆ. 2006 ರಿಂದ 09–10–2007 ವರೆಗೆ 44 ಲೈಸೆನ್ಸ್ ಗಳನ್ನು issue ಮಾಡಿದ್ದಾರೆ or renewal ಮಾಡಿದ್ದಾರೆ. 09–10–2007 ರಿಂದ 28–5–2008 ವರೆಗೆ 27 ಲೈಸೆನ್ಸ್ ಗಳನ್ನು ಕೊಟ್ಟಿದ್ದಾರೆ or renewal ಮಾಡಿದ್ದಾರೆ. ಒಟ್ಟು 134 ಕೊಟ್ಟಿದ್ದಾರೆ. ಈ 134ರಲ್ಲಿ ಯಾರು illegal ಆಗಿ ಕೊಟ್ಟಿದ್ದಾರೋ, ಯಾರು Forest Act violation ಮಾಡಿ ಕೊಟ್ಟಿದ್ದರೋ, ಯಾರು Central Act violation ಮಾಡಿ ಕೊಟ್ಟಿದ್ದಾರೋ, ಯಾರೇ ಮಾಡಿರಲಿ take action against them, whoever it may be.

ಉಪಾಧ್ಯಕ್ಷರು: ಇಲ್ಲಿ ಒಂದು clarification ಕೇಳುತ್ತಿದ್ದೇನೆ. 134ರ ಬಗ್ಗೆ ತಾವು ಹೇಳಿದಿರಿ. ಇದರಲ್ಲಿ ಹೊಸದಾಗಿ ಲೈಸೆನ್ಸ್ ಕೊಟ್ಟಿರುವುದು ಎಷ್ಟು? ಮತ್ತು renewal ಮಾಡಿರುವುದು ಎಷ್ಟು?

ಶ್ರೀ ಸಿದ್ದರಾಮಯ್ಯ: ಅದನ್ನು ಇಲ್ಲಿ ಕರೆಕ್ಟಾಗಿ ಹೇಳಿಲ್ಲ. ಇದರಲ್ಲಿ ಒಟ್ಟಾರೆಯಾಗಿ ಅಂಕಿ ಅಂಶ ಕೊಟ್ಟಿದ್ದಾರೆ. ಇದರಲ್ಲಿ ಹೊಸದಾಗಿ ಲೈಸೆನ್ಸ್ issue ಮಾಡಿರುವುದೂ ಇದೆ ಮತ್ತು renewal ಮಾಡಿರುವುದೂ ಇದೆ. ಎಲ್ಲಾ ಇದರಲ್ಲಿ ಸೇರಿದೆ.

ಉಪಾಧ್ಯಕ್ಷರು: That report is not correct ಎಂದು ಅಂದುಕೊಳ್ಳಬಹುದು.

ಶ್ರೀ ಸಿದ್ದರಾಮಯ್ಯ: ಮಾನ್ಯ ಉಪಾಧ್ಯಕ್ಷರೆ, ಆ information ಅನ್ನು ನಾನು ನಿಮಗೆ ತಂದು ಕೊಡುತ್ತೇನೆ. issue of license is not an offence. ಲೈಸೆನ್ಸ್ ಕೊಡುವುದು offence ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. Illegal ಆಗಿ ಕೊಡುವುದು offence. ಯಾರಿಗೋ favour ಮಾಡುವುದಕ್ಕೋಸ್ಕರ, ಎಲ್ಲಾ ಕಾನೂನುಗಳನ್ನು ಗಾಳಿಗೆ ತೂರಿ ಕೊಡುವುದು offence. ಸ್ವಾರ್ಥಕ್ಕೋಸ್ಕರ, ಲಂಚ ತೆಗೆದುಕೊಂಡು ಲೆಸನ್ಸ್ ಕೊಡುವುದು offence. ಅದನ್ನು ಯಾರು ಮಾಡಿದ್ದಾರೋ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ We don't come in your way. ಯಾರೇ

ಇರಲಿ, take action against them ಅದಕ್ಕೆ ನಾನು ಹೇಳಿದ್ದು, ಅಲ್ಲಿ ಇಲ್ಲಿ ಎಲ್ಲಾ ಆಗಿವೆ. ನಾನು ಆವತ್ತೂ ಹೇಳಿದ್ದೆ, ಇವತ್ತೂ ಸಹ ಹೇಳುತ್ತಿದ್ದೇನೆ. ಇವೆಲ್ಲಾ ನಿಮಗೂ ಕೂಡ ಮಾಡಲಿಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಇದನ್ನು CBI ಗೆ ಕೊಟ್ಟುಬಿಡಿ ಎಂದು ನಾವು ಹೇಳಿದ್ದೆವು. CBI ಗೆ ಕೊಟ್ಟುಬಿಡಿ ಅಲ್ಲಿ ಎಲ್ಲಾ ತನಿಖೆಯಾಗಿ, ಯಾರ್ಯಾರು ಏನೇನು ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಯಾರು ಜೈಲಿಗೆ ಹೋಗುತ್ತಾರೋ, ಯಾರಿಗೆ death punishment ಕೊಡುತ್ತಾರೋ, ಯಾರಿಗೆ ಇನ್ನೇನು ಕೊಡುತ್ತಾರೋ, ಎಲ್ಲವೂ ಆಗಿಬಿಡಲಿ. ಸಿಬಿಐ ತನಿಖೆಗೆ ಶಿಫಾರಸ್ಸು ಮಾಡಿ, ಏನು ಆಗುತ್ತದೋ, ಅದೆಲ್ಲಾ ಆಗಿಬಿಡಲಿ. ಯಾರ್ಯಾರು involve ಆಗಿದ್ದಾರೋ, ಯಾರು ತಪ್ಪು ಮಾಡಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಉಪ್ಪು ತಿಂದವರು ನೀರನ್ನು ಕುಡಿಯಲೇ ಬೇಕು That is my point. That is our demand all along from the day we have raised this issue here on the floor of the House. Even in ನಮ್ಮ ಪದಯಾತ್ರೆ ಸಮಯದಲ್ಲಿ ನಾವು ಅದನ್ನೇ demand ಮಾಡಿದ್ದೆವು. ಬಳ್ಳಾರಿಗೆ ಪದಯಾತ್ರೆ ಹೋದಾಗ ನಾವು ಅದನ್ನೇ demand ಮಾಡಿದ್ದೆವು. Even today we are demanding the same thing ಇವತ್ತೂ ಅದನ್ನೇ ಹೇಳುತ್ತಿದ್ದೇವೆ. ಯಾರಾದರೂ ಆಗಿರಲಿ, ಸಿಬಿಐಗೆ ಕೊಡಿ. That is my point. ಏಕೆಂದರೆ, ಈ ರಾಜ್ಯದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭ ಆಗಬೇಕು. ಮತ್ತೆ ಇನ್ಯಾರೋ ಕೂಡ ಇಂತಹ ಕಳ್ಳತನ ಮಾಡಬಾರದು, ಲೂಟಿ ಹೊಡೆಯುವಂತಹ ಕೆಲಸವನ್ನು ಮಾಡಬಾರದು, ರಾಜ್ಯದ ಸಂಪತ್ತನ್ನು ಲೂಟಿ ಹೊಡೆಯಬಾರದು. ಇಂತಹ ದೇಶದ್ರೋಹದ ಕೆಲಸ, ಸಮಾಜ ದ್ರೋಹದ ಕೆಲಸ ಆಗಬಾರದು. ಅವರು ಯಾರೇ ಆಗಿರಲಿ ಶಿಕ್ಷೆಗೆ ಒಳಗಾಗಬೇಕು. ನಾವು ಎಲ್ಲವನ್ನೂ ರಕ್ಷಣೆ ಮಾಡುತ್ತೇವೆಂದು ಸಂವಿಧಾನದ ಮೇಲೆ ಪ್ರಮಾಣ ಮಾಡಿ ಇಲ್ಲಿ ಬಂದು ಕುಳಿತುಕೊಂಡಿರುತ್ತೇವೆ. ಲೂಟಿ ಹೊಡೆಯುವುದಕ್ಕಲ್ಲ. ಇದರ ಬಗ್ಗೆ ಚರ್ಚೆ ಆಗಬೇಕೋ ಬೇಡವೋ? ಅದಕ್ಕೆ ನಾನೇನು ಹೇಳುತ್ತೇನೆ ಎಂದರೆ, ಇಷ್ಟೊಂದು ಗಂಭೀರವಾದಂತಹ ವಿಚಾರಗಳಿವೆ. ಇಷ್ಟೊಂದು ಲೂಟಿಯಾಗಿದೆ, CEC ನವರೂ ಕೂಡ ಹೇಳಿದ್ದಾರೆ. CEC ನವರು ಹೇಳಿದ ಮೇಲೂ ಕೂಡ ನಡೆಯುತ್ತಿವೆ ಎಂದರೆ ಹೇಗೆ? ಇವತ್ತಿನವರೆಗೆ ಜಿಂದಾಲ್ ಕಂಪೆನಿಯ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? So far, MMC ನಲ್ಲಿ ಕೆಲಸ ಮಾಡುತ್ತಿದ್ದಂತಹ MD ಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅವರಲ್ಲಿ IAS ನವರಿದ್ದಾರೆ, IPS ನವರಿದ್ದಾರೆ, IFS ನವರೂ ಇದ್ದಾರೆ. ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳುವುದಕ್ಕೆ

ಆಗುವುದಿಲ್ಲವೆ? ಕುಮಾರಿ ಮಾಯಾವತಿ Government ನವರು ಎಷ್ಟು ಜನ IAS ನವರನ್ನು ಮತ್ತು IPS ನವರನ್ನು suspend ಮಾಡಿದ್ದಾರೆ ಎಂಬುದನ್ನು ನೋಡಿ. If the Mayawathi Government can suspend, why not Karnataka Government? Serious allegations are there. Serious lapses are there. Mis-conduct is there. Theft is there. Corruption is there. Remove them from the service. Keep them under suspension and recommend for their removal. ಅವರೇನು ದೇವಲೋಕದಿಂದ ಬಂದವರೇ? ಮಾನ್ಯ ಯಡಿಯೂರಪ್ಪನವರು ಮಾಜಿ ಮುಖ್ಯಮಂತ್ರಿಯಾಗಿದ್ದುಕೊಂಡು, ಮೊನ್ನೆ 24 ದಿವಸ ಜೈಲಿಗೆ ಹೋಗಿರಲಿಲ್ಲವೇ? Why not these people? 617 ಜನ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಯಾರೋ ಒಬ್ಬ ಗುಮಾಸ್ತರ ಮೇಲೆ ಕ್ರಮ ತೆಗೆದುಕೊಳ್ಳುವಂಥದ್ದು ಆಗಬಾರದು. Assistant Engineer ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕೇವಲ ಯಾರೋ ಗುಮಾಸ್ತರ ಮೇಲೆ ಕ್ರಮ ತೆಗೆದುಕೊಳ್ಳುವುದಲ್ಲ. ಯಾರು decision making ಇದ್ದರು, ಯಾರ ಹತ್ತಿರ ಅಧಿಕಾರವಿತ್ತೋ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. They must be sent to jail. ಅವರು collude ಆಗದೇ ಅಕ್ರಮ ಮಾಡಲಿಕ್ಕೆ ಆಗುತ್ತಿರಲಿಲ್ಲ. From Bellary to ಬೇಲೆಕೇರಿ ಏಳು check posts ಇವೆ. ಆ 7 check posts ಗಳಲ್ಲಿ ಇರುವವರು ಏನು ನಿದ್ದೆ ಮಾಡುತ್ತಿದ್ದರೆ? ದುಡ್ಡು ತೆಗೆದುಕೊಂಡು ಬಿಡುತ್ತಿರಲಿಲ್ಲವೇ? 2 ಕೋಟಿ 98 ಲಕ್ಷ ಮೆಟ್ರಿಕ್ ಟನ್ ಗಳಷ್ಟು Iron-ore ಸುಮ್ಮನೆ ಕದ್ದು ಹೋಗಿಬಿಡುತ್ತಿವೆಯೇ? ಈ ಚೆಕ್‌ಪೋಸ್ಟ್‌ಗಳಲ್ಲಿ ಇದ್ದವರು ಏನು ಮಾಡುತ್ತಿದ್ದರು? ಅವರ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಒಂದೊಂದು ಲಾರಿ 16 ಟನ್ ಗಿಂತ ಜಾಸ್ತಿ ಭಾರ ಹಾಕಬಾರದೆಂದಿದೆ. ಆದರೆ ಇಲ್ಲಿ ಎಷ್ಟು ಟನ್‌ಗಳ ಭಾರ ಹಾಕಕೊಂಡು ಹೋಗುತ್ತಿದ್ದಾರೆ? 25–40 ಟನ್ ಗಳವರೆಗೆ ಹಾಕಿಕೊಂಡು ಹೋಗುತ್ತಿದ್ದಾರೆ. ಅಂತಹವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ ನೋಡೋಣ. ಇವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? Report ನಲ್ಲಿ ಹೇಳುತ್ತಾರೆ. "There are so many people who have colluded, conspired" who are those fellows? Find out, take action against them. ಈ ರಾಜ್ಯದಲ್ಲಿ ಒಂದು ಭಯ, ಎಚ್ಚರಿಕೆ ಇರಲಿ. ಇಲ್ಲದಿದ್ದರೆ ಇನ್ನು ಮುಂದೆ ಯಾರೂ ಇಂತಹ ಕೆಲಸ ಮಾಡಬಾರದು ಎನ್ನುವ ಭಯ ಎಲ್ಲಿ ಬರುತ್ತದೆ? ಅಂತಹ ವಾತಾವರಣವನ್ನು Government ನಿರ್ಮಾಣ ಮಾಡಬೇಕೋ, ಬೇಡವೋ? Here is a Government ಎಂಬುದು ಜನರಿಗೆ

ಗೊತ್ತಾಗಬೇಕು. ಹಿಂದೆ ನೀವು ಇರಲಿಲ್ಲ. ಈಗ ಅಧಿಕಾರಕ್ಕೆ ಬಂದಿದ್ದೀರಿ, ಕ್ರಮ ತೆಗೆದುಕೊಳ್ಳಿ. ಮಾನ್ಯ ಸದಾನಂದಗೌಡರು, ನಾನು chief Minister ಆಗಿ ಬಂದಿದ್ದೇನೆ. here is a Government. My Government will not spare anybody, will not allow anybody to go and conspire' ಎಂದು ಹೇಳಲಿ. ನಾನು ಮುಖ್ಯಮಂತ್ರಿಯಾಗಿ ಬಂದಿದ್ದೇನೆ, here is my Government ಎಂದು ಹೇಳಬೇಕು, We will not spare anybody. We will not allow anybody to go scot free. That is why ಇಲ್ಲಿ ನಾನು ಪ್ರಸ್ತಾಪ ಮಾಡುತ್ತಿರುವುದು, ನಮ್ಮ ರಾಜ್ಯವನ್ನು ಉಳಿಸಬೇಕಲ್ಲ? ನಾವು ಅಧಿಕಾರದಲಿರುತ್ತೇವೆಯೋ ಇಲ್ಲವೋ ಗೊತ್ತಿಲ್ಲ, ಉಳಿಸಬೇಕಾದ್ದದ್ದು ನಮ್ಮ ಕರ್ತವ್ಯ ಜವಾಬ್ದಾರಿ ಇದೆಯಲ್ಲಾ? ಇವತ್ತು ನೀರಾವರಿಗೆ ದುಡ್ಡಿಲ್ಲವೆಂದು ಬಾಂಡ್‌ಗಳ ಮೂಲಕ ಹಣ ಸಂಗ್ರಹ ಮಾಡಬೇಕೆಂದಿದ್ದೇವೆ, ನಮ್ಮ ರಾಜ್ಯದ ಮೇಲೆ ಒಂದು ಲಕ್ಷ ಕೋಟಿ ಸಾಲವಾಗಿದೆ, ಭಾರ ಸ್ವಲ್ಪ ಕಡಿಮೆಯಾಗಲಿ ಇದೆಲ್ಲವನ್ನೂ ವಸೂಲ್ಮಾಡಿ. By the end of this year, ನಮ್ಮ ರಾಜ್ಯದ ಸಾಲ ಕಡಿಮೆಯಾಗಲಿ ಮುಲಾಜಿಲ್ಲದೆ ವಸೂಲ್ಮಾಡಿ, merciless ಆಗಿ ವಸೂಲ್ಮಾಡಿ. That should be the attitude of the Government. ಬರೀ ಮಾತಿನಲ್ಲಿ ನಾವು ಭಷ್ಟಾಚಾರ ವಿರುದ್ಧ ಹೋರಾಟ ಮಾಡುತ್ತೇವೆ, ನಾವು ಅಣ್ಣಾ ಹಜಾರೆಯವರಿಗೆ ಸಪೋರ್ಟ್ ಮಾಡುತ್ತೇವೆನ್ನುವುದು ಸಾಲದು. ಇನ್ನು ಬಹಳ ವಿಚಾರಗಳು ಹೇಳುವುದಿದ್ದರೂ ಕೂಡ, ಇನ್ನೂ ಬಹಳ ವಿವರವಾಗಿ ಹೇಳಬೇಕಾಗಿದೆ, ಸಾಕಷ್ಟು ಸಮಯ ತೆಗೆದುಕೊಂಡಿದ್ದೇನೆ. ನಾನು ಸರ್ಕಾರವನ್ನು ಒತ್ತಾಯ ಮಾಡುವುದು, ಒಂದು ಇವರು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಮೊನ್ನೆ ಆ ಸದನದಲ್ಲಿ ಲೋಕಾಯುಕ್ತರನ್ನು ನೇಮಕ ಮಾಡದಿರುವ ಬಗ್ಗೆ ನಾವು ಏನು ಕಳುಹಿಸುತ್ತೇವೆಯೋ ಅದೇ ಫೈನಲ್ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಹಾಗಿದ್ದರೆ Governor ಗೆ ಏತಕ್ಕೆ approval ಗೆ ಕೊಡಬೇಕು? ನೀವೇ announce ಮಾಡಿಬಿಡಿ. If it is final, ನೀವೇ announce ಮಾಡಿಬಿಡಿ ನಮ್ಮನ್ನೇಕೆ ವಿರೋಧ ಪಕ್ಷದವರನ್ನು ಕೇಳಬೇಕು? See, in consultation with the Leader of the Opposition in the Lower House, Leader of the Opposition in the Upper House, Hon'ble Chief Justice of Karnataka ಎಂದು ಏಕೆ ಹೇಳಬೇಕು? ಅವರನ್ನೆಲ್ಲಾ ಕೇಳುವುದೇ ಬೇಡ. ನನಗೆ ಇರುವ Information ಪ್ರಕಾರ, I don't know, I may be right or wrong. Chief Justice ರವರನ್ನು ಕೂಡ ಅಂಥವರ ಹೆಸರನ್ನು ಶಿಫಾರಸ್ಸು ಮಾಡುವಾಗ ಕೇಳಿಲ್ಲ, ನನಗೆ ಗೊತ್ತಿಲ್ಲ, ಗೊತ್ತಿದ್ದರೆ ಹೇಳಿ, If I am wrong, it is

subject to correciton. ನಾವು ಕೊಟ್ಟ ಹೆಸರು ಬೇರೆ, ಅಲ್ಲಿ unanimous ಆಗಿ ರಿಪೋರ್ಟ್ ಎಲ್ಲಿತ್ತು? ಅದಕ್ಕೆ ನಾನು, ಒಂದು ಸಭೆಯನ್ನು ಕರೆಯಿರಿ, ಅಲ್ಲಿ ಕುಳಿತು ಚರ್ಚೆ ಮಾಡಿ, ಬಂದ ಲೋಕಾಯುಕ್ತರು ರಾಜೀನಾಮೆ ಕೊಡುವ ಪರಿಸ್ಥಿತಿಯಾಗಿದೆ. ಬೇಡ ಇದು, ಇಡೀ ದೇಶದಲ್ಲಿ ಯಾರಿದ್ದಾರೆ ಎಂದು ಕುಳಿತು ಚರ್ಚೆ ಮಾಡೋಣ, ತರಿಸಿಕೊಂಡು ಮಾಡೋಣವೆಂದು ನಿಮಗೆ ಒಂದು ಪತ್ರವನ್ನು ಬರೆದೆ. ಆ ಪದ್ಧತಿಯೇ ಇಲ್ಲವೆಂದು ಕೈ ತೊಳೆದುಕೊಂಡು ಬಿಟ್ಟರು. ಪದ್ಧತಿ ಇಲ್ಲವೆಂದು ಎಲ್ಲಿದೆ? ಸಂವಿಧಾನದಲ್ಲಿ ಹಾಗೆ ಬರೆದಿದ್ದಾರೆಯೇ/ ಅಥವಾ ಈ Act ನಲ್ಲಿ ಪದ್ಧತಿ ಇಲಲವೆಂದು ಬರೆದಿದ್ದರೆಯೇ? ನೀವು ಒಳ್ಳೆಯ ಪದ್ಧತಿಯನ್ನು ಶುರು ಮಾಡಿ. ಬೇಡವೆಂದು ಎಲ್ಲಿದೆ? Where is the prohibition? ನಮ್ಮನ್ನೆಲ್ಲಾ ಕರೆಯಿರಿ. ಮುಖ್ಯ ನ್ಯಾಯಾಧೀಶರೊಬ್ಬರನ್ನು ಬಿಟ್ಟುಬಿಡಿ, ನನ್ನನ್ನು ಕರೆಯಿರಿ, ಶ್ರೀಮತಿ ಮೋಟಮ್ಮನವರನ್ನು ಕರೆಯಿರಿ. Speaker of the Legislative Assembly Chairman of the Legislative Council ರವರನ್ನು ಕರೆಯಿರಿ, ಕುಳಿತು ನೀವು ನಾವೆಲ್ಲಾ ಚರ್ಚೆ ಮಾಡೋಣ, ಯಾರಾದರೂ ಒಳ್ಳೆಯವರನ್ನು ಮಾಡೋಣ, ಇವರೇ ಬೇಕೆಂದು ಏತಕ್ಕೆ ಹಠ ಹಿಡಿದುಕೊಂಡು ಕುಳಿತಿದ್ದೀರಿ? ನಿಮ್ಮಲ್ಲಿ ಆ ಉದ್ದೇಶವಿಲ್ಲದೆ ಇರಬಹುದು. ಅದರಿಂದ ಏನಾಗುತ್ತದೆ ಎಂದರೆ, ಇವರು ಯಾರನ್ನೋ ರಕ್ಷಣೆ ಮಾಡುವುದಕ್ಕೆ ಯಾರದೋ ಮಾತನ್ನು ಕೇಳಿ ಹೀಗೆ ಸದಾನಂದಗೌಡರು ಮಾಡುತ್ತಿದ್ದಾರೆ ಎಂದು ಜನರಿಗೆ message ಹೋಗಿಬಿಟ್ಟಿದೆ.

ಶ್ರೀ ಡಿ. ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು): ನಾನು ಹೇಳುವುದನ್ನು ತಪ್ಪು ತಿಳಿದುಕೊಳ್ಳುವುದು ಬೇಡ, ಇಷ್ಟರವರೆಗೆ ಏನು ಸಂಪ್ರದಾಯಗಳು ನಡೆದಿದ್ದಾವೆ, ಆ ಸಂಪ್ರದಾಯಗಳ ಪ್ರಕಾರ ಮಾಡಲಾಗಿದೆ. ನಮ್ಮನ್ನೆಲ್ಲಾ ಕರೆದು ಚರ್ಚೆ ಮಾಡಿ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ ಒಂದು ಪತ್ರವನ್ನು ಬರೆದಿದ್ದರು, ನನಗೆ ಸ್ವಲ್ಪ ಹೆದರಿಕೆಯಾಯಿತು, ನಾನು ಮುಖ್ಯಮಂತ್ರಿಯಾದ ಪ್ರಾರಂಭದಲ್ಲಿ ಚಹಾಗೆ ಬನ್ನಿ ಎಂದು ಕರೆದರೆ ಬರಲಿಲ್ಲ. ಇನ್ನು ಈ ಮೀಟಿಂಗ್ ಕರೆದರೆ ಬರುತ್ತಾರೆಯೇ ಎಂದು ನನಗೆ ಹೆದರಿಕೆಯಾಯಿತು, ಅದಕ್ಕೆ ನಾನು ಕರೆದಿಲ್ಲ ಅಷ್ಟೆ.

ಶ್ರೀ ಸಿದ್ದರಾಮಯ್ಯ: ಇದನ್ನು ಯಾರಾದರೂ ನಂಬುತ್ತಾರೆಯೇ ಹೇಳಿ, ನಾಳೆ ಕರೆಯಿರಿ ಬರುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ: ನಾವು ಕರೆದರೆ ನೀವು ಬರುವುದಿಲ್ಲ

ಶ್ರೀ ಸಿದ್ದರಾಮಯ್ಯ: ಉಮೇಶ್ ಕತ್ತಿಯವರೆ, ನೀವು ಕರೆದರೆ ಬರುತ್ತೇನೆ, ಸದಾನಂದ ಗೌಡರು ಕರೆದರೆ ಬರುವುದಿಲ್ಲ.

ಶ್ರೀ ಉಮೇಶ್ ವಿ. ಕತ್ತಿ: ನಾವು ಕರೆದರೆ ನೀವು ಬರುವುದಿಲ್ಲವೆಂದು ನಮಗೆ ಗೊತ್ತು, ಹಳೆಯ ದೋಸ್ತಿ.

ಶ್ರೀ ಸಿದ್ದರಾಮಯ್ಯ: ಆ ರೀತಿ ಏನಿಲ್ಲ, ನಾಳೆ ಕರೆಯಿರಿ ಬರುತ್ತೇನೆ. ರಾಜ್ಯಪಾಲರಿಗೆ ನಿಮಗೂ ಏತಕ್ಕೆ ಸಂಘರ್ಷ, unnecessarily constitutional crisis ಏಕೆ? ನಮ್ಮನ್ನೆಲ್ಲಾ ಕರೆದು ಚರ್ಚೆ ಮಾಡಿ, ಒಳ್ಳೆಯವರ ಹೆಸರನ್ನು ಕಳುಹಿಸಿಕೊಡೋಣ.ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಎಲ್ಲಾ 'ಬಿ' ರಿಪೋರ್ಟ್ ಹಾಕುವುದಕ್ಕೆ ಶುರು ಮಾಡಿದ್ದಾರೆ, ಡಿ-ನೋಟಿಫಿಕೇಷನ್ ಗೆ ಸಂಬಂಧಿಸಿದಂತೆ ಗೃಹ ಮಂತ್ರಿಯಾದ ಅಶೋಕ್ ಮೇಲೆ 'ಬಿ' ರಿಪೋರ್ಟ್ ಹಾಕಿದ್ದಾರೆ, Upper Bhadra ಕ್ಕೆ ಸಂಬಂಧಿಸಿದಂತೆ ಯಡಿಯೂರಪ್ಪನವರ ಮೇಲೆ 'ಬಿ' ರಿಪೋರ್ಟ್ ಅವರು ಕರೆಕ್ಟ್ ಆಗಿ ಹಾಕಿದ್ದಾರೆಂದು, assuming for the argument sake, but what message would go to the people? See, Lokayukta is not there, the Lokayukta Police are working in the Lokayukta. They are functioning in accordance with the direction of the Home Minister or the Chief Minister. That message will go. In order to prevent this message from going, please do this, ನಾವು ನಿಮಗೆ ಒಳ್ಳೆಯ ಸಲಹೆಯನ್ನು ಕೊಡುತ್ತಿಲ್ಲವೇ?

ಡಾ॥ ಹೆಚ್. ಸಿ. ಮಹದೇವಪ್ಪ: ಲೋಕಾಯುಕ್ತದಲ್ಲಿ ಇನ್ನು Police Manual ಅನ್ನೇ ಮಾಡಿಲ್ಲ. The duties and responsibilities of the police in Lokayukta are not defined and there is no manual yet. You should come out with Lokayukta Manual where the Police have their duties and responsibilities.

Sri Siddaramaiah: The police people who are deputed under Lokayukta is directly under the control of the Home Department, not under the control of Lokayukta. When such being the case, ಲೋಕಾಯುಕ್ತನೂ ಖಾಲಿ ಇದೆ, ಇದರ ಅರ್ಥವೇನೆಂದರೆ, ಯಾರನ್ನೋ ರಕ್ಷಣೆ ಮಾಡುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ ಎಂದಾಗುತ್ತದೆ.****

ಶ್ರೀ ಎಂ. ಶ್ರೀನಿವಾಸ್: ನೀವು ಹೇಳಿದ್ದು****ನೀವು ಚೆನ್ನಾಗಿ ಮಾತನಾಡುತ್ತಿದೀರಿ****ಅದೇ ರೆಕಾರ್ಡ್ ಆಗಿದೆ.

ಉಪಾಧ್ಯಕ್ಷರು: ****ಎನ್ನುವ ಪದ mention ಆಗಿಲ್ಲ.

ಶ್ರೀ ಸಿದ್ಧರಾಮಯ್ಯ: OK ****ಎನ್ನುವ ಪದವಿಲ್ಲ. ಅ ರೀತಿ ಅರ್ಥ ಬರುವ ರೀತಿಯಲ್ಲಿದೆ.

ಶ್ರೀ ಜಗದೀಶ್ ಶೆಟ್ಟರ್: ಆ ರೀತಿ ಅರ್ಥ ಬರುವ ರೀತಿ ನೀವು ಅರ್ಥ ಮಾಡುತ್ತಿದ್ದೀರಿ, ಆ ಪದ ಕಡತದಿಂದ ತೆಗೆದುಕಹಾಕಬೇಕು.

ಶ್ರೀ ಎಂ. ಶ್ರೀನಿವಾಸ್: ಅದನ್ನು ಕಡತದಿಂದ ತೆಗೆದು ಹಾಕಬೇಕು, ಇಲ್ಲವೆಂದರೆ ರೆಕಾರ್ಡ್ ಆಗುತ್ತದೆ.

ಉಪಾಧ್ಯಕ್ಷರು: ಇಲ್ಲ. ನಾನು ಅದನ್ನು ಕಡತದಿಂದ ತೆಗೆಯುತ್ತೇನೆ,

ಶ್ರೀ ಸಿದ್ದರಾಮಯ್ಯ: ನಾನು ಸ್ವಲ್ಪ ಓದೇ ಬಿಡುತ್ತೇನೆ, ಆ ರೀತಿ ಅರ್ಥ ಬರುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಅರ್ಥ ಆ ರೀತಿ ಬರುತ್ತದೆಂದು ಹೇಳುವುದು ಬೇರೆ, ಆದರೆ ನೀವು ಏನು ಹೇಳಿದಿರಿ, ರಿಪೋರ್ಟಿನಲ್ಲಿ ಆ ರೀತಿ ಬರೆದಿದ್ದಾರೆಂದು ನೀವು ಹೇಳಿದಿರಿ.

ಡಾ|| ಹೆಚ್. ಸಿ. ಮಹದೇವಪ್ಪ: ಇಂಗ್ಲೀಷ್ ಪದದ meaning ಕಾಲಕಾಲಕ್ಕೆ ಸಮಯಕ್ಕೆ ಅನುಗುಣವಾಗಿ ಅದು ಅರ್ಥ ಕೊಡುತ್ತದೆ.

ಉಪಾಧ್ಯಕ್ಷರು: ನಮಗೆ ಬೇಕಾದಂತೆ ಮಾಡುವುದಕ್ಕೆ ಬರುವುದಿಲ್ಲ.

***

ಶ್ರೀ ಜಗದೀಶ್ ಶೆಟ್ಟರ್: ರೆಕಾರ್ಡ್ಸ್ straight ಇರಬೇಕು.

ಶ್ರೀ ಎಂ. ಶ್ರೀನಿವಾಸ್: ಮಾನ್ಯ ಉಪಾಧ್ಯಕ್ಷರೆ****ಅದನ್ನು ಕಡತದಿಂದ ತೆಗೆಯಬೇಕೆಂದು ನಾನು ಹೇಳುವುದು.

ಉಪಾಧ್ಯಕ್ಷರು: ಕಡತದಿಂದ ತೆಗೆಯುವುದಕ್ಕೆ ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ: ಆಯಿತಪ್ಪ **** ಎನ್ನುವುದನ್ನು ತೆಗೆದು ಹಾಕಿಬಿಡಿ **** ಅರ್ಥ ಬರುವ ರೀತಿಯಲಿ ಕೊಟ್ಟಿದ್ದರೆ, ಆಗಬಹುದಾ? ನಾನು ಓದಿ ಹೇಳುತ್ತೇನೆ, ನಾನು ಆ ಉದ್ದೇಶದಿಂದ ಹೇಳಿಲ್ಲ. ಆ ಅರ್ಥ ಬರುವ ರೀತಿ ರಿಪೋರ್ಟ್‌ನಲ್ಲಿದೆ ನಾನು ಹೊಸದಾಗಿ ಏನು ಹೇಳುತ್ತಿಲ್ಲ. ಇಲ್ಲಿದೆ ಅದನ್ನು ಹುಡುಕಿಬಿಟ್ಟು ಆಮೇಲೆ ಹೇಳುತ್ತೇನೆ.

*** ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಉಪಾಧ್ಯಕ್ಷರು: Conclude ಮಾಡಿ

ಶ್ರೀ ಸಿದ್ದರಾಮಯ್ಯ: ನಾನು Conclude ಮಾಡುವ ಹಾದಿಯಲ್ಲಿದ್ದೇನೆ, ಆದುದರಿಂದ ನಾನು ಏನು ಹೇಳುತ್ತೇನೆಂದರೆ, ಆ ಮೇಲೆ South West Mining Company ಯವರು ದುಡ್ಡು ಕೊಟ್ಟಿದ್ದರೆಂದು ಇದೆ. Mysore Minerals ಜೊತೆ ಶಾಮೀಲಾಗಿ ಕೋಟಿಗಟ್ಟಲೆ ಹಣ ಲೂಟಿ ಮಾಡಿದ್ದಾರೆಂದು ಇದೆ. ಅವರಿಗೆ, Illegal ಆಗಿ extract ಮಾಡಿದ್ದು, ಅದೆಲ್ಲಾ ತೆಗೆದುಕೊಂಡು ಹೋಗಿ Jindal Mining Company ಕೊಟ್ಟಿದ್ದರೆಂದು ಇದೆ, ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ? ಇವತ್ತಿನವರೆಗೆ ಅವರಿಗೆ ಒಂದು ನೋಟೀಸ್ ಆದರೂ ಕೊಟ್ಟಿದ್ದಾರೆಯೇ? ಇವತ್ತು ಇತ್ತೀಚಿಗೆ ನಿಷೇಧಿಸಿದ ಮೇಲೆ ಹರಾಜೆಲ್ಲಾ ಅವರೇ ತೆಗೆದುಕೊಳ್ಳುತ್ತಿದ್ದಾರೆ. Fine iron melt ಮಾಡುವವರು ಅವರೇ ಬೇರೆ ಯಾರೂ ಇಲ್ಲ. ಸ್ಪಾಂಜ್ ಐರನ್ ಕಂಪನಿಯವರು ಮಾಡುವುದಕ್ಕೆ ಬರುವುದಿಲ್ಲ. ಇವರೇ ಎಲ್ಲವನ್ನೂ ತೆಗೆದುಕೊಳ್ಳೂತ್ತಿದ್ದಾರೆ. ಜಿಂದಾಲ್ ನವರು ಲೂಟಿ ಹೊಡೆಯುತ್ತಿದ್ದಾರೆ. ಒಟ್ಟಾರೆಯಾಗಿ ಸುಪ್ರೀಂ ಕೋರ್ಟ್ ಎಂಪವರನ್ ಕಮಿಟಿಯವರು ನಿಷೇಧಿಸಿದ ಮೇಲೆ ಜಿಂದಾಲ್ ನವರಿಗೆ ಲಾಭವಾಯಿತು. The beneficiary is Jindal. ಅವರು ಎಷ್ಟು ಲೂಟಿ ಹೊಡೆಯುತ್ತಿದ್ದಾರೆಂದು ಜನರಿಗೆ ಗೊತ್ತಾಗಬೇಕೋ ಬೇಡವೋ? ಅದರಿಂದ ಸರ್ಕಾರ should come out. Because as per section 14 of the Lokayukta Act it is deemed to be accepted, it is accepted already. Because they have started auctions. ಅವರು ಕಮಿಟಿ ಮಾಡಿರುವುದೇ accept ಮಾಡಿಕೊಂಡಿದೆಯೆಂದು. ಲೋಕಾಯುಕ್ತದವರಿಗೆ clarification ಕೇಳುವುದಕ್ಕೆ ಎಲ್ಲಿಯೂ ಪ್ರವಿಷನ್ ಇಲ್ಲ. ಇಲ್ಲಿಯವರೆಗೆ ಏನು ಕ್ರಮ ತೆಗೆದುಕೊಂಡಿದ್ದಾರೆ, ಏನು ತೆಗೆದುಕೊಳ್ಳಬೇಕಾಗಿತ್ತು, ಏಕೆ ತೆಗೆದುಕೊಂಡಿಲ್ಲ. ಅನೇಕ ಕಡೆಗಳಲ್ಲಿ ಲೋಕಾಯುಕ್ತ ರಿಪೋರ್ಟ್‌ನಲ್ಲಿ ಇನ್ನೂ further enquiry ಆಗಬೇಕೆಂದು ಹೇಳುತ್ತದೆ. ಕೆಲವು Reserve Bank ಗೆ ಸಂಬಂಧಪಟ್ಟದ್ದು ಇರುತ್ತವೆ. ಕೆಲವೊಂದು money laundering case ಗಳೆಲ್ಲ ಇರುತ್ತವೆ. Parking of money in foreign banks ಎಲ್ಲಾ ಇರುತ್ತವೆ. ಅದಕ್ಕೋಸ್ಕರ the entire matter is to be referred to the CBI. Then only truth will come out. Otherwise, truth will not come out The real offenders will

not be punished. ನಷ್ಟ ಏನಿದೆ ಅದನ್ನು ವಸೂಲು ಮಾಡಬೇಕು. ಯಾರ್‍ಯಾರಿಂದ ಎಷ್ಟೆಷ್ಟು ಜನ ಇದರಲ್ಲಿ ಶಾಮೀಲಾಗಿದ್ದಾರೆ ಎಲ್ಲರಿಂದ ವಸೂಲು ಮಾಡಬೇಕು. Central empowered Committee ಯವರು ಸುಪ್ರೀಂಕೋರ್ಟ್‌ನವರು ಹೇಳಿರುವುದರಿಂದ ವಸೂಲಿ ಮಾಡಬೇಕು. ಇದು 2–3 ರಾಜ್ಯಗಳ ವ್ಯಾಪ್ತಿಗೆ ಬರುತ್ತದೆ. OMC ಇರುವುದರಿಂದ ಅಲ್ಲಿ, ಲೈಸೆನ್ಸ್ ತೆಗೆದುಕೊಂಡಿರುವುದು ಆಂಧ್ರ ಪ್ರದೇಶದಲ್ಲಿ ಇದು export ಆಗಿರುವುದು ಕೃಷ್ಣಪಟ್ಟಂ, ಚೆನ್ನೈ, ವಿಶಾಖಪಟ್ಟಣಂ, ಗೋವಾ ಇಲ್ಲೆಲ್ಲಾ ಹೋಗಿದೆ. ಗೋವಾದಲ್ಲಿ ನಮ್ಮ ಐರನ್ ತೆಗೆದುಕೊಂಡು ಅದಕ್ಕೆ ಅವರು ಕಳಪೆ ಐರನ್ ಅನ್ನು blend ಮಾಡಿಕೊಂಡು ಮಾರಿಕೊಂಡಿದ್ದಾರೆ. ಅದು ಲೆಕ್ಕಕ್ಕೆ ಇಲ್ಲ. ಅದಿರು ರೈಲಿನಲ್ಲಿ ಹೋಗಿದೆ. ರೈಲು ನಿಮ್ಮ ಅಧೀನದಲ್ಲಿ ಬರುವುದಿಲ್ಲ. ಅದಕ್ಕೆ it is a fit case. it has to be referred to CBI only. If at all truth ಹೊರಗಡೆ ಬರಬೇಕಾದರೆ, ಯಾರು ಕಳ್ಳರಿದ್ದಾರೆ, ಅವರಿಗೆ ಶಿಕ್ಷೆ ಆಗಬೇಕಾದರೆ ಅದು ಆಗಬೇಕು. ಇಲ್ಲದೆ ಹೋದರೆ ನಾನು inference draw ಏನು ಮಾಡುತ್ತೇನೆಂದರೆ, ಇವರು ಯಾರಿಗೋ ರಕ್ಷಣೆ ಮಾಡುವುದಕ್ಕಾಗಿ ಈ ರಿಪೋರ್ಟ್ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ಯಾವುದೇ concrete action ತೆಗೆದುಕೊಂಡಿಲ್ಲ. ಇದನ್ನು ಲೋಕಾಯುಕ್ತರವರು ಹೇಳಿದ್ದಾರೆ. ಪುನಃ he has expressed his unhappiness. ಇಷ್ಟೆಲ್ಲಾ ಹೇಳಿದ್ದಾರೆ. ಆದರೂ ಕೂಡ ಇವರು ಜಾಣ ಕುರುಡರ ರೀತಿ ಇರುವುದು ಸರಿಯಲ್ಲ. ಈ ಸರ್ಕಾರ ರಕ್ಷಣೆ ಮಾಡುತ್ತಿದೆ, ಕಳ್ಳರನ್ನು ಖದೀಮರನ್ನು ಅಧಿಕಾರಿಗಳನ್ನು ರಾಜಕಾರಿಣಿಗಳನ್ನು ರಕ್ಷಣೆ ಮಾಡುತ್ತಿದೆ. ಇದಕ್ಕೆ ನಾವು ಅವಕಾಶ ಕೊಡಕೂಡದು. ಈ ರಾಜ್ಯದಲ್ಲಿ ಮುಂದೆ ಇಂತಹ ಕರಾಳ ಲೂಟಿ ಆಗಬಾರದು ರಾಜ್ಯದ ಸಂಪತ್ತನ್ನು ಲೂಟಿ ಹೊಡಯಬಾರದು ಇದು ದೇಶ ದ್ರೋಹ. ಜನರಿಗೆ ಮಾಡತಕ್ಕಂತಹ ವಿಶ್ವಾಸ ದ್ರೋಹ, ಸಮಾಜಕ್ಕೆ ದ್ರೋಹ ಆಗುತ್ತದೆ. ಅದಕ್ಕಾಗಿ ನಾನು ಒತ್ತಾಯ ಮಾಡುತ್ತಿದ್ದೇನೆ. ನಿಮಗೆ ಧನ್ಯವಾದಗಳು.

ಶ್ರೀ ಟಿ. ಬಿ. ಜಯಚಂದ್ರ (ಶಿರಾ): ಮಾನ್ಯ ಉಪಾಧ್ಯಕ್ಷರೆ, ಈಗ ವಿರೋಧ ಪಕ್ಷದ ನಾಯಕರು ಎಲ್ಲಾ ವಿಚಾರಗಳನ್ನು ವಿಷದವಾಗಿ ಹೇಳಿದ್ದಾರೆ. ನಾನು ಸೀಮಿತವಾಗಿರತ್ಕಂತಹ ಕೆಲವು ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ನಾವು ಒಂದು ಕಾನೂನನ್ನು ಮಾಡುತ್ತೇವೆ. ಕರ್ನಾಟಕ ಲೋಕಾಯುಕ್ತ Act, ಅದು 1986ರಲ್ಲಿ notification ಆಗಿದೆ. ಈ ಕಾನೂನು ಈ ಸದನದಲ್ಲಿ ಪಾಸ್ ಆಗಿ Act, ಆಗಿ

ಅದು ಹೊರಬಂದಿದೆ. ಅದು notification ಆಗಿದೆ. ಈ Act ಪ್ರಕಾರ ಯಾರ ಮೇಲೆ action ತೆಗೆದುಕೊಳ್ಳಬಹುದು ಅನ್ನತಕ್ಕಂತದ್ದರ ಬಗ್ಗೆ ನಾನು brief ಆಗಿ ಹೇಳಬೇಕಾದರೆ, it is against the public servant. who is a public servant?

"Public servant" means a person who is or was at any time,-

(a) the Chief Minister;

(b) a Minister;

(c) a member of the State Legislature;

(d) a Government Servant"

ಅಂದರೆ ಈ Act ಇರತಕ್ಕಂಥದ್ದು ಯಾರು public servant ಇದ್ದಾರೋ ಅವರ ಮೇಲೆ action ತೆಗೆದುಕೊಳ್ಳುವುದಕ್ಕೋಸ್ಕರ ಈ ಕಾನೂನು pass ಮಾಡಿರುವಂತಹದ್ದು, ಇದರಲ್ಲಿ ಯಾವ ರೀತಿಯ action ಗಳು? ಲೋಕಾಯುಕ್ತ Act ಅನ್ನು ತರತಕ್ಕಂಥ ಉದ್ದೇಶವೇನೆಂದರೆ,

"allegation" in relation to a public servant means any affirmation that such public servant,-

(a) has abused his position as such public servant to obtain any gain or favour to himself or to any other person or to cause undue harm or hardship to any other person;

(b) was actuated in the discharge of his functions as such public servant by personal interest or improper or corrupt motives;

(c) is guilty of corruption, favouritism, neptism, or lack of integrity in his capacity as such public servant;or

ತಮ್ಮ ಗಮನಕ್ಕೆ ನಾನು ಇದೊಂದನ್ನು ತರುವುದಕ್ಕೆ ಇಚ್ಛೆಪಡುತ್ತೇನೆ.

(d) has failed to act in accordance with the norms of integrity and conduct which ought to be followed by public servants of the class to which he belongs;

The purpose of passing this Act is that. To take action against a public servant where an allegation is made. ಇದನ್ನು ಯಾರು ಮಾಡಿದ್ದು? ಇದನ್ನು enquiry ಮಾಡಲು ತೀರ್ಮಾನ ಮಾಡಿದ್ದು ಯಾರು? The Hob'ble Chief Minister to give an assurance on the floor of the House that an order to ensure highest level of fairness and palpability in an impartial enquiry will be ordered to in the illegalities which have taken place in Bellary. Tumkur and Chirtrdurga. The issues reffered for investigations, what is relevant for us ಅದನ್ನು ಮಾತ್ರ ಹೇಳುತ್ತೇನೆ.

"To fix responsibility and initiate suitable action, both civil and criminal as may be appropriate against all persons found responsible including private contract parties.

To fix responsibility an initiate suitable action against all public servants including the Chief Minister, a Minister and an M.L.A. Minister, including ministers whether in officer or otherwise, its instrumentalities, State-Owned Companies, Corporation and various irregularities .. ."

This is the thing. ಈ ಸದನದಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳಾಗಿರತಕ್ಕಂಥವರು, ಒಂದು fair enquiry ಈ ರಾಜ್ಯದಲ್ಲಿ ಆಗಬೇಕು, Public servant ಯಾರೇ ತಪ್ಪು ಮಾಡಲಿ ಅವರ ಮೇಲೆ action ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡಿದ ಹಿನ್ನೆಲೆಯಲ್ಲಿ, Likayukta headed by the former Supreme Court Judge, Sri Santosh Hegde, he has taken all points. He has submitted two reports, ದಿನಾಂಕ 18-12-2008ರಲ್ಲಿ ಒಂದು ವರದಿ, 27--7-2011 ರಲ್ಲಿ ಇನ್ನೊಂದು ವರದಿ, ಎರಡು ವರದಿಗಳನ್ನು ಕೊಟ್ಟರು. ವರದಿಗಳನ್ನು ಕೊಡಬೇಕಾದಾಗ ಅವರು ಸರ್ಕಾರದಲ್ಲಿಲರತಕ್ಕಂಥ ಎಲ್ಲ ದಾಖಲೆಗಳನ್ನು ಪರಿಶೀಲಿಸಿ, ಪರಿಗಣಿಸಿ ವಿಚಾರ ಮಾಡಿ in his wisdom he has reported. ಒಂದು ರಾಜ್ಯದ ಮುಖ್ಯಮಂತ್ರಿ ಅವರೇ ನೇಮಕ ಮಾಡಿದವರು ಅವರು ಕೊಟ್ಟ ವರದಿಯನ್ನು ನಾವು ಒಪ್ಪುವುದಿಲ್ಲವೆಂದರೆ ಎಷ್ಟು ಸಮಂಜಸ? ಅದನ್ನು ಒಪ್ಪಲೇಬೇಕಾಗುತ್ತದೆ. ಅವರೇ create ಮಾಡಿದಂಥಹದ್ದು. ಮುಖ್ಯಮಂತ್ರಿಗಳೇ

ಲೋಕಾಯುಕ್ತರವರನ್ನು ಅಪಾಯಿಂಟ್ ಮಾಡಿರತಕ್ಕಂತದ್ದು, ಹೀಗಿರುವಾಗ ಇವತ್ತು ಅವರು ಕೊಟ್ಟಿರತಕ್ಕಂಥ ವರದಿಯನ್ನು ಒಪ್ಪುವುದಿಲ್ಲವೆಂದರೆ ಹೇಗೆ? ಇದು ನನ್ನ ಮುಖ್ಯವಾದ ಪ್ರಶ್ನೆಯಿರತಕ್ಕಂಥದ್ದು, ಲೋಕಾಯುಕ್ತರು ಏನು ವರದಿಯನ್ನು ಕೊಟ್ಟಿದ್ದಾರೆ ಎನ್ನತಕ್ಕಂಥದ್ದು ನನಗೆ ಮುಖ್ಯವಲ್ಲ. ಅದರ ಬಗ್ಗೆ ನಾನು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಲೋಕಾಯುಕ್ತರವರು ಕಾನೂನಿನಡಿಯಲ್ಲಿ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. That is according to Section 12 (3) of the Lokayukta Act. ಆ ಪ್ರಕಾರ ಅವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಕೊಟ್ಟ ನಂತರ ಮುಂದೆ ಏನಾಗಬೇಕು? ನಾವೇನೇ ಮಾಡಬೇಕಾದರೂ ಕೂಡ ಕಾನೂನಿನನ್ವಯವೇ ಮಾಡಬೇಕೇ ವಿನಾ ನಾವು ಸ್ವಂತವಾಗಿ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಇವತ್ತು ಯಾವುದೇ ಕಾನೂನು ಪಾಸ ಆದರೂ ಕೂಡ ಅದನ್ನು ಯಾರೇ ಆಗಲಿ ಅವರ advantage ಗೋಸ್ಕರ interpretation ಮಾಡುವುದಾದರೆ ಈ ಸದನ ಅಂಥದ್ದಕ್ಕೆ ಅವಕಾಶ ಕೊಡಬಾರದು. ಲೋಕಾಯುಕ್ತರು ಸೆಕ್ಷನ್ 12(3)ರ ಪ್ರಕಾರ ವರದಿ ಕೊಟ್ಟ ಮೇಲೆ ಸೆಕ್ಷನ್ 12(4) ರಲ್ಲಿ ಬಹಳ ಮುಖ್ಯವಾಗಿ ಏನು ಹೇಳಿದೆಯೆಂದರೆ:

"(4) The Competent authority shall examine the report forwarded to it under sub-section (3) and within three months of the date of receipt of the report, intimate or cause to be intimated to the Lokayukta or the Upalokayukta the action taken or proposed to be taken on the basis of the report"

ನೀವು ಕಾನೂನಿನಲ್ಲಿ ಹೇಳಿರುವ ಪ್ರಕಾರ ಸೆಕ್ಷನ್ 12(4)ರಲ್ಲಿ ಹೇಳಿರುವಂತೆ ಆಕ್ಟ್ ಮಾಡಬೇಕೇ ವಿನಃ ಬೇರೆ ಇನ್ನೇನನ್ನೂ ಮಾಡುವುದಕ್ಕೆ ಬರುವುದಿಲ್ಲ. ಸೆಕ್ಷನ್ 12(4) ರಲ್ಲಿ ಏನು ಹೇಳಲಾಗಿದೆಯೆಂದರೆ ವರದಿ ಕೊಟ್ಟ ಮೂರು ತಿಂಗಳೊಳಗಾಗಿ ನೀವು ವರದಿಯನ್ನು ಒಪ್ಪಬೇಕು ಮತ್ತು ಆ ವರದಿಯ ಮೇಲೆ ನೀವು ಏನು action ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಹೇಳುವುದು ಬಿಟ್ಟರೆ ಬೇರೆ ಇನ್ನೇನೂ ಹೇಳುವುದಕ್ಕೆ ಅವಕಾಶವಿಲ್ಲ. ಲೋಕಾಯುಕ್ತರು ವರದಿ ಕೊಟ್ಟು ಈಗಾಗಲೇ ಆರು ತಿಂಗಳಾಯಿತು. ಆರು ತಿಂಗಳಾಗಿದ್ದರೂ ಕೂಡ ನೀವು ಸೆಕ್ಷನ್ 12(4) ಪ್ರಕಾರ act ಮಾಡುತ್ತಿಲ್ಲ. ದಯಾಮಾಡಿ ನೀವು ಇದನ್ನು ಗಮನಿಸಬೇಕು. ಈ ಸದನ ಇದನ್ನು ಗಮನಿಸಬೇಕು.

ಇನ್ನು ಸೆಕ್ಷನ್ 12(5) ನಲ್ಲಿ ಏನು ಹೇಳಲಾಗಿದೆಯೆಂದರೆ,

" (5) If the Lokayukta or the Upalokayukta is satisfied with the action taken or porposed to be taken on his recommendations or findings referred to in sub-sections (1) and (3), he shall close the case under information to the complainant, the public servant and the competent authority concerned; but where he is not so satisfied and if he considers that the case so deserves, he may make a special report upon the case to the Governor and also inform the competent authority concerned and the complainant."

ಮಾನ್ಯ ಅಧ್ಯಕ್ಷರೆ, ನನ್ನ ಮನವಿ ನಿಮ್ಮಲ್ಲಿ ಏನೆಂದರೆ, ಈಗಾಗಲೇ ಆರು ತಿಂಗಳಾಗಿದೆ ವರದಿ ಕೊಟ್ಟು, Act ಪ್ರಕಾರ ಈ ವರದಿ ಎಲ್ಲಿಗೆ ಹೋಗಬೇಕೆಂದರೆ ಇದು ರಾಜ್ಯಪಾಲರಿಗೆ ಹೋಗಬೇಕು. No, you have no right to refer it back to the Lokayuktha. Under the Act you have to excercise your powers. You have no right. Cabinet, it is a creature of this House. You have to take note of all these things. ಮಾನ್ಯ ಅಧ್ಯಕ್ಷರೆ, ತಾವು ಇನ್ನೊಂದು ಹೇಳಿದಿರಿ,

"(6) The Lokayukta shall present annually a consolidated report on the performance of his functions and that of the Upalokayukta under this Act to the Governor.

(7) On receipt of the special report under sub-section (5), or the annual report under sub-section (6), the Governor shall cause a copy thereof together with an explanatory memorandum to be laid before each House of the State Legislature.

ಮಾನ್ಯ ಅಧ್ಯಕ್ಷರೆ, ನಾವು ಅವರನ್ನು ಕೇಳಿದ್ದೀವಿ, ಅದಕ್ಕೆ ಅವರು ಸದನದ ವಸ್ತುವಲ್ಲ ಇದು ಎಂದು ಹೇಳಿದ್ದಾರೆ, ಆದರೆ ನಾನು ಈ ವರದಿಯನ್ನು ಸದಸದ ವಸ್ತು ಎಂದು ಹೇಳುತ್ತೇನೆ. The Lokayukta report is no longer a report of it. It is before the Government. It is the report of the House. Government has miserably

failed in placing the report before this august House. ನಿಮಗೆ ವಾಪಸ್ಸು ಕಳುಹಿಸುವುದಕ್ಕೆ ಅಧಿಕಾರವಿಲ್ಲ. ಮೂರು ತಿಂಗಳೊಳಗೆ ವರದಿಯನ್ನು ಒಪ್ಪಬೇಕು ಅಥವಾ ಬಿಡಬೇಕು. ಆ ವರದಿಯನ್ನು ನೀವು ರಾಜ್ಯಪಾಲರಿಗೆ ಕಳುಹಿಸಬೇಕು. ರಾಜ್ಯಪಾಲರು ಆ ವರದಿಯನ್ನು ಈ ಸಭೆಯ ಮುಂದೆ ಇಡಬೇಕು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ನಾನು ಏನು ಹೇಳಬೇಕೋ ಅದನ್ನು ಹೇಳಿಬಿಡುತ್ತೇನೆ. Donation ಅನ್ನು ಈ ಪ್ರೇರಣಾ ಸಂಸ್ಥೆಗೆ, ಆಮೇಲೆ ರಾಚೇನಹಳ್ಳಿಯಲ್ಲಿ 20 ಕೋಟಿ ರೂ. ಗಳಿಗೆ ಜಮೀನನ್ನು ತೆಗೆದುಕೊಂಡಿರುವುದು, ಇವೆಲ್ಲಾ ಏನು ಹೇಳುತ್ತದೆಂದರೆ ಜಗದೀಶ್ ಶೆಟ್ಟರ್‌ರವರೆ, From the above facts it is seen the sources of donation given by South West Minings Limited to Prerana Trust has come from JSW in circuitous manner. I has been donated the said money of Rs. 10 crores on 18-3-2011. It raises a question, Why JSW had to transfer money to SWML to give donation to the trust, when it could have directly given it to the trust, when in reality South West MInings Limited was not in a position to make huge donation. From the nature of the transaction, it looks that it is the Jindal Company which is making the donation through SWML. The circumstances in the manner in which the donation has been made gives rise to the suspicion that money is not a donation and it is understood in the common parlance that money paid for some other consideration... ಅದನ್ನು ಏನೆಂದು ಹೇಳಬೇಕು?

ಶ್ರೀ ಜಗದೀಶ್ ಶೆಟ್ಟರ್: ನೀವು ಆಗ ಪದಪ್ರಯೋಗ ಮಾಡಿದ್ದು ಬೇರೆಯದೇ ಆಗಿತ್ತು.

ಶ್ರೀ ಸಿದ್ದರಾಮಯ್ಯ : "Some other coonsideration" ಎಂದರೇನು?

(ಗೂಂದಲ)

ಶ್ರೀ ಜಗದೀಶ್ ಶೆಟ್ಟರ್: ಕೆಲವೊಂದು ವಿಚಾರ ಇಲ್ಲಿ ಚರ್ಚೆ ಮಾಡಿದರೆ sub-judice ಆಗುತ್ತದೆ. ಕೋರ್ಟ್ ಮುಂದೆ ಇವೆ, ಹೈಕೋರ್ಟ್ ಮುಂದೆ ಇವೆ, ಕೆಲವೊಂದು

ಲೋಕಾಯುಕ್ತ ಕೋರ್ಟ್ ಮುಂದೆ ಇವೆ. ಅಲ್ಲಿ ಇವೆಲ್ಲಾ ಪ್ರೂವ್ ಆಗಬೇಕಲ್ಲ, ನೀವು suspicious ಎಂದು ಹೇಳಿದಿರಲ್ಲ, ಅವೆಲ್ಲಾ ಅಲ್ಲಿ ಪ್ರೂವ್ ಆಗಬೇಕು. ಅದನ್ನು ಬಿಟ್ಟು ನೀವು ಇಲ್ಲಿ ಈ ರೀತಿ ಸುಮ್ಮನೆ interpretation ಮಾಡಿ ನೇರವಾಗಿ ಶಬ್ಧಗಳ ಪ್ರಯೋಗ ಮಾಡುವುದು ಸರಿಯಲ್ಲ.

Sri Siddaramiah: ನಾನೇನೂ ಅಂಥ ಶಬ್ಧಗಳ ಪ್ರಯೋಗ ಮಾಡಲಿಲ್ಲ. Very Simple language. This money not a donation, this money has been paid for some other consideration ಎಂದು ಹೇಳಿದ್ದೇನೆ. ನೀವು ಯಾವ ರೀತಿಯಾದರೂ infer ಮಾಡಿಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ಆಗಲೇ ನೀವು ಆ ರೀತಿಯಾಗಿಯೇ ಹೇಳಬಹುದಿತ್ತು. ಆದರೆ ನೀವು ಆಗಲೇ ಹೇಳಿದ್ದು ಬೇರೆಯ ರೀತಿಯದೇ ಆಗಿತ್ತು.

ಶ್ರೀ ಸಿದ್ದರಾಮಯ್ಯ: ಇನ್ನು ಯಾವ ತರಹ ಹೇಳಬೇಕು. ಇನ್ನು ಯಾವ ಭಾಷೆಯಲ್ಲಿ ಹೇಳಬೇಕು ಇವರಿಗೆ, for extraneous consideration, for some other consideration"

ಉಪಾಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಇದನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಟಿ.ಬಿ. ಜಯಚಂದ್ರರವರೆ, ತಾವು ಚರ್ಚೆಯನ್ನು ಮುಂದುವರೆಸಿ.

ಶ್ರೀ ಟಿ.ಬಿ. ಜಯಚಂದ್ರ ಮಾನ್ಯ ಅಧ್ಯಕ್ಷರೆ, ಈ ಲೋಕಾಯುಕ್ತ ವರದಿ ಇಂದು ಈ ಸದನದ ವಸ್ತುವಾಗಿದೆ. ಕಾನೂನು ಪ್ರಕಾರ, Section 13 ಏನು ಹೇಳುತ್ತದೆ ಎಂದರೆ:

13. Public servant to vacate office if directed by Lokayukta, etc.- (1) where after investigation into a complaint the Lokayukta or an Upalokayukta is satisfied that the complaint involving an allegation agianst the public sevant is substantiated and that the public servant concerned should not continue to hold the post held by him, the Lokayukta or the Upalokayukta shall make a declaration to that effect in his report under sub-section (3) of section 12. where the competent authority is the Governor, State Government or the Chief Minister, it may either accept or

reject the declaration after giving an apportunity of being heard. In other cases, the competent authority shall send a copy of such report to State Government which may either accept or reject the declaration after giving apportunity of being heard. If it is not rejected within a period of three months from the date of receipt of the report.

ನಿಮಗೆ option ಎಲ್ಲಿದೆ? You have no option at all except to act according to the Act. It shall be deemed to have been accepted after the expiry of three months. The public servant is indicated by the Lokayukta and you have no business to stay in the Office and what action the Lokayukta can initiate? corruption, nepotism, favortisim, some other consideration ಹೇಳಿದರಲ್ಲ, that comes under nepotism also, favoritism also. Lokayukta within its power has examined everything. I need not go into the detail. Everything is property of the House. What the section 14 says is:

" If after investigation into any complaint the Lokayukta or an Upalokayukta is satisfied that the public servant has committed any criminal offence and should be prosecuted in a court of law for such offence, then, he may pass an order to the effect and initiate prosecution of the public servant concerned and if prior sanction of any authority is required for such prosecution, then, notwithstanding anything contained in any law, such sanction shall be deemed to have been granted by the appropriate authority on the date of such order. ನಾನು ಬೇರೆ ಏನೂ ಹೇಳುತ್ತಿಲ್ಲ. Act ನಲ್ಲಿರುವಂತಹ section 12 to 14 ಏನು ಹೇಳುತ್ತದೆ. ಅಂತ ಹೇಳೀ. Are we not bound by this Act? Is it not bound by the House? Is it not the duty of the House to set it right? ಅವಕಾಶ ಎಲ್ಲಿದೆ ? You have no right except to accept this report and it is already a property of this House. You have no

business to reffer it back to the Lokayukta. ಮಾನ್ಯ ಉಪಾಧ್ಯಕ್ಷರೆ, ನಮಗೆ ಜನ ಅಧಿಕಾರ ಕೊಡುತ್ತಾರೆ. ಸಂವಿಧಾನದ ಪ್ರಕಾರ ಐದು ವರ್ಷಕ್ಕೊಂದು ಬಾರಿ ಸರ್ಕಾರ ಬರುತ್ತದೆ. ನಮ್ಮ ಅವಧಿ ಇರುವುದು ಐದು ವರ್ಷ. ನಾವು ಏನು ಮಾತನಾಡುತ್ತೇವೆ, ಇದನ್ನು ಐದು ವರ್ಷದಲ್ಲಿ ಸಾಬೀತು ಮಾಡಿ ತೋರಿಸಬೇಕು. ನಾವು ಯಾರೇ ಮುಖ್ಯ ಮಂತ್ರಿಗಳಾಗಲಿ ಅವರು ಹೇಳುವ ಭಾಷಣದ ಪ್ರಕಾರ ಈ ನೆಲ ಜಲ, ಈ ವಿಚಾರದಲ್ಲಿ compromise ಇಲ್ಲ. ಅದಕ್ಕೋಸ್ಕರ ಬದ್ಧರಾಗಿದ್ದೇವೆಂದು ಹೇಳುತ್ತೇವೆ. ಎಲ್ಲಿ ಸ್ವಾಮಿ ಇವರ ಬದ್ಧತೆ? ಐದು ವರ್ಷದಲ್ಲಿ ಲೋಕಾಯುಕ್ತ ಎರಡು ವರದಿಗಳನ್ನು ಕೊಟ್ಟಾಯಿತು. ಎರಡು ವರದಿಗಳನ್ನು ಕೊಟ್ಟರೂ ಕೂಡ ಯಾವುದೇ ರೀತಿಯ action ಗಳನ್ನು ತೆಗೆದುಕೊಂಡಿಲ್ಲವೆಂದು ಹೇಳಿದರೆ ನಾವು ಏನು ಹೇಳಬೇಕು? ಮಾನ್ಯ ಅಧ್ಯಕ್ಷರೆ, ಮೊದಲೇ ವರದಿ ಕೊಟ್ಟು ಮೂರು ವರ್ಷವಾಯಿತು. ಮೂರು ತಿಂಗಳೊಳಗಾಗಿ ಸರ್ಕಾರಕ್ಕೆ ಒಂದು ವರದಿ ಕೊಟ್ಟರು. ಆ ವರದಿ ಏನು ಏನ್ನುವುದರ ಬಗ್ಗೆ ನಾನು ಹಿಂದಿನ ವಿಧಾನಸಭೆ ಅಧಿವೇಶನದಲ್ಲಿ ಸಾಕಷ್ಟು ಮಾತನಾಡಿ ಹೇಳಿದ್ದೇನೆ. ನಾವು ನೊಡುತ್ತೇವೆ, ಮಾಡುತ್ತೇವೆ, ಕಳುಹಿಸುತ್ತೇವೆಎನ್ನುವಂತಹ ಮಾಮೂಲಿ bureaucratic answers ಕೊಟ್ಟರು. ಆದರೆ ಮೇಲೆ ಲೋಕಾಯುಕ್ತರು ಏನು comment ಮಾಡುತ್ತಾರೆಂದರೆ, in his remarks he says I has conveyed my conclusions, suggestions, and recommendations but I am sorry to say, apart from filing a few criminal cases against some mining companies, no concrete action has been taken consequent to which illegal mining as pointed out in the report therein above has continued to exist, as a matter of fact, the reasons to be mentioned here below supported by documents, after my first report, illegalities in mining has increased and there is total failure of the supervisory machinery in controlling all illegalities and irregularities. ಲೋಕಾಯುಕ್ತರು ನೀವು ಕೊಟ್ಟಂತಹ ವರದಿ ಮೇಲೆ ಅವರ ಅಭಿಪ್ರಾಯ ಏನು ಕೊಟ್ಟಿದ್ದಾರೆಂದರೆ Is it not binding on you? ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತರು ವರದಿಯನ್ನು ಕೊಟ್ಟರು. ಆ ವರದಿಯ detalis ಗೆ ಹೋಗುವುದು ಬೇಡವೆಂದು ಮಾನ್ಯ ಮುಖ್ಯಮಂತ್ರಿಗಳು ಆದೇಶ ಕೊಟ್ಟರು. ಸಾರ್ವಜನಿಕ ಜೀವನದಲ್ಲಿರತಕ್ಕಂಥವರು, ನಾವು ಸರ್ಕಾರವನ್ನು ಆಳುವವರು ಈ governance is our proprietary. ನಾವೇ deliver ಮಾಡಬೇಕಾಗಿರುವವರು.

ಅವರು ಕೊಟ್ಟಂತಹ ವರದಿಯನ್ನು ನಾವು ಎಷ್ಟರಮಟ್ಟಿಗೆ ಲಕ್ಷ್ಯ ಮಾಡಿದ್ದೇವೆ, ಗಮನಿಸಿದ್ದೇವೆ, ಯಾವ ಪ್ರಮಾಣದಲ್ಲಿ ಇಲ್ಲಿ ಅನ್ಯಾಯವಾಗಿದೆ ಎನ್ನುವುದಕ್ಕೆ ಕೆಲವೇ ಮಾತುಗಳನ್ನು ನಾನು ಹೇಳುತ್ತೇನೆ. Since 6 & 7 to 10 total exports of iron ore from Karnataka origin is about 12.579 crores metric tonnes from the ports of Belekeri, Chennai, Hennanur, Kakinada, Karwar, Krishnapatanam, New mangalore and Vishakapatnam ports. The exports from Marma Goa and Panjim are not included in this quantity. The difference between permit issued and permit export made for the said period comes approximately 2,98,60,647 metric tonnes. This is the illicit iron exported during 2006 and 2007 to 2010 December from the ports mentioned in the para number one. ಅವರೆಲ್ಲ enquiry ಮಾಡಿ ಹೇಳುತ್ತಿರುವ ಮಾತಿದು. ಇದು ನನ್ನ ಮಾತಲ್ಲ, ಲೋಕಾಯುಕ್ತರ ಮಾತು. It is stated that here is an approximate quantity of 32,44,219 metric tonnes of iron ore, where is an ambiguity with regard to the exact destinations of specific Port, however giving a benefit of doubt, this quantity has been subtracted from the total quantity of the export of illicit iron and quantity at para two has been arrived accordingly. ಈ ರಾಜ್ಯದಲ್ಲಿ ಇನ್ನೇನು ಆಗಬೇಕು? Out of 5 financial years for which competitionus have been done, the highest quantity of exports of illicit iron has taken place in the year 2009 & 2010. Who was holding this office then? Who was a public servant in 2009 & 2010 which approximately 1,27,99,396 metric toones. Further it is equally pertinent to note that in the year 2010 & 2011 when permits for destinations of exports were issued for 4 months, the quantity of illicit iron ore was exported were approximately 48 lakh 6 thousand 7 hundred and nineteen metric tonnes which is higher than the illicit iron ore for the year 2006 and 2007.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಉಪಾಧ್ಯಕ್ಷರರೆ, ಲೋಕಾಯುಕ್ತರು ವರದಿಯನ್ನು ಕನ್ನಡದಲ್ಲಿ ಕೊಟ್ಟಿಲ್ಲವೇ? ಕನ್ನಡದಲ್ಲಿರುವ ವರದಿ ಬೇಕು.

Sri T.B. Jayachandra : Almost equal to entire year of 2008 and 2009, this indicates the continuity of magnitude of export of illicit iron ore other than the raid conducted at Belekeri on February 2010 and issued widely reported in the media. The approximate loss to the State Government due to illegal exports comes under export is Rs. 122 crores 28 lakhs and something...

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಉಪಾಧ್ಯಕ್ಷರು ಉತ್ತರ ಹೇಳಬೇಕು.

ಉಪಾಧ್ಯಕ್ಷರು: ಜಯಚಂದ್ರರವರೇ, ಒಂದು ನಿಮಿಷ ನಿಲ್ಲಿಸಿ. ಅವರು ಏನೋ ಕೇಳುತ್ತಾರೆ. ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಲೋಕಾಯುಕ್ತರು ಕನ್ನಡದಲ್ಲಿ ವರದಿಯನ್ನು ಸರ್ಕಾರಕ್ಕೆ submit ಮಾಡಿಲ್ಲವೇ?

ಶ್ರೀ ಟಿ.ಬಿ. ಜಯಚಂದ್ರ: ಮಾಡಿದಾರಲ್ಲ?

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಮಗೆ ಅದು ಬೇಕು. ನಾವು ನಾಳೆ ಅದರ ಬಗ್ಗೆ ಮಾತನಾಡಬೇಕಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರು ತರಿಸಿ ಕೊಡಬೇಕೆಂದು ಹೇಳುತ್ತಿರುವುದು. It is the property of the House.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅದನ್ನು ಏಕೆ ಮುಚ್ಚಿಟ್ಟುಕೊಂಡಿದ್ದೀರಿ? ಅದು public document ಕೊಡಿ. ಅದನ್ನು ಮಾನ್ಯ ಸದಸ್ಯರಿಗೆ ಕೊಡದಿದ್ದರೆ ಹೇಗೆ?

ಉಪಾಧ್ಯಕ್ಷರು: ಅದನ್ನು ಇಲ್ಲಿ lay ಮಾಡಿದ ನಂತರ ಮಾನ್ಯ ಸದಸ್ಯರಿಗೆ ಕೊಡಬಹುದು. ಆಗ ಸದನದ property ಆಗುತ್ತದೆ. ಅದು ಇಲ್ಲಿ lay ಆಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಅದನ್ನು ತರಿಸಿ. ಕಾನೂನು ಪ್ರಕಾರ ವಾಪಸ್ಸು ಕೊಡುವುದಕ್ಕೆ ಬರುವುದಿಲ್ಲ. ಮೂರು ತಿಂಗಳು ಅವರು ಇಟ್ಟುಕೊಳ್ಳುವುದಕ್ಕೆ ಹಕ್ಕಿಲ್ಲ. ಈ ಸದನಕ್ಕೆ ಅದನ್ನು ಕೊಡಬೇಕು. I said even to-day, it is the property of the House.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಈ document ಬೇಕು. ಈ ಸದನದಲ್ಲಿ ನಾವು ಏಕೆ ಬಂದು ಕುಳಿತುಕೊಂಡಿದ್ದೇವೆ?

ಶ್ರೀ ಜಗದೀಶ್ ಶೆಟ್ಟರ್ : ನೋಡಿ ಆ process ನಡೆಯುತ್ತಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನೋಡಿ ಆ process ನಡೆಯುತ್ತಿದೆ. ಮಂಡನೆ ಕೂಡ, along with the action taken report...

ಶ್ರೀ ಟಿ.ಬಿ. ಜಯಚಂದ್ರ: ನೀವು ಏನು ಮಾಡುತ್ತಿದ್ದೀರೆಂದು ನಾನು ಹೇಳುತ್ತಿದ್ದೇನೆ. I will come to that, what action you have taken...

ಶ್ರೀ ಕೆ.ಎಂ. ಶಿವಲಿಂಗೇಗೌಡ: ಸರ್ಕಾರದ ಕಡೆಯಿಂದ ಉತ್ತರ ಬರಲಿಲ್ಲ. ನೀವು ವಿಧಾನ ಸಭಾಧ್ಯಕ್ಷರು, ನೀವೇ ಬೇಕಾದರೂ...

ಉಪಾಧ್ಯಕ್ಷರು: ಇಲ್ಲಿ lay ಅದನಂತರ ಸದನದ property ಆಗುತ್ತದೆ. ನಂತರ ಅದನ್ನು ಕೊಡುವುದಕ್ಕೆ ಅಗುತ್ತದೆ. ಈಗ ಅದರ ಬಗ್ಗೆ ಚರ್ಚೆಯಾಗುತ್ತಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅವರಿಗೆ ವರದಿ ಹೇಗೆ ಸಿಕ್ಕಿತು? ಅದು ನಮಗೂ ಬೇಕು.

ಉಪಾಧ್ಯಕ್ಷರು: ನೀವು ಲೋಕಾಯುಕ್ತರವರ ಕಡೆಯಿಂದ ತೆಗೆದುಕೊಳ್ಳಬೇಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅವರಿಗೆ ಎಲ್ಲಿಂದ ಸಿಕ್ಕಿತು? ನಮಗೂ ಒಂದೊಂದು ಕಾಪಿಯನ್ನು ತರಿಸಿಕೊಡಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಜಯಚಂದ್ರರವರನ್ನು ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಾವು ಮಾನ್ಯ ಜಯಚಂದ್ರರವರನ್ನು ಏಕೆ ಕೇಳಬೇಕು? ನಾನು ಅವರನ್ನು ಕೇಳುವುದಿಲ್ಲ, ಸರ್ಕಾರವನ್ನು ಕೇಳುತ್ತೇನೆ. ವಿಧಾನ ಸಭೆಯ ಅಧ್ಯಕ್ಷರನ್ನು ಕೇಳುತ್ತೇನೆ.

ಉಪಾಧ್ಯಕ್ಷರು: ಸದನದಲ್ಲಿ lay ಆದ ನಂತರ ಅದು ಸದನದ property ಆಗುತ್ತದೆ. ಆ ನಂತರ Members ಗೆ ತಲುಪಿಸುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅದು public property ಆದ ಮೇಲೆ, ಸದನದ property ಆದಮೇಲೆ ನಾವು ಇಲ್ಲೇನೋಡಿ ವಾಪಸ್ಸು ಕೊಟ್ಟು ಹೋಗುತ್ತೇವೆ. ನಮಗೆ ಕೊಡಿ.

ಉಪಾಧ್ಯಕ್ಷರು : ಇಲ್ಲ, ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಇದು ಒಳ್ಳೆ ಚೆನ್ನಾಗಿ ಆಯಿತಲ್ಲಾ ? ಸದನದ property ಆಗದೇ ಇದ್ದರೆ ನಾವು ಏನು ಮಾಡಬೇಕು?

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ, clarification ಕೊಟ್ಟು ಆಗಿದೆ. ಇದರ ಬಗ್ಗೆ ಹೆಚ್ಚು detail ಆಗಿ ಚರ್ಚೆ ಬೇಡ, ಕುಳಿತುಕೊಳ್ಳಿ. It is under consideration. ಚರ್ಚೆಯಾಗುತ್ತಿರುವ ವಿಷಯವೆಂದು ಹೇಳಿದರು. ಈಗ ಅದು ಸದನದ property ಆಗಿಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಮಗೆ ವರದಿ ಸಿಗುವುದು ಹೇಗೆಂಬುದನ್ನು ಹೇಳಿ.

ಉಪಾಧ್ಯಕ್ಷರು: ಲೋಕಾಯುಕ್ತ ಕಚೇರಿಯಿಂದ ತೆಗೆದುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಎಂ.ಎಲ್.ಎ. ಗಳಿಗೆ ಈ ಕಾಪಿ ಸಿಗಲಿಲ್ಲವೆಂದರೆ ಹೇಗೆ?

ಉಪಾಧ್ಯಕ್ಷರು: ತಮಗೆ ಅಧಿಕಾರವಿದೆ, ತಾವು ಲೋಕಾಯುಕ್ತ ಕಚೇರಿಯಿಂದ ತೆಗೆದುಕೊಳ್ಳಿ. ಈ ಸದನದಲ್ಲಿ ಮಂಡನೆಯಾದ ನಂತರ ತಾವು ಕೇಳುವುದಕ್ಕೆ ಬರುತ್ತದೆ. ಇದು ಸದನದಲ್ಲಿ ಮಂಡನೆಯಾಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ದಯವಿಟ್ಟು ಇಲ್ಲಿ ಮಂಡನೆ ಮಾಡಿ ಎಂದು ಹೇಳಿ. ಇದನ್ನು ಏಕೆ ಮುಚ್ಚಿಡುತ್ತೀರಿ ?

ಉಪಾಧ್ಯಕ್ಷರು: ಈಗ ತಾನೇ ಮಾನ್ಯ ಜಗದೀಶ್ ಶೆಟ್ಟರ್ under consideration ಎಂದು ಹೇಳಿದ್ದಾರೆ. ಆ ಕಾಪಿ ಸದನಕ್ಕೆ ಬರಲಿ, ಬಂದ ನಂತರ ನಿಮಗೆ ಕೊಡುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅವರು ಹೇಳುವ point ಅನ್ನು ಹೇಗೆ accept ಮಾಡುತ್ತೀರಿ ?

ಉಪಾಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೇ ಅವರು ಬೇರೆ point ಗಳನ್ನು touch ಮಾಡುತ್ತಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಹಾಗಾದರೆ ಅವರು ಹೇಳುವ ಅಂಕಿ-ಅಂಶಗಳನ್ನು ಹೇಗೆ accept ಮಾಡುತ್ತೀರಿ.

ಉಪಾಧ್ಯಕ್ಷರು: ಅವರು ಅವರ ಬುದ್ಧಿವಂತಿಕೆಯಿಂದ ಅಂಕಿ–ಅಂಶಗಳನ್ನು collect ಮಾಡಿದ್ದಾರೆ, ಅವರು previous records collect ಮಾಡಿದ್ದಾರೆ, ತಾವು ಕೂಡ ಅದನ್ನು collect ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಮ್ಮ ಹತ್ತಿರ ಏನು documents ಇಲ್ಲ, ನಾವು ಏನೆಂದು ಹೇಳಬೇಕು? ನಾವು ಎಲ್ಲಿಂದ ಕಲೆಕ್ಟ್‌ಮಾಡಬೇಕೆಂದು ಹೇಳಿ.

ಉಪಾಧ್ಯಕ್ಷರು: ತಮ್ಮ ಬುದ್ಧಿವಂತಿಕೆಯಿಂದ collect ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಾವು ಎಲ್ಲಿಂದ documents ತೆಗೆದುಕೊಳ್ಳಬೇಕೆಂದು ಹೇಳಿ.

ಉಪಾಧ್ಯಕ್ಷರು : ತಾವು ಎಲ್ಲಿಂದ ತೆಗೆದುಕೊಳ್ಳಬೇಕೋತೆಗೆದುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಮಗೆ ಗೊತ್ತಿಲ್ಲ, ತಾವು ಹೇಳಿ ಎಲ್ಲಿಂದ ತೆಗೆದುಕೊಳ್ಳಬೇಕೆಂದು ಹೇಳಿ.

ಉಪಾಧ್ಯಕ್ಷರು : ಆಯಿತು, ತಿಳಿಸುತ್ತೇವೆ, ಬನ್ನಿ detail ಹೇಳುತ್ತೇವೆ. ತಾವು ಕುಳಿತುಕೊಳ್ಳಿ.

Sri T.B. Jayachandra: The recommendations made by Dr. U.V. Singh and the team are accepted and recommeded for implementation by the government and other competent authorities. Action should also be taken against all those who are involved in the illegal mining under the relevant provisions of the law with the recovery of losses to the government and the penal action should also be resorted to wherever necessary. This is a report under section. 12(3) ಅದು ಎಷ್ಟು ಎಂದರೆ 12,226 ಕೋಟಿ ರೂ.ಗಳು ನಷ್ಟವಾಗಿದೆಯೆಂದು ಲೋಕಾಯುಕ್ತರು ವರದಿಯನ್ನು ಕೊಟ್ಟಾಗ ನಾವು ಎಷ್ಟರ ಮಟ್ಟಿಗೆ ಪ್ರಾಮಾಣಿಕವಾಗಿ ಆ ವರದಿಯನ್ನು ಸ್ವೀಕಾರ ಮಾಡುವಂಥ ಕೆಲಸವನ್ನು ಜನ ಪ್ರತಿನಿಧಿಗಳು, ಸರ್ಕಾರ ಮಾಡಬೇಕಾಗಿತ್ತು, ಅದನ್ನು ಮಾಡಲಿಲ್ಲವೆಂಬ ಆರೋಪವಿದೆ. ಅದು 12,226 ಕೋಟಿ ರೂ ಗಳು ಎಂದರೆ, ಇಲ್ಲಿ ನಾವು ಏನು ಮಾಡಿದ್ದೇವೆ? ನಾವು ನೆಲ ರಕ್ಷಣೆ ಮಾಡಿದ್ದೇವಾ? ಬೊಕ್ಕಸಕ್ಕೆ ಬರಬೇಕಾದ ಹಣವನ್ನು ಕಾಪಾಡಿದ್ದೇವಾ ? The persons who are in the power-public servants-they

are bound by this Act. They are bound by it legal action has to be taken by the government, and by whoever is in power now. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದರು, ನಾವು ಏನು action ತೆಗೆದುಕೊಂಡಿದ್ದೇವೆಂಬ ಮಾತನ್ನು ಹೇಳಿದರು. ನಿಜ, ನಾನು ಒಪ್ಪಿಕೊಳ್ಳುತ್ತೇನೆ. High Level Committee ಯನ್ನು constitute ಮಾಡಿದ್ದೀರಿ, High Level Committee report ಕೊಟ್ಟರು. ಅವರು report ಕೊಟ್ಟ ಮೇಲೆ ಅದರಲ್ಲಿ ಎಲ್ಲಾ ವಿಷಯಗಳು ವಿಷದವಾಗಿವೆ. ಅಧ್ಯಕ್ಷರೆ, ತಾವು ಒಂದು ಸಾರಿ report ತರಿಸಿ ನೋಡಿ. ಅದನ್ನು ಅಧಿಕಾರಿಗಳು ಏನು ಮಾಡಬೇಕು? Under law what can be done ಎಂದು they have suggested the government. Ultimately they say Mr. Jairaj, Additional Chief Secretary to Government the Empowered Committee may be entrusted with the task of ensuring that the various measures proposed by the departments are implemented in full in stipulated time. ಅಂದರೆ ನಮಗೆ ಅಧಿಕಾರ ಕೋಡಿ ಎಂದು ಹೇಳಿದರು. ಇದನ್ನು Empowered Committee ಮಾಡಿದ್ದನ್ನು task of ensuring the various measures, ಅದರ implementation ಗೋಸ್ಕರನಮಗೆ ಅಧಿಕಾರ ಕೊಡಿಯೆಂದು ಕೇಳಿದರು. ಅವರು ಏಕೆ ಅಧಿಕಾರ ಕೊಡಲಿಲ್ಲ ? ಇದರಲ್ಲಿ ಎಲ್ಲರೂ ಇದ್ದಾರೆ, Group-D, Group-C, IAS ಎಲ್ಲರೂ ಇದ್ದಾರೆ. ನಾನು pulic servant ಎಂದು ಹೇಳುತ್ತೇನೆ. ನಾಣು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಮುಖ್ಯಮಂತ್ರಿ, ಮಂತ್ರಿ ಎಂದು ಹೇಳಿದರೆ, ಸಿಟ್ಟು ಬರುತ್ತದೆ. ಅದಕ್ಕೆ ಏಕೆ, public servant under Lokayukta Act, they may be Group C of the Chief Minister is public servant. ಅವರು ಕೇಳಿದಾಗ, ನೀವು ಅವರಿಗೆ ಅಧಿಕಾರವನ್ನು ಏಕೆ ಕೊಡಲಿಲ್ಲ ? ಈ ವರದಿಯನ್ನು ಕೊಟ್ಟು ಎಷ್ಟು ದಿವಸಗಳಾಯಿತು ? ಆ ವರದಿಯಲ್ಲಿರುವಂಥ ವಿಷಯಗಳು ಏನು? ನಾನು ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. Shivalinga Murty, Director of Mines and Geology has submitted an incorrect infromation to the IBM, Government of India regarding the facts released during the period and it means that the Director's with held in disclosing the facts to IBM, Government of India. The case has been referred to the government for necessary action. ಇದೇ ಈ ದಪ್ಪ ಪುಸ್ತಕದಲ್ಲಿರುವುದು. It is referred to the Government

for action. ಯಾವುದೇ ತೆಗೆದುಕೊಳ್ಳಿ. case has been referred to the government for necessary action, case has been referred to the Government of India for necessay action. ಎಲ್ಲಾ ಅಷ್ಟೆ. ಇಲ್ಲಿ ಹೇಳುವುದೇ ಬೇಡ, ಈ ಪುಸ್ತಕದಲ್ಲಿ print ಆಗಿದೆ. ನಿನ್ನೆ ಮೊನ್ನೆ ಏನಾಗಿದೆಯೋ ನನಗೆ ಗೊತ್ತಿಲ್ಲ. ಇದರಲ್ಲಿ 12,228.14 ಕೋಟಿ ರೂ. ಗಳನ್ನು should be recovered from the exporters, suppliers and traders. That is the recommendations of the Lokayukta. The Department of Mines and Geology has issued notice to 46 companies responsible for illegal export of iron ore and 40 of them have replied, Final notice is has been served, The department has proposed to refer this matter to the investigating agency to ascertain the export of iron ore on or before the imposition of ban. What is the difficulty? ನೀವು ಇದನ್ನು ಏಕೆ ಮಾಡಲಿಲ್ಲ? ನೀವು criminal action ತೆಗೆದುಕೊಳ್ಳುವುದನ್ನು ಬಿಡಿ. ಇದನ್ನು ಏಕೆ ಮಾಡಲಿಲ್ಲ. ? ಲೋಕಾಯುಕ್ತದವರು ಕೊಟ್ಟಂಥ ಶಿಫಾರಸ್ಸುಗಳನ್ನು ಯಾವುದನ್ನು ನೀವು ಇವತ್ತು ಒಪ್ಪದೇ ಇರುವಂಥ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇವತ್ತು ಸಾರ್ವಜನಿಕ ಪ್ರತಿನಿಧಿಯಾಗಿರುವವರು ಯಾರೇ ಆಗಲಿ, ಅವರು public servant. ಅವರು ತಪ್ಪು ಮಾಡಿದಂಥ ಸಂದರ್ಭದಲ್ಲಿ ಲೋಕಾಯುಕ್ತ ವರದಿಯನ್ನು ನೀವು ಅನಿವಾರ್ಯವಾಗಿ ಒಪ್ಪಲೇಬೇಕಾಗುತ್ತದೆ. ಅದನ್ನು accept ಮಾಡಬೇಕಾಗುತ್ತದೆ, implement ಮಾಡಬೇಕಾಗುವಂಥ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಇದನ್ನು ನೀವು ಮಾಡದೇ ಮೀನಾ-ಮೇಷ ಎಣಿಸುವುದರಲ್ಲಿ ಅರ್ಥವಿಲ್ಲ. ಇದರಿಂದ ಈ ಸದನದ ಮೇಲೆ ಏನು ಸಂದೇಶ ಹೋಗುತ್ತದೆ ? 12,000 ಕೋಟಿ ರೂ. ಗಳು, ತಾವೇ ಹಣಕಾಸಿನ ಸಚಿವರಾಗಿದ್ದೀರಿ. ನಾವು ನೀರಿಗೊಸ್ಕರ ಮೀಟಿಂಗ್ ಸೇರುವಂಥ ಸಂದರ್ಭದಲ್ಲಿ ಏಳೂವರೆ ಸಾವಿರ ಕೋಟಿ ರೂ. ಗಳನ್ನು ಎಲ್ಲಿಂದ ತರುವುದು? ಎಂದು ಯೋಚನೆ ಮಾಡುತ್ತಿದ್ದೆವು. ನಿಮ್ಮ ಕಳಕಳಿಯನ್ನು ನೋಡಿ ನನಗೆ ಬಹಳ ಮೆಚ್ಚುಗೆಯಾಯಿತು. ನಿಜ, ನೀವು ಒಂದು ಸಾರಿ ಎದ್ದು ನಾನು ವಸೂಲಿ ಮಾಡುತ್ತೇನೆಂದು ಹೇಳಿ, ಈ ಹನ್ನೆರಡು ಸಾವಿರ ಕೋಟಿ ರೂ.ಗಳು ಬಂದರೆ, ನೀರಾವರಿಗೆ ಹಣವಿಲ್ಲವೆಂದು ಏಕೆ ಯೋಚನೆ ಮಾಡಬೇಕು? ನಿಮ್ಮ ಕೈಯಲ್ಲೆ ಬೆಣ್ಣೆ ಇದೆ, ಅದನ್ನು ಕರಗಿಸಿ, ತಾವು ಬೆಣ್ಣೆ ಕೈಯಲ್ಲಿಟ್ಟುಕೊಂಡು ತುಪ್ಪವನ್ನು ಹುಡುಕುವ ಮಟ್ಟಕ್ಕೆ ಬಂದರೆ, ನಾನು ಏನು ಹೇಳಬೇಕು? ಕುರುಡರಾದರೆ ಕುರುಡರು

ಎಂದು ಹೇಳಬಹುದು. ಕಣ್ಣಿದ್ದು ಕುರುಡರಂತೆ ನಟನೆ ಮಾಡುವುದಕ್ಕೆ ಈ ಜಾಣ ಕುರುಡುತನವಿದೆಯಲ್ಲಾ, ಇರದು ನಿಜವಾದ ಕುರುಡುತನವಲ್ಲ. ಇದನ್ನು ಜನರು ಒಪ್ಪುವುದಿಲ್ಲ, ಇದು ಕಾಂಗ್ರೆಸ್ ಹೋರಾಟವಾಗಿದೆ. ನಾವು ಬಳ್ಳಾರಿವರೆಗೂ ನಡೆದೆವು. ಮಾನ್ಯ ಸದಾನಂದ ಗೌಡರೆ, ತಮಗೆ ಗೊತ್ತಿಲ್ಲ. ನಾನು 325 ಕಿ.ಮಿ. ನಡೆದೆ, ನಾನು ಒಂದು ಇಂಚು ಬಿಡಲಿಲ್ಲ, ಕಾಲುಗಳು ದಪ್ಪದಪ್ಪವಾದವು. ಅಂದರೆ ಎಲ್ಲೋ ಒಂದು ಕಡೆ ಸರ್ಕಾರಕ್ಕೆ ಮನದಟ್ಟು ಮಾಡಬೇಕು, ಲೂಟಿಯಾಗುತ್ತಿರುವಂಥ ಹಣ ಯಾರಿಂದ ಲೂಟಿಯಾಗುತ್ತಿದೆ? ಅದು ಕೆಲವೇ ಕೆಲವು ಜನರಿಂದ, ಕೆಲವೇ public servant ನಿಂದ ಆಗುತ್ತಿದೆ. ಇವರನ್ನು ಬಿಡಬೇಕಾ? ಇವರನ್ನು ಯಾವ ಕಾರಣಕ್ಕೋಸ್ಕರ ಬಿಡಬೇಕೆಂದು ಹೇಳಿ ದಯಮಾಡಿ ನಾನು ಹೇಳುತ್ತೇನೆ, ಇವತ್ತು ನೀವು ಅಧಿಕಾರದಲ್ಲಿ ಬಂದು ಕುಳಿತು ಆರು ತಿಂಗಳಾಗಿದೆ. ನೀವು ಪಾರದರ್ಶಕವಾಗಿರುವ ಆಡಳಿತವನ್ನು ಕೊಡಬೇಕು ಎಂದು ಪದೇಪದೇ ಹೇಳುತ್ತೀರಿ. ನಿಜವಾಗಿಯೂ ನೀವು ಲೋಕಾಯುಕ್ತ ವರದಿಯನ್ನು ಒಪ್ಪಿ, ಸೂಕ್ತವಾಗಿರುವ ರಿಕವರಿ ಮಾಡುವಂಥ ಕಾನೂನನ್ನು ಮಾಡಿದರೆ, ಮಧ್ಯಪ್ರದೇಶಲ್ಲಿ ಮಾಡಿದ ರೀತಿಯಲ್ಲಿ ನೀವು ಮಾಡಿದರೆ ಖಂಡಿತವಾಗಿಯೂ ನಿಮಗೆ ಹೆಸರು ಬರುತ್ತದೆ. ಆ ಕೆಲಸವನ್ನು ಜನ ನಿಮ್ಮಿಂದ ನಿರೀಕ್ಷೆ ಮಾಡುತ್ತಿದ್ದಾರೆ. ಅದನ್ನು ನೀವು ಮಾಡಬೇಕು ಎನ್ನುವುದು ನನ್ನ ಬಯಕೆ. ಇದೆಲ್ಲವನ್ನೂ ನಾವು ಮಾಡುವುದಕ್ಕಾಗುವುದಿಲ್ಲ. ಬೇರೆಬೇರೆ ರಾಜ್ಯಗಳಲ್ಲಿ ಸೇರಿಕೊಂಡಿದೆ ಎನ್ನುವುದಾದರೆ, ಈಗಾಗಲೇ ನಮ್ಮ ಸಿದ್ಧರಾಮಯ್ಯನವರು ಹೇಳಿದ ರೀತಿಯಲ್ಲಿ, ಕೊನೆಯ ಪಕ್ಷ ಇದನ್ನು C.B.I. ಗೆ ರೆಫರ್ ಮಾಡಿ. C.B.I. ಗೆ ರೆಫರ್ ಮಾಡುವುದು ಬೇಡ ಎಂದು ಹೇಳಿದ ಮೇಲೆ C.B.I. ನವರು ರೈಡ್ ಮಾಡಿದ ಮೇಲೆ ಎಷ್ಟು ಜನ ಜೈಲಿಗೆ ಹೋಗಲಿಲ್ಲ, ಸ್ವಾಮಿ? ಎಷ್ಟು ರಿಕವರಿಯಾಗಲಿಲ್ಲ? ಈಗ ಚಾರ್ಜ್ ಷೀಟ್ ಹಾಕಿದ್ದಾರೆ. He is the public servant from the State Government. ನಾವು C.B.I. ಗೆ ವಹಿಸಿ ಎಂದು ಏಕೆ ಒತ್ತಾಯ ಮಾಡುತ್ತಿದ್ದೇವೆ ಎನ್ನುವುದನ್ನು ದಯಮಾಡಿ ಅರ್ಥಮಾಡಿಕೊಳ್ಳಿ. ಎಲ್ಲದರಲ್ಲೂ ಕೂಡ ನಮ್ಮ ಪೊಲೀಸಿನವರು action ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. But, they can take action, they can recover. What is needed is dedication from the Government. What is needed is determination from the Government and the Chief Minister like Sadananda

Gowda. ನಾವು ಎಷ್ಟು ದಿವಸ ಅಧಿಕಾರದಲ್ಲಿರುತ್ತೇವೆ ಎನ್ನುವುದು ಮುಖ್ಯವಲ್ಲ. ಅಧಿಕಾರದಲ್ಲಿದ್ದಾಗ ನಾವು ಏನು ಮಾಡಿದೆವು ಎನ್ನುವುದು ಬಹಳ ಮುಖ್ಯ. ದಯಮಾಡಿ, ಈ 12 ಸಾವಿರ ಕೋಟಿ ರೂಪಾಯಿಗಳು ವಾಪಸ್ಸು ಬರುವ ಹಾಗೆ ಮಾಡಿ, ತುಮಕೂರು, ಬೆಂಗಳೂರು, ಕೋಲಾರ ಈ ಎಲ್ಲ ಭಾಗಗಳಿಗೂ ನೀರು ಕೊಡುವಂಥ ಯೋಜನೆಯನ್ನು ಜಾರಿಗೆ ಕೊಟ್ಟರೆ ನೀವು ಚರಿತ್ರೆಯಲ್ಲಿ ಉಳಿದು ಹೋಗುತ್ತೀರಿ. ದಯಮಾಡಿ ನೀವು ಈ ಕೆಲಸವನ್ನು ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ. ಇಲ್ಲ, ನಿಮ್ಮ ಕೈಯಲ್ಲಿ ಅಗುವುದಿಲ್ಲ ಎನ್ನುವುದಾದರೆ ದಯಮಾಡಿ C.B.I.ಗೆ ರೆಫರ್ ಮಾಡಿ, ಅದರ ಮೇಲೆ ಏನಾಗುತ್ತದೋ ನೋಡೋಣ. ಅದರೆ ಏನೇ ಅದರೂ ಕೂಡ loss is a loss, ಅದನ್ನು ರೆಕವರ್ ಮಾಡುವುದು ನಿಮ್ಮ ಅಧಿಕಾರ. ನೀವು ಕಾನೂನು ತರಲೇ ಬೇಕು, ಅದನ್ನು ಸದನ ಒಪ್ಪುತ್ತದೆ, ನಾವು ನಿಮ್ಮ ಜೊತೆಯಲ್ಲಿ ಇರುತ್ತೇವೆ ಎನ್ನುವ ಮಾತನ್ನು ಹೇಳಿ, ನನ್ನ ಬೇಡಿಕೆಗಳನ್ನಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ವಂದಿಸುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ನಾಳೆ question hour ಆದ ತಕ್ಷಣ ನಾನು ಇದಕ್ಕೆ ಉತ್ತರ ಕೊಡುತ್ತೇನೆ. ನನಗೆ ಖುಷಿಯಾಯಿತು, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಉಪ ನಾಯಕರು ಬಳ್ಳಾರಿಗೆ ನಡೆದು ಕಬ್ಬಿಣದ ಹಾಗೆ ಗಟ್ಟಿಯಾಗಿದ್ದಾರೆ. ಇಷ್ಟು ಹೊತ್ತು, ಇಷ್ಟು ಸುಧೀರ್ಘವಾಗಿ ಅವರಿಗೆ ಪ್ರಸೆಂಟೇಷನ್ ಮಾಡಲು ಶಕ್ತಿ ಬಂದದ್ದೇ ಬಹುಶಃ ಅವರು ಅಲ್ಲಿಗೆ ನಡೆದದ್ದರಿಂದ ಎಂದು ನಾನು ಭಾವಿಸುತ್ತಿದ್ದೇನೆ. ನಾಳೆ ಪ್ರಶ್ನೋತ್ತರ ಆದ ತಕ್ಷಣ ಈ ವಿಷಯಕ್ಕೆ ನಾನು ಉತ್ತರ ಕೊಡುತ್ತೇನೆ.

ಉಪಾಧ್ಯಕ್ಷರು: ನಿಯಮ 69ರ ಮೇರೆಗೆ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿಯ ಮೇಲಿನ ಚರ್ಚೆ ಮುಕ್ತಾಯವಾಗಿದೆ.

ಈಗ ಸಭೆಯು ಮುಕ್ತಾಯವಾಗಿ, ನಾಳೆ ಬೆಳಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಸಂಜೆ 5 ಗಂಟೆ ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 7ನೇ ಫೆಬ್ರವರಿ ಮಾಹೆ 2012ರ ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು).